
Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–41 ಅಕ್ಟೋಬರ್ 9–15, 2023 ಪುಟ 16 ರೂ. 10/–
Volume-17 Issue-41 October 9-15, 2023 Pages:16 Price: 10/-



NEWS CLICK

ನ್ಯೂಸ್ ಕ್ಲಿಕ್ ಕಟು ಸತ್ಯಗಳ ಮಂಡನೆ

ಪ್ರಜಾಪ್ರಭುತ್ವ ಧ್ವನಿ ದಮನಿಸುವ ಪ್ರತಿಕಾರದ ದಾಳಿ






ಶಿವಮೊಗ್ಗ ಗಲಭೆ: ಮತಾಂಧರ ಯೋಜಿತ ಕೃತ್ಯ

ಸಂಕಷ್ಟದಲ್ಲಿ ಆರ್ಥಿಕತೆ

ಶ್ರೀಮಂತರ ಲಾಭಕ್ಕಾಗಿ ಅರಣ್ಯ ನಾಶ



ಕೃಷಿಗೆ ಬೆನ್ನೆಲುಬಾಗಿದ್ದ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್

ಆದರೆ ಬೆಳೆಗಳ ಉತ್ಪಾಧನೆಯಲ್ಲಿ ಸರಕಾರಗಳು ಸಮರ್ಪಕ ಯೋಜನೆ ಅನುಸರಿಸಿಲ್ಲ. ಪರಿಣಾಮವಾಗಿ "ಆಹಾರ ಭದ್ರತೆ" ಎಲ್ಲಾ ನಾಗರಿಕರಿಗೆ ವಿಸ್ತರಿಸಲಾಗಿಲ್ಲ. ಈ ವಿಷಯವನ್ನು ಅಂತಾರಾಷ್ಟ್ರೀಯ ಸಂಸ್ಥೆ (ಗಓಔ) ತನ್ನ ಆಹಾರ ಮತ್ತು ಕೃಷಿ ಇಲಾಖೆ (ಈಂಔ) ಮೂಲಕ ಗುರುತಿಸುತ್ತ ಬಂದಿದೆ. ಸ್ವಾಮಿನಾಥನ್ ಅವರಂತಹ ಕೃಷಿ ತಜ್ಞರು ಕೂಡ ಇದನ್ನು ಪದೇ ಪದೇ ಸರ್ಕಾರದ ಗಮನಕ್ಕೆ ತರುತ್ತಲೇ ಇದ್ದಾರೆ. "ಸಹಸ್ರಮಾನದ ಅಭಿವೃದ್ಧಿ ಗುರಿಗಳು" ಪ್ರಕಟಣೆಯ ಮೂಲಕ ಭಾರತದಂತಹ ಅಭಿವೃದ್ಧಿಶೀಲ ರಾಷ್ಟಗಳಗೆ 'ಶೂನ್ಯ ಹಸಿವು' ಗುರಿ ತಲುಪುವ ದಾರಿಯನ್ನು ಸೂಚಿಸಿದ್ದಾರೆ. ಸಂಸತ್ತಿನ ನಾಮನಿರ್ದೇಶಿತ ಸದಸ್ಯರಾಗಿ ಕೂಡಾ ಸ್ವಾಮಿನಾಥನ್ ಅವರು ಈ ವಿಷಯವನ್ನು ಸರ್ಕಾರಕ್ಕೆ ವಿವರಿಸಿದ್ದಾರೆ. ಇದರ ಪರಿಣಾಮವಾಗಿ 2013ರಲ್ಲಿ ಭಾರತದ "ಆಹಾರ ಭದ್ರತಾ ಕಾಯಿದೆ"ಯನ್ನು ಜಾರಿಗೆ ಬಂದಿದೆ. ಅಲ್ಲದೆ ಉದ್ಯೋಗ ಖಾತ್ರಿ ಕಾಯಿದೆಯಿಂದ ''ಆಹಾರ''ವನ್ನು ಹಕ್ಕಾಗಿ ಪರಿಗಣಿಸಲಾಗಿದೆ.

ಭಾರತ ದೇಶವನ್ನು "ಶೂನ್ಯ ಹಸಿವು" ಮಟ್ಟಕ್ಕೆ ತರಲು ತಮ್ಮ ಜೀವನದುದ್ದಕ್ಕೂ ಶ್ರಮಿಸಿದ ಪ್ರೊ.ಎಂ.ಎಸ್. ಸ್ವಾಮಿನಾಥನ್ ಅವರು ಸೆಪ್ಟೆಂಬರ್ 28 ರಂದು ಚೆನ್ನೈನಲ್ಲಿ ನಿಧನರಾದರು. ಪರಿಪೂರ್ಣ ಉಪಯುಕ್ತತೆಯ ಜೀವನ ನಡೆಸಿದ ಈ ವಿಜ್ಞಾನಿಯನ್ನು ಮುಂದಿನ ತಲೆಮಾರುಗಳು ಮರೆಯುವುದಿಲ್ಲ. ಅವರ ಕಠಿಣ ಪರಿಶ್ರಮ ಮತ್ತು ವೈಜ್ಞಾನಿಕ ತಿಳುವಳಿಕೆ ಅನೇಕರಿಗೆ ಸ್ಫೂರ್ತಿಯಾಗಿದೆ. ಪ್ರೊ.ಸ್ವಾಮಿನಾಥನ್ ಅವರಿಗೆ ಹಲವು ಪ್ರಶಸ್ತಿ, ವಿಶ್ವವಿದ್ಯಾನಿಲಯದ ಡಾಕ್ಟರೇಟ್, ಹಲವು ದೇಶಗಳ ಕೃಷಿ ಅಕಾಡೆಮಿಗಳಿಗೆ ಸಲಹೆಗಾರ ಸ್ಥಾನಮಾನ ಸಿಕ್ಕಿರುವುದು ಒಂದೆಡೆಯಾದರೆ... ರಾಷ್ಟ್ರೀಯ ರೈತ ಆಯೋಗದ ಅಧ್ಯಕ್ಷರಾಗಿ ರೈತರ ಕೃಷಿ ರಕ್ಷಿಸುವ ಉದ್ದೇಶದಿಂದ ಸರ್ಕಾರದ ಮುಂದೆ ಮಂಡಿಸಿದ ಐದು ವರದಿಗಳು ಮತ್ತೊಂದು ಹೆಜ್ಜೆ. ಅಲ್ಲದೆ, ರಾಜ್ಯಸಭಾ ಸದಸ್ಯರಾಗಿ ರೈತ ಮಹಿಳಾ ರೈತರ ಹಕ್ಕುಗಳ ಕುರಿತು ಮಾಡಿದ ಭಾಷಣವನ್ನು ಮೌಲ್ಯಯುತವೆಂದು ನಮ್ಮ ಸರ್ಕಾರಗಳು ಪರಿಗಣಿಸಬೇಕು!

ಅನೇಕಮಂದಿ ಸಾಮಾಜಿಕ–ಆರ್ಥಿಕ ತಜ್ಞರ ಸಲಹೆಯ ಆಧಾರದ ಮೇಲೆ ರಾಷ್ಟ್ರೀಯ ರೈತ ಆಯೋಗದ ಮೂಲಕ ಸರ್ಕಾರವು ತಂದಿರುವ ಸುಧಾರಣೆಗಳು ಆಚರಣೆ ಅನುಷ್ಠಾನಗೊಳ್ಳುತ್ತವೆ ಎಂದು ಆಶಿಸಿದರು. 2017ರಲ್ಲಿ ಪ್ರೊ. ಸ್ವಾಮಿನಾಥನ್ ಸಂಶೋಧನಾ ಸಂಸ್ಥೆ 'ಅಖಿಲ ಭಾರತ ಕಿಸಾನ್ ಸಭಾ'ಮುಖ್ಯ ಕಾರ್ಯದರ್ಶಿ ಹನನ್ ಮುಲ್ಲಾ ಉಪಸ್ಥಿತಿಯಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಆ ಅಭಿಪ್ರಾಯವನ್ನು ವ್ಯಕ್ತಡಿಸಿದರು. ಹಲವಾರು ಸಂದರ್ಭಗಳಲ್ಲಿ ತಾವು ಆಶಿಸಿದ ಕೃಷಿ ಕ್ಷೇತ್ರದ ಬದಲಾವಣೆಗಳು, ಸರ್ಕಾರದ ಪಾತ್ರ ಮತ್ತು ಕುಟುಂಬ (ರೈತ) ಕೃಷಿಯನ್ನು ರಕ್ಷಿಸುವ ಅಗತ್ಯತೆಯ ಬಗ್ಗೆ ಮಾಧ್ಯಮಗಳ ಮುಂದೆ ಚರ್ಚಿಸಿದರು. ಅನೇಕ ಲೇಖನಗಳನ್ನು ಬರೆದರು ಮತ್ತು ಪುಸ್ತಕಗಳನ್ನು ರಚಿಸಿದರು.

ವಿಶ್ವ ಆಹಾರ ಕೃಷಿ ಸಂಸ್ಥೆಯ ಸಹಯೋಗದೊಂದಿಗೆ ಹಲವಾರು ಅಂತರರಾಷ್ಟ್ರೀಯ ಚರ್ಚಾ ವೇದಿಕೆಗಳನ್ನು ಆಯೋಜಿಸಿ, ಅಭಿವೃದ್ಧಿಶೀಲ ರಾಷ್ಟಗಳಿಗೆ ಕೃಷಿ ಯೋಜನೆಗಳನ್ನು ಸೂಚಿಸಿದರು. ತಮ್ಮ ಸಂಸ್ಥೆಯ ಸಂಶೋಧನಾ ವ್ಯಾಪ್ತಿಯನ್ನು ಕ್ರಮೇಣ ವಿಸ್ತರಿಸುತ್ತಾ ಬಂದಿದ್ದಾರೆ. ತಮಿಳುನಾಡಿನ ಜೊತೆಗೆ, ಒಡಿಶಾ, ಕೇರಳ ಮತ್ತು ಆಂಧ್ರಪ್ರದೇಶದಂತಹ ರಾಜ್ಯಗಳಲ್ಲಿ ಸ್ಥಳೀಯ ಕೃಷಿ ಸಮಸ್ಯೆಗಳ ಕುರಿತು ಅಧ್ಯಯನಗಳನ್ನು ನಡೆಸಿದರು.

ಸ್ವಾತಂತ್ರ್ಯ ನಂತರದ ಮೊದಲ ಎರಡು ದಶಕಗಳಲ್ಲಿ ಆಹಾರದ ಕೊರತೆ ಎದುರಾಯಿತು. ನಂತರದ ದಶಕದ ಯೋಜನೆಯು ಆಹಾರಧಾನ್ಯ ಉತ್ಪಾದನೆಯಲ್ಲಿ ದೇಶವನ್ನು ಉಳಿಸಿಕೊಳ್ಳಲು ಅನುವು ಮಾಡಿಕೊಟ್ಟಿದೆ. ಉದ್ಯಮಿಗಳ ಒಳಹರಿವಿನ ಹಿಂದಿನ ಪ್ರೇರಕ ಶಕ್ತಿಯಾಗಿ ಭಾರತ

ಪ್ರೊ.ಎನ್. ವೇಣುಗೋಪಾಲ ರಾವ್

ಹೊರಹೊಮ್ಮಿದೆ.

ಇದರ ಹಿಂದೆ ಅಂದಿನ ರಾಜಕೀಯ ನಾಯಕತ್ವ – ಜವಾಹರಲಾಲ್ ನೆಹರು, ಲಾಲ್ ಬಹದ್ದೂರ್ ಶಾಸ್ತ್ರಿ, ಇಂದಿರಾ ಗಾಂಧಿ, ಸುಬ್ರಮಣ್ಯಂ–ರಿಚಾರಿಯಾ, ವೈ.ವಿ.ರಾವ್, ಗಂಗಾಪ್ರಸಾದ ರಾವ್, ಸ್ವಾಮಿನಾಥನ್ ಮತ್ತು ಇತರ ವಿಜ್ಞಾನಿಗಳ ಸಹಕಾರದಿಂದ ರೂಪಿಸಿದ ತಂತ್ರಜ್ಞಾನವು ಕೃಷಿ ಕ್ಷೇತ್ರವನ್ನು ಬದಲಾಯಿಸಿದೆ. ಇದನ್ನೇ ವಿಲಿಯಂ ಗ್ಯಾಡ್ ಮತ್ತು ನಾರ್ಮನ್ ಬೋರ್ಲಾಗ್ ಅವರಂತವರು "ಹಸಿರು ಕ್ರಾಂತಿ" ಎಂದರು. ಗೋಧಿ, ಅಕ್ಕಿ, ಮೆಕ್ಕೆಜೋಳ ಮತ್ತು ತೊಗರಿಯಂತಹ ಪ್ರಮುಖ ಆಹಾರ ಬೆಳೆಗಳ ಉತ್ಪಾದನೆಯು ದೇಶದಲ್ಲಿ ಒಂದು ತಿರುವು ಕಾಣುವಂತೆ ಮಾಡಿದೆ. ಸ್ವಾಮಿನಾಥನ್ ಅವರಿಗೆ ಮೊದಲ "ವಿಶ್ವ ಆಹಾರ ಪ್ರಶಸ್ತಿ"ಯನ್ನು ನೀಡಲಾಯಿತು. ಆಹಾರ ಕ್ಷೇತ್ರದ ವಿವಿಧ ಶಾಖೆಗಳು ವಿಸ್ತಾರಗೊಂಡು, ದೇಶವು ಕೃಷಿ ಸಂಶೋಧನಾ ಕ್ಷೇತ್ರಗಳಿಗೆ ನೆಲೆಯಾಗಿ ಮಾರ್ಪಟ್ಟಿದೆ. 21 ನೇ ಶತಮಾನದ ವೇಳೆಗೆ, ಇದು 300 ಮಿಲಿಯನ್ ಟನ್ ಆಹಾರ ಧಾನ್ಯಗಳನ್ನು ಉತ್ಪಾದಿಸಲು ಸಾಧ್ಯವಾಯಿತು.

ಆದರೆ ಬೆಳೆಗಳ ಉತ್ಪಾಧನೆಯಲ್ಲಿ ಸರಕಾರಗಳು ಸಮರ್ಪಕ ಯೋಜನೆ ಅನುಸರಿಸಿಲ್ಲ. ಪರಿಣಾಮವಾಗಿ "ಆಹಾರ ಭದ್ರತೆ" ಎಲ್ಲಾ ನಾಗರಿಕರಿಗೆ ವಿಸ್ತರಿಸಲಾಗಿಲ್ಲ. ಈ ವಿಷಯವನ್ನು ಅಂತಾರಾಷ್ಟ್ರೀಯ ಸಂಸ್ಥೆ (UNO) ತನ್ನ ಆಹಾರ ಮತ್ತು ಕೃಷಿ ಇಲಾಖೆ (FAO) ಮೂಲಕ ಗುರುತಿಸುತ್ತ ಬಂದಿದೆ. ಸ್ವಾಮಿನಾಥನ್ ಅವರಂತಹ ಕೃಷಿ ತಜ್ಞರು ಕೂಡ ಪದೇ ಪದೇ ಸರ್ಕಾರದ ಗಮನಕ್ಕೆ ತರುತ್ತಲೇ ಇದ್ದಾರೆ. "ಸಹಸ್ರಮಾನದ ಅಭಿವೃದ್ಧಿ ಗುರಿಗಳು" ಪ್ರಕಟಣೆಯ ಮೂಲಕ ಭಾರತದಂತಹ ಅಭಿವೃದ್ಧಿಶೀಲ ರಾಷ್ಟಗಳಿಗೆ 'ಶೂನ್ಯ ಹಸಿವು' ಗುರಿ ತಲುಪುವ ದಾರಿಯನ್ನು ಸೂಚಿಸಿದ್ದಾರೆ. ಸಂಸತ್ತಿನ ನಾಮನಿರ್ದೇಶಿತ ಸದಸ್ಯರಾಗಿ ಕೂಡಾ ಸ್ವಾಮಿನಾಥನ್ ಅವರು ಈ ವಿಷಯವನ್ನು ಸರ್ಕಾರಕ್ಕೆ ವಿವರಿಸಿದ್ದಾರೆ. ಇದರ ಪರಿಣಾಮವಾಗಿ 2013ರಲ್ಲಿ ಭಾರತದ "ಆಹಾರ ಭದ್ರತಾ ಕಾಯಿದೆ"ಯನ್ನು ಜಾರಿಗೆ ಬಂದಿದೆ. ಅಲ್ಲದೆ ಉದ್ಯೋಗ ಖಾತ್ರಿ ಕಾಯಿದೆಯಿಂದ "ಆಹಾರ"ವನ್ನು ಹಕ್ಕಾಗಿ ಪರಿಗಣಿಸಲಾಗಿದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆಯು ಸರ್ಕಾರದ ಪ್ರಮುಖ ನಿರ್ವಹಣಾ ಜವಾಬ್ದಾರಿಯಾಗಿದೆ. ಆದರೆ ಪೌಷ್ಟಿಕ ಆಹಾರದ ಲಭ್ಯತೆಯ ವಿಷಯದಲ್ಲಿ ಭಾರತ ಇನ್ನೂ ಹಿಂದುಳಿದಿದೆ ಎಂದು ಅಂಕಿಅಂಶಗಳು ಸೂಚಿಸುತ್ತಲೇ ಇವೆ. ದೇಶದ ಗಣನೀಯ ಸಂಖ್ಯೆಯ (18 ಪ್ರತಿಶತ) ಜನರನ್ನು ಇನ್ನೂ ಆಹಾರ ಅಭದ್ರತೆ ಕಾಡುತ್ತಿದೆ. ಇದಕ್ಕೆ ಕಾರಣಗಳೇನು ಎಂಬುದು ಚರ್ಚೆಗೆ ಗ್ರಾಸವಾಗಿವೆ.

ಆಹಾರ ಬಿಕ್ಕಟ್ಟಿನ ವಿಶ್ವ ವರದಿ–2022 ರ ಪ್ರಕಾರ, ಸುಮಾರು 80 ಕೋಟಿ ಜನರಿಗೆ ಆಹಾರವು ಕೈಗೆಟುಕದಷ್ಟು ದೂರವಿದೆ. ವಿಶೇಷವಾಗಿ ಜಗತ್ತಿಗೆ ಎದುರಾದ 'ಕರೋನಾ' ದಾಳಿಯ ನಂತರದ ಹಂತಗಳಲ್ಲಿ ಹಸಿವಿನಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ ಎಂದು ಅಂಕಿಅಂಶಗಳು ತೋರಿಸುತ್ತದೆ. ಅದಕ್ಕೆ ಕಾರಣ ಜಗತ್ತನ್ನು ಆವರಿಸಿರುವ ಆರ್ಥಿಕ ಬಿಕ್ಕಟ್ಟು. ಪರಿಣಾಮವಾಗಿ, ಹೆಚ್ಚುತ್ತಿರುವ ಆಹಾರ ಬೆಲೆಗಳು, ಹೆಚ್ಚುತ್ತಿರುವ ಉತ್ಪಾದನಾ ವೆಚ್ಚ ಮತ್ತು ಹವಾಮಾನ ಬಿಕ್ಕಟ್ಟು ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತಿದೆ. ಇವುಗಳ ಜೊತೆಗೆ, ಉಕ್ರೇನ್ ಯುದ್ಧವು ಹಸಿವಿನಿಂದ ಸಾವಿನ ಸಂಖ್ಯೆಯನ್ನು ಹೆಚ್ಚಿಸಿದೆ. ಆಹಾರದ ಕೊರತೆಯನ್ನು ಎದುರಿಸುತ್ತಿರುವ ಜನರ ಅಂಕಿಅಂಶಗಳ ಪ್ರಕಾರ ಆಫ್ರಿಕಾ ಮತ್ತು ಏಷ್ಯಾದ ದೇಶಗಳು ಪ್ರಮುಖವಾಗಿವೆ. ಇವುಗಳಲ್ಲಿ ಭಾರತ, ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಉಪಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ಸ್ವಾಮಿನಾಥನ್ ಸೂಚಿಸಿದ ಪ್ರಮುಖ ಪರಿಹಾರಗಳು

ಆಹಾರ ಭದ್ರತೆ ವ್ಯಾಖ್ಯಾನದ ಪ್ರಕಾರ, ಎಲ್ಲಾ ಜನರಿಗೂ ದೈಹಿಕವಾಗಿ ಮತ್ತು ಆರ್ಥಿಕವಾಗಿ ಸಾಕಷ್ಟು ಪ್ರಮಾಣದಲ್ಲಿ ಪೌಷ್ಟಿಕ ಆಹಾರ ಒದಗಿಸುವಂತಾಗಬೇಕು. ಅಂದರೆ, ನಾಗರಿಕರು ಆರೋಗ್ಯಕರವಾಗಿ, ಕರ್ತವ್ಯ ನಿರ್ವಹಣೆಯ ದೃಷ್ಟಿಯಿಂದ ಪ್ರಯೋಜನ ಪಡೆಯಬೇಕು. ಆಹಾರ ಭದ್ರತಾ ಕಾಯಿದೆ ಜಾರಿಗೆ ಬಂದ ಭಾರತದಲ್ಲೂ ಇದು ಸಾಧ್ಯವಾಗಲಿಲ್ಲ ಎಂದೇ ಹೇಳಬೇಕಿದೆ. ಸಾಕಷ್ಟು ಆಹಾರ ಲಭ್ಯತೆ ಹೊಂದಿರುವ ದೇಶದಲ್ಲಿ ಮಗುವಿನ ಬೆಳವಣಿಗೆ, ಮಹಿಳೆಯರ ರಕ್ತದ ಫಲವತ್ತತೆ, ಎಲ್ಲಾ ನಾಗರಿಕರ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯವು ಸರಿಯಾಗಿದೆ ಎಂದು ಕೆಲವು ಯುರೋಪಿಯನ್ ರಾಷ್ಟಗಳ ಅಂಕಿಅಂಶಗಳು ಸೂಚಿಸುತ್ತವೆ. ಆದರೆ, ಭಾರತದಂತಹ ದೇಶಗಳಲ್ಲಿ ಮಕ್ಕಳ ಬೆಳವಣಿಗೆ ಸರಿಯಾಗಿಲ್ಲ, ಮಹಿಳೆಯರಲ್ಲಿ ರಕ್ತಹೀನತೆ ಆತಂಕಕಾರಿಯಾಗಿದೆ ಎಂದು ಕಂಡು ಬಂದಿದೆ. ಅದೇ ರೀತಿ ಪೌಷ್ಠಿಕಾಂಶದ ಮಟ್ಟ ಹೆಚ್ಚಾಗಿ, ಬೊಜ್ಜು ಇರುವವರ ಸಂಖ್ಯೆಯೂ ಹೆಚ್ಚುತ್ತಿದೆ.

ಇದರಿಂದ 2030ರ ವೇಳೆಗೆ ನಮ್ಮ ದೇಶದ ಜನಸಂಖ್ಯೆಯಲ್ಲಿ ಆರೋಗ್ಯ ಸಮಸ್ಯೆಗಳ ಸುಳಿಯಲ್ಲಿ ಸಿಲುಕುವವರ ಸಂಖ್ಯೆ ಹೆಚ್ಚಾಗಲಿದೆ ಎಂಬುದು ತಿಳಿಯುತ್ತದೆ. ಇದರ ಹಿಂದೆ, ಆರ್ಥಿಕ ಅಸಮಾನತೆಗಳು, ಲಿಂಗ ಅಸಮಾನತೆಗಳು, ನಗರ ಮತ್ತು ಗ್ರಾಮೀಣ ಜೀವನಶೈಲಿಗಳಲ್ಲಿನ ವ್ಯತ್ಯಾಸಗಳು ಮತ್ತು ಆಡಳಿತ ವೈಫಲ್ಯಗಳು ಗಮನಾರ್ಹವಾಗಿವೆ. ಈ ಕಾರಣದಿಂದಾಗಿ,

1. ಆಹಾರದ ಅಭದ್ರತೆಯ ವಲಯದಲ್ಲಿ ಸಿಲುಕಿರುವ ವರ್ಗಗಳನ್ನು ಸ್ಪಷ್ಟವಾಗಿ ಗುರುತಿಸಬೇಕು.
2. ಆ ಜನರ ಸಾಂಪ್ರದಾಯ ಪದ್ಧತಿಗೆ ತಕ್ಕಂತೆ ಪೌಷ್ಠಿಕ ಆಹಾರಗಳನ್ನು ನೀಡಬಲ್ಲ ಯೋಜನೆಗಳನ್ನು ಸರ್ಕಾರ ಜಾರಿಗೊಳಿಸಬೇಕು.
3. ಪೌಷ್ಠಕ ಆಹಾರ ಮೂಲ ಸಾಮಗ್ರಿಗಳಾದ ಪ್ರೋಟೀನ್‌ಗಳು, ಕೊಬ್ಬು, ಖನಿಜ ಲವಣಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವ ಯೋಜನೆಗಳಿಗೆ ಪ್ರಾಮುಖ್ಯತೆ ನೀಡಬೇಕು.
4. ಅಧಿಕಾರ ವಿಕೇಂದ್ರೀಕರಣದ ಗುರಿಯೊಂದಿಗೆ, ಸ್ಥಳೀಯ ಸಂಸ್ಥೆಗಳ ಪಾತ್ರವನ್ನು ಹೆಚ್ಚಿಸಬೇಕು. ಆಹಾರ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು.
5. ಶುದ್ದ ಆಹಾರವನ್ನು ತಯ್ಯಾರಿಸಿಕೊಳ್ಳಲು ಉತ್ತಮ ವಾತಾವರಣದ ವ್ಯವಸ್ಥೆ ಕಲ್ಪಿಸಬೇಕು. ಅದರಲ್ಲೂ ಕಲುಷಿತವಲ್ಲದ ನೀರು ದೊರಕುವಂತೆ ಮಾಡಬೇಕು. ವಿಷಕಾರಿ ಅನಿಲಗಳು ಹರಡದ ವಾತಾವರಣವನ್ನು ಒದಗಿಸಬೇಕು.
6. ಬೀದಿಬದಿಯ ಗಾಡಿಗಳಲ್ಲಿ ಮಾರಾಟವಾಗುವ ಆಹಾರ ಪದಾರ್ಥಗಳ ಗುಣಮಟ್ಟವನ್ನು ನಿರಂತರ ನಿಯಂತ್ರಣ ವ್ಯವಸ್ಥೆಗಳ ಮೂಲಕ ನಿಗಾ ಇಡಬೇಕು.
7. ಪೌಷ್ಠಿಕ ಆಹಾರ ಲಭ್ಯತೆಯ ಗುರಿಯನ್ನು ತಲುಪಿದ ಸರ್ಕಾರಗಳಿಗೆ ಮಾತ್ರ ವಿಶ್ವ ಹಣಕಾಸು ಸಂಸ್ಥೆ (IMF) ಹಣಕಾಸಿನ ನೆರವು ನೀಡಬೇಕು.
8. ಆಹಾರದ ಬೆಲೆ ಏರಿಳಿತಗಳಿಗೆ ನಿರ್ಣಾಯಕವಾಗಿರುವ "ಮಾರುಕಟ್ಟೆ ವ್ಯವಸ್ಥೆ"ಯನ್ನು ನಿಯಂತ್ರಣದಲ್ಲಿಡಬೇಕು.
9. ಆಹಾರ ಉತ್ಪಾದನೆಗೆ (ಉದಾ ಕೃಷಿ ಮೂಲಕ ಮಾಡುವ ಉತ್ಪನ್ನಗಳು) ಅಗತ್ಯವಿರುವ ಉಪಕರಣರಗಳನ್ನು ರಿಯಾಯಿತಿ ದರದಲ್ಲಿ ಲಭಿಸುವಂತೆ ನೋಡಿಕೊಳ್ಳುವುದು ಪ್ರಮುಖ ಜವಾಬ್ದಾರಿ ಎಂದು ಪರಿಗಣಿಸಬೇಕು.
10. ನಾಗರಿಕ ಸಮಾಜದ ಆಹಾರವನ್ನು ಸುರಕ್ಷಿತವಾಗಿರಿಸಬಲ್ಲ ಶಿಕ್ಷಣ, ವಿಸ್ತರಣಾ ಸಂಸ್ಥೆಗಳ ಪುನರ್ರಚನೆಯನ್ನು ತುರ್ತು ಕಾರ್ಯವೆಂದು ಗುರುತಿಸಬೇಕು.

'ಶೂನ್ಯಹಸಿವು'ಎಂಬ ಘೋಷಣೆಯಿಂದಲೋ, 'ಆಹಾರ ಭದ್ರತಾ ಕಾಯ್ದೆ'ಎಂಬ ಹೆಸರಿನಿಂದಲೋ ಸರ್ಕಾರಗಳು ನಾಗರಿಕರನ್ನು ದಾರಿ ತಪ್ಪಿಸುವ ಪ್ರವೃತ್ತಿಯನ್ನು ಕೈಬಿಟ್ಟು, ಪ್ರಾಮಾಣಿಕತೆಯಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಣೆ ಮಾಡಬೇಕು. ಆಧುನಿಕ ತಂತ್ರಜ್ಞಾನಗಳ ಸಹಾಯದಿಂದ "ಆಹಾರ ಭದ್ರತೆ" ಎಲ್ಲರಿಗೂ ಲಭ್ಯವಾಗುವಂತೆ ಮಾಡಬೇಕು. ಕೇವಲ

ಪುಟ 04 ಕ್ಕೆ

ಸಂಪಾದಕೀಯ

ಮುಂದುವರಿದ ಮತೀಯವಾದಿಗಳ ಬೆದರಿಕೆ

ನಾಡಿನ ಹಿರಿಯ ಸಾಹಿತಿಗಳು, ಪ್ರಗತಿಪರ ಸಂಘಟನೆಗಳ ಪ್ರಮುಖರುಗಳಿಗೆ ಪ್ರಾಣ ಬೆದರಿಕೆಯ ಪತ್ರಗಳನ್ನು ಬೇನಾಮಿಯಾಗಿ ಬರೆಯುತ್ತಿದ್ದ 'ಹಿಂದುತ್ವವಾದಿ ಭಯ ಉತ್ಪಾದಕ'ನನ್ನು ಪೊಲೀಸರು ಪತ್ತೆ ಹಚ್ಚಿ ಬಂಧಿಸಿರುವುದು ಸ್ವಾಗತಾರ್ಹ. ಈತ, ಸಮಾನತೆ, ಸಾಮಾಜಿಕ ನ್ಯಾಯ, ಸಂವಿಧಾನ ಬದ್ಧತೆ, ಕೋಮು ಸೌಹಾರ್ದತೆ, ವೈಚಾರಿಕತೆಯನ್ನು ಉಸಿರಾಗಿಸಿ ಕೊಂಡವರ ಉಸಿರನ್ನೇ ತೆಗೆದು ಬಿಡುವುದಾಗಿ ಕೈಬರಹದ ಪತ್ರ ಮುಖೇನ 'ಅಸಹಿಷ್ಣು ಹಿಂದು' ಹೆಸರಿನಲ್ಲಿ ಪತ್ರಗಳನ್ನು ಬರೆಯುತ್ತಿದ್ದ. ಕೋಮುವಾದಿ ಕೃತ್ಯಗಳನ್ನು ಟೀಕಿಸದೇ ಇರುವಂತೆ, ಎಚ್ಚರಿಸುತ್ತಿದ್ದ. ಈ ಭಯ ಉತ್ಪಾದಿಸುವ ಕೃತ್ಯ ಹಲವು ವರ್ಷಗಳಿಂದ ನಡೆದೇ ಇತ್ತು. ಆದರೆ ಹಿಂದಿದ್ದ ಬಿಜೆಪಿ ಸರಕಾರವು, ನೀಡಿದ ದೂರುಗಳನ್ನು ನಿರ್ಲಕ್ಷಿಸಿಕೊಂಡೇ ಬಂದಿತ್ತು. ಇದೂ ಕೂಡ ಅಕಸ್ಮಿಕವೇನಲ್ಲ. ಈ ದೆಸೆಯಲ್ಲಿ ಸಿದ್ಧರಾಮಯ್ಯನವರ ನೇತೃತ್ವದ ಸರಕಾರ ವಹಿಸಿದ ಮುತುವರ್ಜಿ ಶ್ಲಾಘನೀಯ.

ಬಂಧಿತ ಶಿವಾಜಿರಾವ್ ದಾವಣಗೆರೆ ಜಿಲ್ಲೆಯವನಾಗಿದ್ದು ಹಿಂದು ಜಾಗರಣ ವೇದಿಕೆಯ ಕಾರ್ಯಕರ್ತ, ಉಗ್ರ ಹಿಂದುತ್ವವಾದಿ ಎನ್ನುವುದನ್ನೂ ಗಮನಿಸಬೇಕು. ಈತ ಅಂತಹವನಲ್ಲ ಎಂದು ಅವರ ಕುಟುಂಬದವರು ಹೇಳಿಕೊಂಡರೂ ಅತನಿರುವ ಸಂಸ್ಥೆ, ಅದರ ಹಿನ್ನೆಲೆ, ಅದರ ವಿಚಾರಗಳ ಪ್ರತಿಪಾದನೆ ಮತ್ತು ಪ್ರಸಾರ ಆತನ ಉದ್ದೇಶಿತ ಕೃತ್ಯಗಳ ನಿರಾಕರಣೆಯನ್ನು ಸಮರ್ಥಿಸುವುದಿಲ್ಲ. ಕೋಮುವಾದಿಗಳ ಉನ್ಮಾದದ ಪ್ರಚಾರ, ದ್ವೇಷ ಕಾರುವ ವಿಷ ಪ್ರಚಾರ, ಹುಸಿ ಧಾರ್ಮಿಕ ಅಸ್ಮಿತತೆಗಳು ಯುವ ಚೈತನ್ಯಗಳ ಮನಸ್ಸನ್ನು ರೋಗಗ್ರಸ್ತ ಮತ್ತು ಮಾನವ ದ್ವೇಷಿಯನ್ನಾಗಿಸುತ್ತಿವೆ. ತಮ್ಮ ಭವಿಷ್ಯದ ವಿರುದ್ಧ ತಾವೇ ಹೋರಾಡುವ 'ಆತ್ಮಹತ್ಯಾ ಸ್ಕ್ವಾಡ್' ಗಳಾಗಿ ಇಂತಹ ಯುವಕರು ಮಾರ್ಪಾಡು ಆಗುತ್ತಿರುವುದರಲ್ಲಿ ಸಂಶಯವೇ ಇಲ್ಲ. ಇಂತಹ ದ್ವೇಷ, ಹಿಂಸೆ ಉತ್ಪಾದಿಸುವ 'ಫ್ಯಾಕ್ಟರಿ'ಗಳು ಗೋಚರವೂ, ಅಗೋಚರವೂ ಆಗಿ ಎಲ್ಲೆಲ್ಲೂ ಇರುವುದು, ಅದರ ಪ್ರಸರಣ ಎಗ್ಗಿಲ್ಲದೇ ನಡೆಯುತ್ತಿರುವುದು ಆತಂಕಕಾರಿಯಾಗಿದೆ. ಅಂತಹವುಗಳ ಬಗ್ಗೆ ವಿಶೇಷವಾಗಿ ಯುವಜನರು ಜಾಗೃತರಾಗ ಬೇಕಿದೆ.

ಈಗ ಬಂಧಿಸಲ್ಪಟ್ಟಿರುವ ಶಿವಾಜಿರಾವ್ ನನ್ನು ಸಮಗ್ರ ತನಿಖೆ ಒಳಸಬೇಕಿದೆ. ಕಠಿಣ ಕಾನೂನಾತ್ಮಕ ಕ್ರಮ ವಹಿಸಬೇಕಿದೆ. ಇದನ್ನು ಕೇವಲ ಸಾಮಾನ್ಯ ಬೆದರಿಕೆಯ ಪ್ರಕರಣ ಎಂದು ಭಾವಿಸಲಾಗದು. ಅದೇ ಹೊತ್ತಿನಲ್ಲಿ ಈ ಕೃತ್ಯವನ್ನು ಕೇವಲ ಒಬ್ಬನೇ ಎಸಗಿರುವ ಸಾಧ್ಯತೆಗಳಿಲ್ಲ, ಬದಲಾಗಿ ಜೊತೆಗೆ ಹಲವರ ತಂಡ ಇರುವ ಸಾಧ್ಯತೆಗಳೇ ಹೆಚ್ಚಿದ್ದು ಆಳವಾದ ತನಿಖೆ ನಡೆಸಲೇಬೇಕು. ಹಾಗೆಯೇ, ಈ ವ್ಯಕ್ತಿಯ ಬಂಧನ ಪ್ರಗತಿಪರರ ಮೇಲಿನ ಧಾಳಿಗಳ ಮುಂದುವರಿಕೆಗೆ ತಡೆಯೇನಲ್ಲ. ಅಂತಹ ಆತಂಕ ತಪ್ಪಿಲ್ಲ. ಡಾ.ಕಲಬುರ್ಗಿ, ಗೌರಿ ಲಂಕೇಶ್ ರವರ ಹತ್ಯಾ ಪ್ರಕರಣಗಳನ್ನು ಗಮನದಲ್ಲಿರಿಸಿ ಅವರಿಗೆ ಸೂಕ್ತ ರಕ್ಷಣೆ ನೀಡಲೇಬೇಕು.

ಬಿಜೆಪಿಯು ವಿಧಾನಸಭಾ ಚುನಾವಣೆಯಲ್ಲಿ ಸೋತು ಅಧಿಕಾರ ಕಳೆದುಕೊಂಡರೂ, ಅದು ಜನಾದೇಶದಿಂದ ಪಾಠ ಕಲಿತಿಲ್ಲ, ಕಲಿಯುವುದಿಲ್ಲ ಎನ್ನುವುದು ಹೆಜ್ಜೆ ಹೆಜ್ಜೆಗೂ ಸಾಬೀತು ಮಾಡುತ್ತಿದೆ. ಮುಖ್ಯವಾಗಿ, ಶಾಂತಿ, ಸೌಹಾರ್ದತೆ, ಕಾನೂನು ಬದ್ಧ ಆಡಳಿತ ಬಯಸಿದ ಜನತೆಯ ಬಯಕೆಯನ್ನೇ ಬುಡಮೇಲು ಮಾಡಲು 'ಸಂಘ ಪರಿವಾರ' ತನ್ನ ಪ್ರಯತ್ನಗಳನ್ನು ಮುಂದುವರಿಸುತ್ತಿದೆ. ರಾಜ್ಯದ ಅನೇಕ ಕಡೆಗಳಲ್ಲಿ ಕೋಮು ದ್ವೇಷ ಹೆಚ್ಚಿಸುವ ಕೃತ್ಯಗಳನ್ನು ನಡೆಸುತ್ತಿದೆ. ಉಡುಪಿಯ ಯವಕ ಯುವತಿಯ ಮೇಲೆ ಅನ್ಯ ಧರ್ಮೀಯರು ಎಂದು ನಡೆಸಿದ ಧಾಳಿ, ಬಸವಕಲ್ಯಾಣದ ಮಸೀದಿಯ ಮೇಲೆ ಭಗವಾ ಧ್ವಜ ಕಟ್ಟಿದ್ದು, ದೊಡ್ಡಬಳ್ಳಾಪುರದ ಬಳಿ 'ಗೋಮಾಂಸ ಸಾಗಾಣಿಕೆ ಹೆಸರಿನಲ್ಲಿ ಕಾನೂನು ಕೈಗೆತ್ತಿಕೊಂಡು ನಡೆಸಲಾಗಿರುವ ಹಲ್ಲೆಗಳು, ಶಿವಮೊಗ್ಗದಲ್ಲಿ ಗಣೇಶ–ಈದ್ ಸಂದರ್ಭದಲ್ಲಿ ಗಲಭೆಗಳನ್ನುಂಟು ಮಾಡಿದ ವೈಖರಿ, ಇತ್ಯಾದಿಗಳನ್ನು ಉದಾಹರಿಸಬಹುದು. ಒಂದೆಡೆಯಲ್ಲಿ ಅಲ್ಪಸಂಖ್ಯಾತರ ವಿರುದ್ಧ ದಾಳಿಗಳ ಮುಂದುವರಿಕೆ, ಶಾಂತಿ, ಸೌಹಾರ್ದತೆ ನೆಲೆಗೊಳ್ಳದಂತೆ ಮಾಡುವುದಾಗಿದ್ದರೆ, ಇನ್ನೊಂದೆಡೆ ಅಂತಹ ಕಾನೂನು ವಿರೋಧಿ ಕೃತ್ಯಗಳ ವಿರುದ್ಧ ಕ್ರಮ ವಹಿಸಿದರೆ ಹಿಂದು ವಿರೋಧಿ ಸರಕಾರ ಎಂದು ಬಿಂಬಿಸುವ ಪ್ರಯತ್ನ. ಸಮಾಜದಲ್ಲಿ ಸದಾ ಅಶಾಂತಿ, ಹಿಂಸಾ ದಳ್ಳುರಿ, ಅರಾಜಕತೆ, ಅನಿಶ್ಚಿತತೆ ತಾಂಡವವಾಡಬೇಕೆಂಬುದು ಪ್ರಜಾಪ್ರಭುತ್ವ ವಿರೋಧಿ, ಫ್ಯಾಶಿಸ್ಟ್ ಮನೋಭಾವದ ಶಕ್ತಿಗಳ ಬಯಕೆ. ತನ್ನ ಈ ಫ್ಯಾಶಿಸ್ಟ್ ರಾಜಕಾರಣಕ್ಕೆ ಅಲ್ಪಸಂಖ್ಯಾತ ಮತೀಯ ಮೂಲಭೂತವಾದಿಗಳನ್ನು ಕಣಕ್ಕೆ ಸೆಳೆಯುವ, ಬೆಳೆಸುವ ಪ್ರಯೋಗ ಶಿವಮೊಗ್ಗದಲ್ಲಿ ಮಾಡಿದ್ದು ಗಮನಿಸಬೇಕಾಗಿದೆ. ಮುಸ್ಲಿಂ ಸಮುದಾಯ ಸೆಕ್ಯುಲರ್



ಶಕ್ತಿಗಳ ಜೊತೆ ನಿಲ್ಲದೇ ಅಲ್ಲಿಂದ ಹೊರ ನಡೆಯುವಂತೆ ಹೂಡಿದ ತಂತ್ರವೂ ಅಲ್ಲಿ ಇಲ್ಲದಿಲ್ಲ. ಲೋಕಸಭಾ ಚುನಾವಣೆಯಲ್ಲಿ ಮತ್ತೇ ಅಧಿಕಾರ ಹಿಡಿಯುವ ಪ್ರಯತ್ನದಲ್ಲಿರುವ ಬಿಜೆಪಿ ಮತ್ತಷ್ಟೂ ಹೊಸ ತಂತ್ರಗಳನ್ನು, ಷಡ್ಯಂತ್ರಗಳನ್ನು ಹೆಣೆಯುವುದನ್ನು ಅಲ್ಲಗೆಳೆಯುವಂತಿಲ್ಲ. ಇಂತಹ ಯತ್ನಗಳನ್ನು ಜನತೆ ಎದುರಿಸಬೇಕು, ಸೋಲಿಸಬೇಕು. ನಾಡಿನ ಸೌಹಾರ್ದ ಪರಂಪರೆಯನ್ನು ಎತ್ತಿ ಹಿಡಿಯಬೇಕು.



ಸೌಹಾರ್ದ ಕರ್ನಾಟಕ ವೇದಿಕೆಯಿಂದ ಹಗರಿಬೊಮ್ಮನ ಹಳ್ಳಿಯಲ್ಲಿ ಗಾಂಧೀಜಿಯ 154ನೇ ಜಯಂತಿ ಭಾಗವಾಗಿ 2 ಅಕ್ಟೋಬರ್ 2023 ರಂದು "ಕೋಮು ಸೌಹಾರ್ದತೆ" ವಿಷಯದ ಮೇಲೆ ವಿಚಾರ ಸಂಕೀರಣವನ್ನು ಸೌಹಾರ್ದ ಕರ್ನಾಟಕ ವೇದಿಕೆಯಿಂದ ನಡೆಯಿತು. ಉದ್ಘಾಟನೆಯನ್ನು ಹುರಕಡ್ಲಿ ಶಿವಕುಮಾರ ಸಾಹಿತಿಗಳು ಮಾಡಿದರು. "ಕೋಮು ಸೌಹಾರ್ದತೆ" ಬಗ್ಗೆ ಅಕ್ಕಿ ಬಸವೇಶ ಉಪನ್ಯಾಸಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು ರವರು ವಿಷಯ ಮಂಡಿಸಿದರು. ಅದ್ಯಕ್ಷತೆಯನ್ನು ಬಿ.ಮಾಳಮ್ಮ. ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನೆಲ್ಲು ಇಸ್ಮಾಯಿಲ್, ಸದಸ್ಯರು ಪುರ ಸಭೆ, ಹನಸಿ ದೇವರಾಜ ಅದ್ಯಕ್ಷರು ಕೃಷಿಕ ಸಮಾಜ, ಆರ್.ಎಸ್. ಬಸವರಾಜ CITU ರಾಜ್ಯ ಉಪಾಧ್ಯಕ್ಷರು ಹಾಗೂ ಉಪ್ಪಾರ ಬಸಪ್ಪ ಮತ್ತು ಎ.ಆರ್. ಪಂಪಣ್ಣ ಸಾಹಿತಿಗಳು, ಎಸ್. ಜಗನ್ನಾಥ, ಸಿ.ಎಂ.ಮಹೇಶ ಉಪಸ್ಥಿತರಿದ್ದರು. ವಿವಿಧ ಸಂಘಟನೆಗಳ ಮುಖಂಡರುಗಳು ಭಾಗವಹಿಸಿದ್ದರು.



ಸೌಹಾರ್ದ ಕರ್ನಾಟಕದಿಂದ ಬೆಂಗಳೂರಿನಲ್ಲಿ ಅಯೋಜಿಸಿದ ಗಾಂಧಿ ಜಯಂತಿಯಂದು ಸ್ವತಂತ್ರ ಭಾರತದಲ್ಲಿ ಸಾಮರಸ್ಯದ ಉಳಿವು–ಗಾಂಧಿ ಚಿಂತನೆಗಳ ಓದು. ಇ.ಎಂ.ಎಸ್. ನಂಬೂದರಿಪಾದ್ ರವರ ಮಹಾತ್ಮಾ ಆ್ಯಂಡ್ ದಿ ಇಸಂ ಪುಸ್ತಕ ಮತ್ತು ಸಮುದಾಯದ ಗಾಂಧಿ ಆಯ್ದ ಭಾಗಗಳನ್ನು ಓದಲಾಯಿತು. ಕಾರ್ಯಕ್ರಮವನ್ನು ಕೆ.ಮಹಂತೇಶ್ ರವರ ಮತ್ತೆ ಮತ್ತೆ ನೆನಪಾಗುತ್ತೀಯ ಗಾಂಧಿ.. ಕವನವನ್ನು ಕೆ.ಎಸ್. ವಿಮಲಾ ವಾಚನಮಾಡುವ ಮೂಲಕ ಮಾಡಲಾಯಿತು. ಟಿ.ಸುರೇಂದ್ರ ರಾವ್ ರವರು ಇ.ಎಂ.ಎಸ್ ರವರ ಪುಸ್ತಕದ ಆಯ್ದ ಭಾಗಗಳನ್ನು ಓದಿದರು. ದಿಲೀಪ್ ರವರು ಸಮುದಾಯದ ಗಾಂಧಿ ಪುಸ್ತಕದ ಆಯ್ದ ಭಾಗ ಓದಿದರು. ಸಂಗಾತಿ ರವಿಚಂದ್ರನ್ ಅಧ್ಯಕ್ಷತೆ ವಹಿಸಿದ್ದರು. ಸಿ.ಜಿ.ಶ್ರೀಪತಿ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಣೆ ಮಾಡಿದರು.



ಈದ್ ಮೆರವಣಿಗೆ ವೇಳೆ ಕಲ್ಲು ತೂರಾಟ ನಡೆಸಿ ಸೌಹಾರ್ದತೆಗೆ ಭಂಗ ಉಂಟು ಮಾಡಿದ ದುರ್ನಡೆ - ಸಿಪಿಐ(ಎಂ) ಖಂಡನೆ

ಕಳೆದ ಭಾನುವಾರದಂದು ಶಿವಮೊಗ್ಗ ನಗರದ ರಾಗಿಗುಡ್ಡ ಹಾಗೂ ಶಾಂತಿ ನಗರ ಪ್ರದೇಶದಲ್ಲಿ ಈದ್ ಮಿಲಾದ್ ಮೆರವಣಿಗೆ ವೇಳೆ ಮತಾಂಧ ದುಷ್ಕರ್ಮಿಗಳು ಕಲ್ಲ ತೂರಾಟ ನಡೆಸಿ ಸೌಹಾರ್ದತೆಗೆ ಭಂಗ ಉಂಟು ಮಾಡಿರುವ ದುರ್ನಡೆಯನ್ನು ಸಿಪಿಐ(ಎಂ) ಪಕ್ಷ ಬಲವಾಗಿ ಖಂಡಿಸುತ್ತದೆ.

ಅದೇ ರೀತಿ, ತಮ್ಮ ಸಂಕುಚಿತ ರಾಜಕೀಯ ಲಾಭಕ್ಕಾಗಿ ಸದರಿ ದುರ್ಘಟನೆಯನ್ನು ಬಳಸಿಕೊಂಡು ಕೋಮು ಗಲಭೆಗಳನ್ನು ರಾಜ್ಯಕ್ಕೆ ವಿಸ್ತರಿಸುವ ಕೆಲಸದಲ್ಲಿ ತೊಡಗಿರುವ ಕೋಮುವಾದಿ ಶಕ್ತಿಗಳ ಮುಂದುವರೆದ ದುಷ್ಕೃತ್ಯವನ್ನು ಸಿಪಿಐಎಂ ಬಲವಾಗಿ ಖಂಡಿಸುತ್ತದೆ. ಕೆಲ ಮಾಧ್ಯಮಗಳ ಪತ್ರಕರ್ತರು ಎಲೆಕ್ಟ್ರಾನಿಕ್ ಮಾಧ್ಯಮಗಳನ್ನು ದುರ್ಬಳಕೆ ಮಾಡಿಕೊಂಡು ಈ ದುಷ್ಕೃತ್ಯದಲ್ಲಿ ತೊಡಗಿಕೊಂಡಿರುವುದು ಖಂಡನಾರ್ಹವಾಗಿದೆ ಎಂದಿದೆ.

ಶಿವಮೊಗ್ಗ ನಗರವೂ ಸೇರಿದಂತೆ, ರಾಜ್ಯಾದ್ಯಂತ ಸೌಹಾರ್ದತೆಯನ್ನು ಕಾಪಾಡಿಕೊಳ್ಳುವಂತೆ ರಾಜ್ಯದ ಎಲ್ಲ ನಾಗರೀಕರಲ್ಲಿ ಸಿಪಿಐಎಂ ಮನವಿ ಮಾಡಿದೆ.

ಶಿವಮೊಗ್ಗದ ಈ ಘಟನೆಯನ್ನು ಗುರುತಿಸಿ ಪೂರ್ವ ಭಾವಿಯಾಗಿ ನಿಯಂತ್ರಿಸುವಲ್ಲಿ ಪೊಲೀಸ್ ಇಲಾಖೆ ಬಿಗಿ ಕ್ರಮವಹಿಸಿದ್ದರೂ, ಶಿವಮೊಗ್ಗದ ಸೌಹಾರ್ದ ಪ್ರಿಯ ಹಾಗೂ ಎರಡು ಧರ್ಮಗಳ ನಾಗರೀಕರನ್ನು ಬಳಸಿಕೊಂಡು ಶಾಂತಿ ಸೌಹಾರ್ದತಾ ಸಭೆಗಳನ್ನು ಸಂಘಟಿಸಿ, ಅಹಿತರ ಘಟನೆಗಳು ನಡೆಯದಂತೆ ತಡೆದಿರುವುದು ಶ್ಲಾಘನೀಯವಾಗಿದ್ದರೂ, ಈ ದುರ್ಘಟನೆ ಘಟಿಸಿರುವುದು ಗುಪ್ತಚರ ಇಲಾಖೆಯು ವಿಫಲವಾಗಿರುವುದನ್ನು ಇದು ಬಯಲುಗೊಳಿಸುತ್ತದೆ. ಪೊಲೀಸ್ ಇಲಾಖೆ ಮತ್ತಷ್ಟು ಎಚ್ಚರಿಕೆಯಿಂದ ನಿರ್ವಹಿಸಬೇಕಾದ ಅಗತ್ಯವನ್ನು ಇದು ತಿಳಿಸುತ್ತದೆ.

ಒಟ್ಟಾರೆ, ಇದರ ಒಳ ಹೊಕ್ಕು ನೋಡುವಾಗ ಮುಸ್ಲಿಂ ಅಲ್ಪ ಸಂಖ್ಯಾತರ ಮೇಲೆ ಗೂಬೆ ಕೂರಿಸುವ ಯೋಜಿತ ದುಷ್ಕೃತ್ಯದಂತೆ ಈ ದುರ್ಘಟನೆ ಕಂಡು ಬರುತ್ತದೆ.

ಕೋಮುವಾದಿ ಶಕ್ತಿಗಳು ಇಂತಹದ್ದೆಲ್ಲಾ ಅಹಿತಕರ ಘಟನೆಗಳಿಗೆ ಕಾರಣವಾಗುತ್ತಿರುವುದು ಅದಾಗಲೇ ರಾಜ್ಯದ ಅನುಭವವಾಗಿದ್ದರೂ, ಕಾನೂನು ಬಾಹಿರವಾಗಿ, ದಿನಗಟ್ಟಲೆ ರಸ್ತೆಗಳನ್ನು ಜಾಮ್ ಮಾಡಿ, ಗಣೇಶ ಹಾಗೂ ಮಿಲಾದ್ ಮುಂತಾದ ಮೆರವಣಿಗೆಗಳಿಗೆ ಅವಕಾಶ ನೀಡುವ, ಪ್ರಚೋದನ ಕಾರಿ ಬರಹ ಗಳು, ಪೋಸ್ಟರ್‌ಗಳು ಮತ್ತು ಕಟೌಟ್‌ಗಳಿಗೆ ಅನುವು ಮಾಡುವ ಜಿಲ್ಲಾ ಆಡಳಿತ ಹಾಗೂ ಪೊಲೀಸ್ ಇಲಾಖೆಯ ಕ್ರಮಗಳು ಆಕ್ಷೇಪಾರ್ಹವಾದವುಗಳಾಗಿವೆ. ದೇವರುಗಳ ಹೆಸರಿನಲ್ಲಿ ಇಂತಹ ಸಂದರ್ಭಗಳನ್ನು ದುರ್ಬಳಕೆ ಮಾಡಿಕೊಂಡು, ಅಮಾಯಕರ ಆಸ್ತಿ, ಪಾಸ್ತಿ ಹಾಗೂ ಜೀವ ಹಾನಿಗೆ ಅವಕಾಶವಾಗದಂತೆ ಕಠಿಣ ಕ್ರಮವಹಿಸುವುದು ರಾಜ್ಯ ಸರಕಾರದ ಆದ್ಯ ಕರ್ತವ್ಯವಾಗಿದೆ ಎಂದು ಸಿಪಿಐಎಂ ಒತ್ತಾಯಿಸಿದೆ.

ಸೌಹಾರ್ದತೆಗೆ ಭಂಗ ಉಂಟು ಮಾಡಿದ ಒಟ್ಟು ಘಟನೆಯನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಬೇಕು ಹಾಗೂ ಆ ಮೂಲಕ ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷಿಸಬೇಕು ಮತ್ತು ಕೋಮು ಗಲಭೆಗೆ ಪ್ರಚೋದನಾ ಕಾರಿ ಹೇಳಿಕೆ ನೀಡುವವರನ್ನು ಈ ಕೂಡಲೇ ಬಂಧಿಸಬೇಕು ಎಂದು ಸಿಪಿಐಎಂ ರಾಜ್ಯ ಸರಕಾರವನ್ನು ಒತ್ತಾಯಿಸಿದೆ.



ನ್ಯೂಸ್‌ಕ್ಲಿಕ್ ಮೇಲೆ ದಿಲ್ಲಿ ಪೋಲೀಸ್ ಕಾರ್ಯಾಚರಣೆ: ಮಾಧ್ಯಮದ ಮೇಲಿನ ಮತ್ತೊಂದು ನಿರ್ಲಜ್ಜ ದಾಳಿ- ಪೊಲಿಟ್ ಬ್ಯುರೊ ಬಲವಾದ ಖಂಡನೆ

ಕರಾಳ ಯುಎಪಿಎ ಅಡಿಯ ಎಫ್‌ಐಆರ್ ಆಧಾರದ ಮೇಲೆ ದಿಲ್ಲಿ ಪೊಲೀಸರು ಹಲವಾರು ಪತ್ರಕರ್ತರು, ವ್ಯಂಗ್ಯಕಾರರು, ವಿಡಂಬನಕಾರರು, ವಿಜ್ಞಾನಿಗಳು, ಸಾಂಸ್ಕೃತಿಕ ಇತಿಹಾಸಕಾರರು ಮತ್ತು ವ್ಯಾಖ್ಯಾನಕಾರರ ಮನೆಗಳ ಮೇಲೆ ಅಕ್ಟೋಬರ್ 3ರ ಮುಂಜಾನೆ ದಾಳಿ ನಡೆಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೋ ಬಲವಾಗಿ ಖಂಡಿಸಿದೆ.

ಇದು ಮಾಧ್ಯಮದ ಮೇಲೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಮೇಲಿನ ಒಂದು ನಿರ್ಲಜ್ಜ ದಾಳಿಯಾಗಿದೆ. ಕಳೆದ ಒಂಬತ್ತು ವರ್ಷಗಳಲ್ಲಿ ಮೋದಿ ಸರ್ಕಾರವು ಬಿಬಿಸಿ, ನ್ಯೂಸ್‌ಲಾಂಡ್ರಿ, ದೈನಿಕ್ ಭಾಸ್ಕರ್, ಭಾರತ್ ಸಮಾಚಾರ್, ಕಾಶ್ಮೀರ್‌ವಾಲಾ, ದಿ ವೈರ್ ಮುಂತಾದ ವಿವಿಧ ಮಾಧ್ಯಮ ಸಂಸ್ಥೆಗಳನ್ನು ನಿಗ್ರಹಿಸಲು, ಅವುಗಳಿಗೆ ಕಿರುಕುಳ ನೀಡಲು ಮತ್ತು ಅವುಗಳನ್ನು ಬೆದರಿಸಲು ತನಿಖಾ ಸಂಸ್ಥೆಗಳನ್ನು ನಿಯೋಜಿಸಿದೆ ಮತ್ತು ಈಗ ನ್ಯೂಸ್‌ಕ್ಲಿಕ್ ನೊಂದಿಗೆ ಸಂಪರ್ಕ ಹೊಂದಿದವರೆಲ್ಲರ ಮೇಲೆ ದಾಳಿ ನಡೆಸುತ್ತಿದೆ ಎಂದಿರುವ ಸಿಪಿಐ(ಎಂ) ಅಧಿಕಾರಸ್ಥರ ಮುಖದೆದುರು ಸತ್ಯವನ್ನು ನುಡಿವ ಮಾಧ್ಯಮ ಸಂಸ್ಥೆಗಳು ಮತ್ತು ಪತ್ರಕರ್ತರ ವಿರುದ್ಧ ಇಂತಹ ದೊಡ್ಡ ಪ್ರಮಾಣದ ಸರ್ವಾಧಿಕಾರಶಾಹೀ ದಾಳಿ ಖಂಡಿತವಾಗಿಯೂ ಸ್ವೀಕಾರಾರ್ಹವಲ್ಲ ಎಂದು ಹೇಳಿದೆ.

ಆತ್ಮಸಾಕ್ಷಿಯ ಪಾಲಕರೆನಿಸಿಕೊಂಡಿರುವ ಮಾಧ್ಯಮಗಳನ್ನು ಗುರಿಯಾಗಿಸುವ, ಕಿರುಕುಳ ನೀಡುವ ಮತ್ತು ದಮನ ಮಾಡುವ ಇಂತಹ ವ್ಯವಸ್ಥಿತ ಪಿತೂರಿಯ ವಿರುದ್ಧ ಎಲ್ಲಾ ಪ್ರಜಾಸತ್ತಾತ್ಮಕ ಮನಸ್ಸಿನ ಭಾರತೀಯ ದೇಶಪ್ರೇಮಿಗಳು ಪ್ರತಿಭಟಿಸಬೇಕು ಎಂದು ಅದು ಕರೆ ನೀಡಿದೆ.

ಸತ್ಯ ಮಾತನಾಡುವವರಿಗೆ ಕಿರುಕುಳ ಕೊಡುವುದನ್ನು ನಿಲ್ಲಿಸಿ-ಸಿಐಟಿಯು

ಭಾರತ ಸರ್ಕಾರದ ಗೃಹ ಸಚಿವಾಲಯದ ಅಧೀನದಲ್ಲಿರುವ ದಿಲ್ಲಿ ಪೋಲಿಸ್ ಮುಂಜಾನೆ ಪತ್ರಕರ್ತರು, ವಿಜ್ಞಾನಿಗಳು, ಸಾಂಸ್ಕೃತಿಕ ಇತಿಹಾಸಕಾರರು ಮತ್ತು ಇತರ ಹಲವರ ಮನೆಗಳ ಮೇಲೆ ದಾಳಿ ನಡೆಸಿರುವುದನ್ನು, ಕರಾಳ ಯುಎಪಿಎನ್ನು ಬಳಸಿರುವುದನ್ನು ಬಲವಾಗಿ ಖಂಡಿಸುವುದಾಗಿ ಸಿಐಟಿಯು ಹೇಳಿದೆ.

ಇದು ನಮ್ಮ ಸಂವಿಧಾನವು ಖಾತ್ರಿಪಡಿಸಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಮೇಲಿನ ಬಹಿರಂಗ ಆಕ್ರಮಣವಲ್ಲದೆ ಬೇರೇನೂ ಅಲ್ಲ. ಒಂದೆಡೆ ಜನರ ಮೇಲೆ ಭಾರಿ ಹೊರೆ ಹೇರುತ್ತಿರುವ ಮೋದಿ ಸರ್ಕಾರದ ವಿನಾಶಕಾರಿ ನೀತಿಗಳನ್ನು ವಿರೋಧಿಸುತ್ತಿರುವ ಧ್ವನಿಗಳನ್ನು ಹತ್ತಿಕ್ಕುವ ಯತ್ನ ಇದಾಗಿದ್ದು, ಇನ್ನೊಂದೆಡೆ ಕೋಮುವಿಷ ಮತ್ತು ದ್ವೇಷವನ್ನು ಅದು ಹರಡುತ್ತಿದೆ.

ಸರಕಾರದ ಕೃಪಾಪೋಷಿತ 'ಗೋದೀ ಮೀಡಿಯಾ'ದ ನಿರಂತರ ತಪ್ಪು ಮಾಹಿತಿ ಪ್ರಚಾರ ಮತ್ತು ಸುಳ್ಳು ಸುದ್ದಿಗಳ ಪ್ರಸರಣವನ್ನು ಎದುರಿಸಲು ಪ್ರಯತ್ನಿಸುತ್ತಿರುವ ಸ್ವತಂತ್ರ ಮಾಧ್ಯಮ ಸಂಸ್ಥೆಗಳು, ಸಂಘಟನೆಗಳು ಮತ್ತು ವ್ಯಕ್ತಿಗಳಿಗೆ ಕಿರುಕುಳ ಕೊಡಲು, ಅವರನ್ನು ಹೆದರಿಸಲು ಮತ್ತು ಬೆದರಿಕೆ ಹಾಕಲು ತನಿಖಾ ಸಂಸ್ಥೆಗಳನ್ನು ನಿಯೋಜಿಸುವುದಕ್ಕೆ ಮತ್ತು ಸುಳ್ಳು ಪ್ರಕರಣಗಳನ್ನು ಹೇರುವುದಕ್ಕೆ ಮೋದಿ ಸರ್ಕಾರ ಕುಖ್ಯಾತವಾಗಿದೆ ಎಂದಿರುವ ಸಿಐಟಿಯು ಇಂತಹ ನಿರಂಕುಶ ಕ್ರಮಗಳು ಮೋದಿ ಸರಕಾರ ತನ್ನ ಕಾರ್ಮಿಕ ವಿರೋಧಿ, ಜನವಿರೋಧಿ ಮತ್ತು ರಾಷ್ಟ್ರವಿರೋಧಿ ನೀತಿಗಳ ವಿರುದ್ಧದ ಯಾವುದೇ ಟೀಕೆಗಳನ್ನು, ಅದರಲ್ಲೂ ವಿಶೇಷವಾಗಿ ಸಂಸತ್ತಿನ ಚುನಾವಣೆಗಳು ಕೆಲವೇ ತಿಂಗಳುಗಳಿರುವಾಗ ಜನರ ಐಕ್ಯ ಕಾರ್ಯಾಚರಣೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಹಿಸಲಾರದು ಎಂಬುದನ್ನು ತೋರಿಸುತ್ತವೆ ಎಂದು ಹೇಳಿದೆ.

ಮಾಧ್ಯಮವನ್ನು ಹತ್ತಿಕ್ಕುವ ಮತ್ತು ಪ್ರಜಾಪ್ರಭುತ್ವ ಸಮಾಜದಲ್ಲಿ ಸತ್ಯವನ್ನು ಹೊರತರುವ ತನ್ನ ಜವಾಬ್ದಾರಿಯನ್ನು ಅದು ನಿರ್ವಹಿಸುವುದನ್ನು ತಡೆಯುವ ಉದ್ದೇಶದಿಂದ ನಡೆಸಿರುವ ಈ ಹೇಯ ದಾಳಿಗಳನ್ನು ಬಲವಾಗಿ ಪ್ರತಿಭಟಿಸಬೇಕೆಂದು ಸಿಐಟಿಯು ಕಾರ್ಮಿಕರಿಗೆ ಮತ್ತು ಎಲ್ಲಾ ವರ್ಗದ ಜನರಿಗೆ ಕರೆ ನೀಡಿದೆ.

ಕೃಷಿಗೆ ಬೆನ್ನೆಲುಬಾಗಿದ್ದ ವಿಜ್ಞಾನಿ ಡಾ. ಎಂ.ಎಸ್. ಸ್ವಾಮಿನಾಥನ್....... ಪುಟ 2 ರಿಂದ

ಪ್ರಕೃತಿ ಕೃಷಿ, ಪರಿಸರ ಸಂರಕ್ಷಣೆ ಎಂಬ ಘೋಷಣೆಗಳಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಗೋವಿನಿಂದ ಲಭಿಸುವ ಪ್ರಯೋಜನವನ್ನು ಅತಿಯಾಗಿ ಪರಿಗಣಿಸಿ, ಉಳಿದ ಡೈರಿ ಮತ್ತು ಮಾಂಸದ ಪ್ರಾಣಿಗಳನ್ನು ನಿರ್ಲಕ್ಷಿಸುವ ಪರಿಸ್ಥಿತಿ ಬರಬಾರದು.

ಸ್ವಾಮಿನಾಥನ್ ಅವರನ್ನು ಹಸಿರು ಕ್ರಾಂತಿಯ ಪಿತಾಮಹ ಎಂದು ಯಾರಾದರೂ ಸಂಬೋಧಿಸಿದರೆ... ತಾನು ಕೇವಲ ಮೂರು ಸಹೃದಯ ಹೆಣ್ಣುಮಕ್ಕಳಿಗೆ ತಂದೆ ಮಾತ್ರ ಎಂದು ಅವರು ನಗುತ್ತಿದ್ದರು. ಸಂಶೋಧನಾ ಸಂಸ್ಥೆಯಲ್ಲಿನ ಯುವ ವಿಜ್ಞಾನಿಗಳ ಚೈತನ್ಯ ಮತ್ತು ವೈಜ್ಞಾನಿಕ ಅರಿವನ್ನು ಹೆಚ್ಚಿಸಲು ಆಗಾಗ್ಗೆ ವಿಚಾರ ಸಂಕಿರಣಗಳನ್ನು ಆಯೋಜಿಸಿದ್ದರು. ಹಸಿರು ಕ್ರಾಂತಿಯ ಹೆಸರಿನಲ್ಲಿ ನಡೆಯುತ್ತಿರುವ ಯೋಜನೆಗಳಿಂದ ಸಂಪನ್ಮೂಲಗಳು ಬರಿದಾಗುತ್ತಿರುವುದನ್ನು ಅವರು ಪದೇ ಪದೇ ನೆನಪಿಸಿಕೊಳ್ಳುತ್ತಿದ್ದರು. ತಾನು 1968ರ ವಿಜ್ಞಾನ ಕಾಂಗ್ರೆಸ್‌ನಿಂದಲೂ ಈ ಅಂಶವನ್ನು ಸರ್ಕಾರದ ಗಮನಕ್ಕೆ ಮತ್ತು ನಾಗರಿಕರ ಗಮನಕ್ಕೆ ತರುತ್ತಿರುವುದಾಗಿ ವಿವರಿಸುತ್ತಿದ್ದರು. ಆದರೆ, ಪ್ರಕೃತಿ ಕೃಷಿ ಹಾಗೂ ಶೂನ್ಯ ಬಂಡವಾಳದ ಬೆಳೆಗಳ ಪ್ರಚಾರಕರಲ್ಲಿ ಕೆಲವರು ಸ್ವಾಮಿನಾಥನ್ ಅವರ ತಂತ್ರಜ್ಞಾನಗಳು ನಷ್ಟಮಾಡಿದೆ ಎಂದರು. ಅದೇ ರೀತಿ, ಕೃತಕ ಜೀವಾಂತರ ಬೀಜಗಳ ವಿಷಯದಲ್ಲಿ ಸ್ವಾಮಿನಾಥನ್ ಅವರು ಮೊನ್ಸೆಂಟೊದಂತಹ ಕಂಪನಿಗಳ ಪಾತ್ರವನ್ನು ಎತ್ತಿ ತೋರಿಸಲಿಲ್ಲ ಎಂದರು. ಆದರೆ ನಿಯಂತ್ರಣ, ಮತ್ತು ಕಣ್ಗಾವಲು ಪಾತ್ರಗಳನ್ನು ಸರ್ಕಾರಗಳು ವಹಿಸಬೇಕು ಎಂದು ಸ್ವಾಮಿನಾಥನ್ ಆಗಾಗ್ಗೆ ಹೇಳುತ್ತಿದ್ದರು. ಅಲ್ಲದೆ ಪುನರಾವರ್ತಿತ ಪರೀಕ್ಷೆ ಮತ್ತು ಮೌಲ್ಯಮಾಪನ ಮಾಡದೆ ಕೃಷಿಯಲ್ಲಿ ಹೊಸ ತಂತ್ರಜ್ಞಾನಗಳನ್ನು ಅಳವಡಿಸುವುದು ಅವಿವೇಕದ ಮಾತಾಗಿದೆ ಎನ್ನುತ್ತಿದ್ದರು. ಕೃಷಿಯನ್ನು ದೇಶದ ಸ್ವಾವಲಂಬನೆಯ (ಆಹಾರ ವಲಯ) ಅಡಿಪಾಯವನ್ನಾಗಿ ಮಾಡಿದ ಮುಖ್ಯ ವಿಜ್ಞಾನಿ ಸ್ವಾಮಿನಾಥನ್.

ಕೃಷಿ ಕ್ಷೇತ್ರದ ಉನ್ನತಿಯಲ್ಲಿ ಮೀನು, ಕೋಳಿ, ಕುರಿ ಸಾಕಾಣಿಕೆಯನ್ನು ವಿಸ್ತರಿಸಬೇಕು. ಅವುಗಳ ಸಾಕಣಿಕೆದಾರರಿಗೆ ಅಗತ್ಯವಾದ ಸಹಕಾರ ನೀಡಬೇಕು. 2017-2021 ರ ಭಾರತದ ರೈತರ ಆಂದೋಲನಗಳನ್ನು ದೇಶದ ಆಹಾರ ಭದ್ರತೆಯ ಜಾಗೃತಿ ಎಂದು ಪರಿಗಣಿಸಬೇಕು ಮತ್ತು ಆಹಾರ ಉತ್ಪಾದಕರು ಮತ್ತು ಗ್ರಾಹಕರ ನಡುವೆ ಸಮನ್ವಯವನ್ನು ರಚಿಸಬೇಕು. ಆಗ ಮಾತ್ರ "ಆಹಾರದ ಹಕ್ಕು" ಕಾಯಿದೆಗೆ ಅರ್ಥ ಬರುತ್ತದೆ. ಪ್ರೊ.ಸ್ವಾಮಿನಾಥನ್ ಅವರ ಶ್ರಮಕ್ಕೆ ನಿಜವಾದ ಶ್ರದ್ಧಾಂಜಲಿಯಾಗಲಿದೆ.

ಕೃಪೆ-ಪ್ರಜಾಶಕ್ತಿ

ಪತ್ರಕರ್ತರು, ಬರಹಗಾರರು, ಮಾನವ ಹಕ್ಕುಗಳ ಕಾರ್ಯಕರ್ತರ ಮೇಲೆ ದಾಳಿ-ಎಐಡಿಡಬ್ಲ್ಯುಎ

ಸರ್ಕಾರದ ನೀತಿಗಳನ್ನು ಟೀಕಿಸುವ ಸ್ವತಂತ್ರ ಮತ್ತು ನಿರ್ಭೀತ ಪತ್ರಕರ್ತರು ಮತ್ತು ಇತರರನ್ನು ಹದರಿಸಲು ಮೇಲ್ನೋಟಕ್ಕೇ ಅತ್ಯಂತ ಪ್ರಜಾಪ್ರಭುತ್ವ ವಿರೋಧಿಯಾದ, ನ್ಯಾಯಸಮ್ಮತವಲ್ಲದ, ದಮನಕಾರಿ ಕ್ರಮವನ್ನು ನಡೆಸಲಾಗಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲುಎ) ಹೇಳಿದೆ. ಈ ಇತ್ತೀಚಿನ ದಾಳಿಗಳನ್ನು ನಡೆಸಲು ಮತ್ತು ಸಂಬಂಧಪಟ್ಟ ವ್ಯಕ್ತಿಗಳ ಲ್ಯಾಪ್‌ಟಾಪ್‌ಗಳು ಮತ್ತು ಮೊಬೈಲ್‌ಗಳು ಸೇರಿದಂತೆ ಎಲೆಕ್ಟ್ರಾನಿಕ್ ಸಾಧನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಬಿಜೆಪಿ ಸರ್ಕಾರವು ಈಗ ದಂಡ ಸಂಹಿತೆಯ ಇತರ ವಿಭಾಗಗಳೊಂದಿಗೆ ಕರಾಳ ಯುಎಪಿಎ ಯನ್ನೂ ಬಳಸಲು ಮುಂದಾಗಿದೆ ಎಂದಿರುವ ಎಐಡಿಡಬ್ಲ್ಯುಎ ಈ ಫ್ಯಾಸಿಸ್ಟ್ ತೆರನ ಆಳ್ವಿಕೆಯ ಈ ಕಾನೂನುಬಾಹಿರ ಮತ್ತು ದಮನಕಾರಿ ಕ್ರಮಗಳನ್ನು ವಿರೋಧಿಸಲು ಎಲ್ಲಾ ಪ್ರಜಾಪ್ರಭುತ್ವವಾದಿ ನಾಗರಿಕರು ಒಗ್ಗೂಡಬೇಕೆಂದು ಮನವಿ ಮಾಡಿದೆ.

ದೇಶಾದ್ಯಂತ ವ್ಯಾಪಕ ಖಂಡನೆ

ನ್ಯೂಸ್‌ಕ್ಲಿಕ್‌ನ ಮೇಲೆ ದಾಳಿಯಲ್ಲಿ ದಿಲ್ಲಿ ಪೊಲೀಸರು ಮುಖ್ಯ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರಲ್ಲದೆ ಎನ್‌ಡಿಟಿವಿಯ ಮಾಜಿ ವ್ಯವಸ್ಥಾಪಕ ಸಂಪಾದಕ ಔನಿಂದ್ಯೋ ಚಕ್ರವರ್ತಿ, ಹಿರಿಯ ಪತ್ರಕರ್ತ ಮತ್ತು ಸಂಶೋಧಕ ಪರಂಜಯ್ ಗುಹಾ ಠಾಕುರ್ತಾ ಮತ್ತು ಹಿರಿಯ ಪತ್ರಕರ್ತರಾದ ಊರ್ಮಿಳೇಶ್, ಅಭಿಸಾರ್ ಶರ್ಮಾ, ಭಾಷಾ. ಸಿಂಗ್, ಸುಬೋಧ್ ವರ್ಮಾ, ಅನುರಾಧ ರಾಮನ್, ಅದಿತಿ ನಿಗಮ್, ಪ್ರಾಂಜಲ್, ಸುಮೇಧಾ ಪಾಲ್ ಮತ್ತು ಮುಕುಂದ್ ಝಾ ಮತ್ತು ಕೆಲವರು. ಅಲ್ಲದೆ, ವಿಡಂಬನಕಾರ ಮತ್ತು ಸ್ಟ್ಯಾಂಡ್–ಅಪ್ ಕಾಮಿಡಿಯನ್ ಸಂಜಯ್ ರಾಜೌರಾ, ಇತಿಹಾಸಕಾರ ಸೊಹೈಲ್ ಹಶ್ಮಿ, ಲೇಖಕಿ ಗೀತಾ ಹರಿಹರನ್, ದೆಹಲಿ ಸೈನ್ಸ್ ಫೋರಂನ ರಘುನಂದನ್ ಮತ್ತು ಫ್ರೀ ಸಾಫ್ಟ್‌ವೇರ್ ಮೂವ್‌ಮೆಂಟ್ ಆಫ್ ಇಂಡಿಯಾದ ಕಿರಣ್ ಚಂದ್ರ ಮುಂತಾದವರನ್ನು ವಿಚಾರಣೆಗೆ ಗುರಿಪಡಿಸಿದ್ದಾರೆ. ಮುಂಬೈನಲ್ಲಿರುವ ತೀಸ್ತಾ ಸೆಟಲ್ವಾಡ್ ಮತ್ತು ಜಾವೇದ್ ಆನಂದ್ ಅವರ ಕಚೇರಿ ಮತ್ತು ನಿವಾಸದ ಮೇಲೂ ದಿಲ್ಲಿ ಪೊಲೀಸರು ದಾಳಿ ನಡೆಸಿದ್ದಾರೆ.



ಸಂಸ್ಥಾಪಕ ಸಂಪಾದಕರಾದ ಪ್ರಬೀರ್ ಪುರಕಾಯಸ್ಥ ಮತ್ತು ಆಡಳಿತ ಮುಖ್ಯಸ್ಥರಾದ ಅಮಿತ್ ಚಕ್ರವರ್ತಿಯವರನ್ನು ಯುಎಪಿಎ ಅಡಿಯಲ್ಲಿ ಬಂಧಿಸಿದ ನಂತರ ಎಫ್‌ಐಆರ್ ಪ್ರತಿಯನ್ನು ನೀಡಲು ನಿರಾಕರಿಸಿದ ದಿಲ್ಲಿ ಪೊಲೀಸ್‌ನ ವಾದವನ್ನು ಸ್ವೀಕರಿಸದೆ ದಿಲ್ಲಿಯ ಪಾಟಿಯಾಲ ಹೌಸ್ ಕೋರ್ಟ್ ಅದನ್ನು ಪ್ರಬೀರ್ ಪುರಕಾಯಸ್ಥರಿಗೆ ನೀಡುವಂತೆ ಈಗ ಆದೇಶ ನೀಡಿದೆ. ಈ ನಡುವೆಯೂ ಈ ವೆಬ್ ಪತ್ರಿಕೆಯೊಂದಿಗೆ ಸಂಪರ್ಕದಲ್ಲಿರುವವರ ಪೊಲೀಸ್ ವಿಚಾರಣೆ ಮುಂದುವರೆಯುತ್ತಿದೆ. ದಿಲ್ಲಿ ಪೊಲೀಸ್‌ನ ಈ ಕ್ರಮದ ವಿರುದ್ಧ ದೇಶಾದ್ಯಂತ ವಿವಿಧ ಜನವಿಭಾಗಗಳಿಂದ, ಸಾಮಾಜಿಕ ಮಾಧ್ಯಮಗಳಲ್ಲಿ ಚಿಂತಕರು, ಪತ್ರಕರ್ತರು, ರಾಜಕಾರಣಿಗಳು ಮುಂತಾದವರಿಂದ ಈ ಬಗ್ಗೆ ವ್ಯಾಪಕ ಆತಂಕ, ಪ್ರತಿಭಟನೆ, ಖಂಡನೆಗಳು ವ್ಯಕ್ತಗೊಂಡಿವೆ.

ಜಾತ್ಯತೀತ ಪ್ರತಿಪಕ್ಷಗಳು ಇತ್ತೀಚೆಗೆ ರಚಿಸಿಕೊಂಡ 'ಇಂಡಿಯ' ಬಣ ಕೂಡ ಇದನ್ನು ಬಲವಾಗಿ ಖಂಡಿಸುತ್ತ ತಾವು ಸಂವಿಧಾನ ರಕ್ಷಿಸಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ವಿಷಯದಲ್ಲಿ ಮಾಧ್ಯಮಗಳಿಗೆ ಬೆಂಬಲವಾಗಿ ದೃಢವಾಗಿ ನಿಲ್ಲುವುದಾಗಿ ಹೇಳಿದೆ.

ಇದು ಬಿಹಾರದಲ್ಲಿ ಜಾತಿ ಜನಗಣತಿಯ ಮಾಹಿತಿಗಳಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನ ಎಂದು ಕಾಂಗ್ರೆಸ್ ಪಕ್ಷದ ವಕ್ತಾರರು ಟಿಪ್ಪಣಿ ಮಾಡಿದ್ದಾರೆ.

'ಧೀರ ದನಿಗಳ ಬಾಯಿ ಮುಚ್ಚಿಸುವ ಪ್ರಯತ್ನ'

ಪ್ರೊ.ಪ್ರಭಾತ್ ಪಟ್ನಾಯಕ್, ಪ್ರೊ. ಇರ್ಫಾನ್ ಹಬೀಬ್, ಡಾ.ಸಿ.ಪಿ.ಚಂದ್ರಶೇಖರ್, ಎಂ.ಕೆ.ರೈನಾ ಮತ್ತಿತರ ಅರ್ಥಶಾಸ್ತ್ರಜ್ಞರು, ಇತಿಹಾಸಕಾರರು, ಕಲಾವಿದರು ಮುಂತಾದ 60ಕ್ಕೂ ಹೆಚ್ಚು ಹಿರಿಯ ಚಿಂತಕರು ಇದನ್ನು ಪೋಲೀಸರ ಈ ಮೇರೆ ಮೀರಿದ ಕ್ರಮ ಎಂದು ನಿಸ್ಸಂದಿಗ್ಧವಾಗಿ ಖಂಡಿಸುವುದಾಗಿ ಹೇಳುತ್ತ, ಪೋಲೀಸ್ ಮತ್ತು ಇತರ ಏಜೆನ್ಸಿಗಳು ತಳೆಯುವ ಪ್ರಜಾಪ್ರಭುತ್ವ–ವಿರೋಧಿ ವಿಧಾನಗಳಿಗೆ ಗುರಿಯಾಗುವ ಎಲ್ಲರೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸಿದ್ದಾರೆ.

ಪ್ರಸಿದ್ಧ ಸಾಹಿತಿಗಳಾದ ಪೆರುಮಾಳ್ ಮುರುಗನ್, ಗೀತಾಂಜಲಿಶ್ರೀ, ಕೆ.ಆರ್.ಮೀರ, ವಿ.ಗೀತ, ಪತ್ರಕರ್ತ–ಲೇಖಕರಾದ ಪಿ.ಸಾಯಿನಾಥ್, ಇತಿಹಾಸಕಾರ ರಾಮಚಂದ್ರ ಗುಹ, ಅರುಣಾ ರಾಯ್, ಸಂಗೀತಗಾರ ಟಿ.ಎಂ. ಕೃಷ್ಣ ಮುಂತಾದ ನಾಗರಿಕ ಸಮಾಜದ ಪ್ರತಿಷ್ಠಿತರು ಇದನ್ನು ಧೀರ ದನಿಗಳನ್ನು ಸುಮ್ಮನಾಗಿಸಲು ಹೆದರಿಸುವ ಪ್ರಯತ್ನ ಎಂದು ಖಂಡಿಸಿದ್ದಾರೆ. ದಿಲ್ಲಿ ಪೋಲೀಸ್ ವಿಚಾರಣೆ ನಡೆಸುತ್ತಿರುವ ಪತ್ರಕರ್ತರೆಲ್ಲರೂ ತಮ್ಮ ಕ್ಷೇತ್ರದಲ್ಲಿ ಪ್ರಶಂಸಾರ್ಹ ಕೊಡುಗೆಗಳನ್ನು ನೀಡಿರುವ ಪ್ರಸಿದ್ಧ ವ್ಯಕ್ತಿಗಳಾಗಿದ್ದು, ಅವರ ದನಿಗಳನ್ನು ಅಡಗಿಸುವ ಪ್ರಯತ್ನ ಭಾರತದ ಪ್ರಜಾಪ್ರಭುತ್ವದ ಭಾವನೆಯ ಮೇಲ ನಡೆಸುವ ಪ್ರಹಾರವಾಗುತ್ತದೆ ಎಂದು ಅರು ಎಚ್ಚರಿಸಿದ್ದಾರೆ.

ಪ್ರೆಸ್ ಕ್ಲಬ್ ಆಫ್ ಇಂಡಿಯಾ ಈ ದಾಳಿಗಳ ಬಗ್ಗೆ ಕಳವಳ ವ್ಯಕ್ತಪಡಿಸುತ್ತ ಈ ಪತ್ರಕರ್ತರಿಗೆ ಸೌಹಾರ್ದ ವ್ಯಕ್ತಪಡಿಸಿದೆ ಮತ್ತು ಸರಕಾರ ಈ ಕಾರ್ಯಾಚರಣೆಯ ವಿವರಗಳನ್ನು ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದೆ. ಇಂಟರ್ನೆಟ್ ಫ್ರೀಡಂ ಫೌಂಡೇಷನ್ ಕೂಡ ಇದು ಪತ್ರಿಕಾ ಸ್ವಾತಂತ್ರ್ಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಆತಂಕ ವ್ಯಕ್ತಪಡಿಸಿದೆ.

ರಾಷ್ಟ್ರೀಯ ಪತ್ರಕರ್ತರ ಒಕ್ಕೂಟ, ದೆಹಲಿ ಪತ್ರಕರ್ತರ ಒಕ್ಕೂಟ ಮತ್ತು ಕೇರಳದ ಕಾರ್ಯನಿರತ ಪತ್ರಕರ್ತರ ಒಕ್ಕೂಟ (ದೆಹಲಿ ಘಟಕ) ಇದು ಪತ್ರಿಕಾ ಸ್ವಾತಂತ್ರ್ಯವನ್ನು ಹಿಸುಕಿ ಹಾಕುವ ಕೇಂದ್ರ ಸರಕಾರದ ಮತ್ತೊಂದು ಪ್ರಯತ್ನ, ಮಾಧ್ಯಮ ಸಂಸ್ಥೆಯಲ್ಲಿರುವ ಬಹುತೇಕ ಎಲ್ಲ ಉದ್ಯೋಗಿಗಳ ಮೇಲೆ ದಾಳಿ ನಡೆಸಿ ಬೆದರಿಸುವ ಇಂತಹ ಕ್ರಮವನ್ನು ಹಿಂದೆಂದೂ ಕಂಡಿಲ್ಲ ಎಂದು ಹೇಳಿವೆ.

ಈ ಹೊಸ ದಾಳಿಗಳು ಜನರ ಜ್ವಲಂತ ಜೀವನೋಪಾಯದ ಸಮಸ್ಯೆಗಳಿಂದ ಸಾರ್ವಜನಿಕರ ಗಮನವನ್ನು ಬೇರೆಡೆಗೆ ತಿರುಗಿಸಲು ದುರದೃಷ್ಟವಶಾತ್, ಆಳುವ ಪಕ್ಷದ ರಾಜಕೀಯ ಅಜೆಂಡಾವನ್ನು ಮುಂದೊತ್ತುವುದಕ್ಕಾಗಿ ಪತ್ರಕರ್ತರನ್ನು ಗುರಿಯಾಗಿಸಲಾಗುತ್ತಿದೆ ಎಂದು ಈ ಸಂಘಟನೆಗಳು ಹೇಳಿವೆ. ಈ ರೀತಿ ಸುಳ್ಳು ಆರೋಪ ಹೊರಿಸಿ ಬೇಟೆಯಾಡುವುದರ ವಿರುದ್ಧ ಮಾಧ್ಯಮ ಬಂಧುಗಳು ಪ್ರತಿಭಟಿಸಬೇಕೆಂದು ಅವು ಒತ್ತಾಯಿಸಿವೆ.

ಪತ್ರಕರ್ತರನ್ನು ಕ್ರಿಮಿನಲ್‌ಗಳೆಂದು ಚಿತ್ರಿಸುವುದನ್ನು ನಿಲ್ಲಿಸಿ– ಪಿಯುಸಿಎಲ್

ಯುಎಪಿಎ ಮತ್ತು ಸೆಕ್ಷನ್‌ನ 13, 16, 17, 18 ಮತ್ತು 22 ಸಿ ಕ್ರೂರ ಭಯೋತ್ಪಾದನೆ ಸೆಕ್ಷನ್‌ಗಳ ಅಡಿಯಲ್ಲಿ ಪೊಲೀಸರು ತನಿಖೆ ನಡೆಸುತ್ತಿರುವುದು ಆಘಾತಕಾರಿಯಾಗಿದೆ ಎಂದು ನಾಗರಿಕ ಹಕ್ಕುಗಳ ಸಂಘಟನೆ ಪಿಯುಸಿಎಲ್ ಹೇಳಿದೆ.

ನ್ಯೂಸ್‌ಕ್ಲಿಕ್ ಮತ್ತು ಪ್ರಬೀರ್ ಪುರಕಾಯಸ್ಥ ವಿರುದ್ಧ ಇಡಿ, ಐಟಿ ಮತ್ತು ಸಿಬಿಐನಿಂದ ಪ್ರಕರಣಗಳು ಇದ್ದರೂ, ಸಂಪಾದಕರು ಮತ್ತು ಪತ್ರಕರ್ತರು ಹಿಂದೆ ಸರಿಯದೆ ತಮ್ಮ ವೃತ್ತಿಪರ ಜವಾಬ್ದಾರಿಯನ್ನು ನಿರ್ಭಯವಾಗಿ ನಿರ್ವಹಿಸುತ್ತಿದ್ದಾರೆ. ಅದರ ನಿಷ್ಕಳಂಕ ವರದಿಗಾರಿಕೆ ಅಧಿಕಾರದಲ್ಲಿರುವವರಿಗೆ ನುಂಗಲಾರದ ತುತ್ತಾಗಿದೆ.

ನ್ಯೂಸ್‌ಕ್ಲಿಕ್ ಮತ್ತು ಪ್ರಬೀರ್ ಪುರ್ಕಾಯಸ್ಥ ವಿರುದ್ಧದ ಎಲ್ಲಾ ಪ್ರಕರಣಗಳನ್ನು ಮುಂದಿನ ವಾರ ದೆಹಲಿ ಹೈಕೋರ್ಟ್‌ನ ಮುಂದೆ ಪಟ್ಟಿ ಮಾಡಲಾಗುತ್ತಿರುವ ಸಮಯದಲ್ಲಿ ಈ ದಾಳಿ ನಡೆದಿದೆ. ಹೈಕೋರ್ಟ್ ಅವರ ವಿರುದ್ಧ ಯಾವುದೇ ಬಲವಂತದ ಕ್ರಮ ತೆಗೆದುಕೊಳ್ಳಬಾರದು ಎಂದು ಆದೇಶ ನೀಡಿದೆ. ಸಾರ್ವಜನಿಕ ಅಭಿಪ್ರಾಯ ಮತ್ತು ನ್ಯಾಯಾಲಯದ ಮೇಲೆ ಪ್ರಭಾವ ಬೀರುವ ಸಲುವಾಗಿ ಈ ದಾಳಿಗಳನ್ನು ನಡೆಸಲಾಗಿದೆ ಎಂದು ಪಿಯುಸಿಎಲ್ ಹೇಳಿದೆ.

ಸಂವಿಧಾನದ ಕಲಮು 19(1)(ಎ) ಅಡಿಯಲ್ಲಿ ಸಾಂವಿಧಾನಿಕ ಹಕ್ಕಿನ ಚಲಾವಣೆಯನ್ನು ಭಯೋತ್ಪಾದನೆ ಸಂಬಂಧಿತ ಅಪರಾಧ ಅಥವಾ ಭಾರತದ ಸಾರ್ವಭೌಮತ್ವ ಮತ್ತು ಸಮಗ್ರತೆಗೆ ಸವಾಲೆಸೆಯುವ ಕಾನೂನುಬಾಹಿರ ಚಟುವಟಿಕೆ ಎಂದು ಹಣೆಪಟ್ಟಿ ಹಚ್ಚುವುದು ಭಯೋತ್ಪಾದನೆಯ ಅರ್ಥವನ್ನು ವಿರೂಪಗೊಳಿಸಿ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಅಪರಾಧೀಕರಿಸುವ ಹುನ್ನಾರ. ಇದು ದಾಳಿಗೊಳಗಾದ ಪತ್ರಕರ್ತರು ಮತ್ತು ಮಾಧ್ಯಮ ವೃತ್ತಿಪರರು ಭಯೋತ್ಪಾದನೆಯ ಉದ್ದೇಶಗಳಿಗಾಗಿ ಚೀನಾದ ಹಣವನ್ನು ಬಳಸುತ್ತಿದ್ದಾರೆ ಎಂಬ ಕಾಲ್ಪನಿಕ ಕಥನವನ್ನು ಸೃಷ್ಟಿಸಲು ಪ್ರಭುತ್ವ ಅಧಿಕಾರದ ದುರುಪಯೋಗವಲ್ಲದೇ ಬೇರೇನೂ ಅಲ್ಲ ಎಂದು ಅದು ಹೇಳಿದೆ.


ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತವು 180 ರಾಷ್ಟ್ರಗಳಲ್ಲಿ 161 ನೇ ಸ್ಥಾನದಲ್ಲಿದೆ. ಭಯೋತ್ಪಾದಕ ಕಾನೂನುಗಳ ಅಡಿಯಲ್ಲಿ ಪತ್ರಕರ್ತರ ಮೇಲೆ ಇಂತಹ ದಾಳಿಗಳು ಮತ್ತು ಕಿರುಕುಳಗಳು ಭಾರತದಲ್ಲಿ ಪತ್ರಕಾರಿತೆಯನ್ನು ಇನ್ನಷ್ಟು ಅತಂತ್ರಗೊಳಿಸುತ್ತವೆ ಮತ್ತು ಭಾರತವು 'ಪ್ರಜಾಪ್ರಭುತ್ವಗಳ ತಾಯಿ' ಮತ್ತು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವವಾಗಿದೆ ಎಂಬ ಸರ್ಕಾರದ ದಾವೆಗಳನ್ನು ಇನ್ನಷ್ಟು ಭ್ರಾಂತಿಕಾರಕಗೊಳಿಸುತ್ತದೆ ಎಂದಿರುವ ಪಿಯುಸಿಎಲ್, ಸಮಾಜದ ಎಲ್ಲ ವಿಭಾಗಗಳು ದಿಲ್ಲಿ ಪೋಲೀಸ್ ಮತ್ತು ಗೃಹ ವ್ಯವಹಾರಗಳ ಇಲಾಖೆಯ ಈ ಕೃತ್ಯವನ್ನು ಖಂಡಿಸಲು ಮುಂದೆ ಬರಬೇಕು, ಇಂದಿನ ಅಸಾಂವಿಧಾನಿಕ ದಾಳಿಗಳಲ್ಲಿ 1975–77ರ ತುರ್ತುಪರಿಸ್ಥಿತಿಯ ಪ್ರತಿಧ್ವನಿಗಳಿವೆ ಮತ್ತು ದಬ್ಬಾಳಿಕೆಯ ಮತ್ತು ಕಾನೂನುಹೀನ ಪ್ರಭುತ್ವದ ದುರಹಂಕಾರದ ವಿರುದ್ಧ ಎಲ್ಲರೂ ಒಗ್ಗಟ್ಟಿನಿಂದ ನಿಲ್ಲಬೇಕಾಗಿದೆ ಎಂದು ಪಿಯುಸಿಎಲ್ ಕರೆ ನೀಡಿದೆ. ●

ಹಿರಿಯ ಪತ್ರಕರ್ತ ಸಿ.ಆರ್. ಕೃಷ್ಣರಾವ್ ನಿಧನ

ಹಿರಿಯ ಪತ್ರಕರ್ತ, ಕಮ್ಯುನಿಸ್ಟ್ ನಾಯಕ, ಬರಹಗಾರರ ಬಳಗದಲ್ಲಿ ಸಿಆರ್‌ಕೆ ಎಂದೇ ಪರಿಚಿತವಾಗಿದ್ದ ಸಿ.ಆರ್. ಕೃಷ್ಣರಾವ್(93) ಅವರು ವಯೋ ಸಹಜ ಅನಾರೋಗ್ಯದಿಂದ ಮಂಗಳವಾರ ಮುಂಜಾನೆ ಕತ್ರಿಗುಪ್ಪೆಯ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಒಬ್ಬ ಮಗ, ಒಬ್ಬ ಮಗಳಿದ್ದಾರೆ. ಮೃತರ ಅಂತ್ಯಕ್ರಿಯೆ ಇಂದು(ಮಂಗಳವಾರ) ಮಧ್ಯಾಹ್ನ 3.30 ಕ್ಕೆ ಚಾಮರಾಜಪೇಟೆಯ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಆಪ್ತ ಮೂಲಗಳು ತಿಳಿಸಿವೆ. ಐದು ದಶಕಗಳ ಕಾಲ ಮಾಧ್ಯಮ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಸಿ.ಆರ್.ಕೆ. ಅವರು, ಮೈಸೂರು ರಾಜ್ಯ ಪತ್ರಕರ್ತರ ಸಂಘವನ್ನು ಸಮಗ್ರವಾಗಿ ಸಂಘಟಿಸಿ, ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘವನ್ನಾಗಿ ರೂಪಿಸಲು ಶ್ರಮಿಸಿದ ಮಹನೀಯರಲ್ಲೊಬ್ಬರು. 40ರ ದಶಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಎಡಪಂಥೀಯ ಚಳವಳಿಯನ್ನು ಪ್ರವೇಶಿಸಿ ನಂತರ "ಜನಶಕ್ತಿ" ಪತ್ರಿಕೆ ಸಂಪಾದಕತ್ವ ವಹಿಸಿದರು. 60ರ ದಶಕದಲ್ಲಿ ತಮ್ಮದೇ ಚಲನಚಿತ್ರ ಸಾಪ್ತಾಹಿಕ 'ಮೇನಕಾ' ವನ್ನು ವಿ.ಎನ್.ಸುಬ್ಬರಾವ್ ಅವರ ಜೊತೆ ಸೇರಿ ಕೆಲ ವರ್ಷ ನಡೆಸಿದರು. ನವಕರ್ನಾಟಕ ಪ್ರಕಾಶನ ಸಂಸ್ಥೆಯ ಸ್ಥಾಪಕರಲ್ಲೊಬ್ಬರಾದ ಕೃಷ್ಣರಾವ್, ಮದ್ರಾಸಿನಿಂದ ಬರುತ್ತಿದ್ದ 'ಸೋವಿಯತ್ ದೇಶ' ಪತ್ರಿಕೆಯಲ್ಲೂ ಕೆಲ ಕಾಲ ಸೇವೆ ಸಲ್ಲಿಸಿದರು. ನಂತರ ಬೆಂಗಳೂರಿನಲ್ಲಿ ನೆಲೆಸಿ ನವಕರ್ನಾಟಕ ಪ್ರಕಾಶನ ಸಂಸ್ಥೆಯ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದರು.

ಅಗಲಿದ ಹಿರಿಯ ಸಂಗಾತಿಗೆ ಜನಶಕ್ತಿ ಕನ್ನಡ ವಾರ ಪತ್ರಿಕೆ ಹಾಗೂ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಗಳು ಶ್ರದ್ಧಾಂಜಲಿ ಅರ್ಪಿಸಿವೆ.

ರಾಜ್ಯ ಸಮಿತಿಯ ಸದಸ್ಯ, ಕಾರ್ಯನಿರತ ಸಂಪಾದಕರಾದ ಎಸ್.ವೈ.ಗುರುಶಾಂತ್, ಸಿ. ಸಿದ್ದಯ್ಯ ಮತ್ತು ಆರ್.ರಾಮಕೃಷ್ಣ ರವರು ಅಂತ್ಯಕ್ರಿಯೆ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.









‘ವಾಚಾತಿ’ ಆದಿವಾಸಿ ಮಹಿಳೆಯರ ಮೇಲಿನ ಅತ್ಯಾಚಾರಿಗಳಿಗೆ ಶಿಕ್ಷೆಯನ್ನು ಎತ್ತಿಹಿಡಿದ ಮದ್ರಾಸ್ ಹೈಕೋರ್ಟ್

215 ಜನರನ್ನು ತಪ್ಪಿತಸ್ಥರು ಎಂದು ತೀರ್ಪು ನೀಡಿದ ಕೋರ್ಟ್
ಸಂತ್ರಸ್ತ ಮಹಿಳೆಯರಿಗೆ ರೂ. 10 ಲಕ್ಷ ಪರಿಹಾರ ನೀಡುವಂತೆ ಆದೇಶ

ಅರಣ್ಯ ಇಲಾಖೆ, ಪೊಲೀಸ್ ಮತ್ತು ಕಂದಾಯ ಇಲಾಖೆ ಈ ಮೂರು ಸರ್ಕಾರಿ ಇಲಾಖೆಗಳ ಜಂಟಿ ಸಮಿತಿ, 1992ರಲ್ಲಿ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ‘ವಾಚ್ಚಾತ್ತಿ’ ಎಂಬ ಪ್ರದೇಶದಲ್ಲಿನ ಆದಿವಾಸಿಗಳ ಮೇಲೆ ನಡೆಸಿದ ಅರಾಜಕತೆ, ಕ್ರೌರ್ಯ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟ್, ಬದುಕುಳಿದಿರುವ 215 ಆರೋಪಿಗಳ ಶಿಕ್ಷೆಯನ್ನು ಎತ್ತಿಹಿಡಿಯುವ ನಿರ್ಣಾಯಕ ತೀರ್ಪು ನೀಡಿದೆ. ಸೆಪ್ಟೆಂಬರ್ 29ರಂದು ನೀಡಿದ ಈ ತೀರ್ಪಿನಲ್ಲಿ, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಗುಡ್ಡಗಾಡು ಮಹಿಳೆಯರಿಗೆ ತಲಾ 10 ಲಕ್ಷ ರೂಪಾಯಿ ಪರಿಹಾರ ನೀಡುವಂತೆ ಮದ್ರಾಸ್ ಹೈಕೋರ್ಟ್ ನ್ಯಾಯಾಧೀಶರಾದ ಬಿ. ವೇಲ್ಮುರುಗನ್ ಆದೇಶಿಸಿದ್ದಾರೆ. ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಗುಡ್ಡಗಾಡು ಜನರ ಸಂಘ ಸೇರಿದಂತೆ ಕೆಲವು ಪ್ರಜಾಸತ್ತಾತ್ಮಕ ಸಂಘಟನೆಗಳ 31 ವರ್ಷಗಳ ನಿರಂತರ ಹೋರಾಟಕ್ಕೆ ಕೊನೆಗೂ ನ್ಯಾಯ ದೊರಕಿದೆ.

1992ರಲ್ಲಿ ನಡೆದ ಭೀಕರ ದೌರ್ಜನ್ಯ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಸಿತೇರಿ ಬೆಟ್ಟಗಳ ತಪ್ಪಲಿನಲ್ಲಿ ನೆಲೆಸಿರುವ ಪುಟ್ಟ ಬುಡಕಟ್ಟು ಗ್ರಾಮ ವಚಾತಿ. ತಮಿಳುನಾಡಿನಲ್ಲಿ ಜಯಲಲಿತಾ ನೇತೃತ್ವದ ಎಐಎಡಿಎಂಕೆ ಸರ್ಕಾರ ಆಡಳಿತದಲ್ಲಿತ್ತು. ಜೂನ್ 20, 1992 ರಂದು, ವಾಚಾತಿ ಗ್ರಾಮದ ಪಕ್ಕದ ಬೆಟ್ಟ ಪ್ರದೇಶದಲ್ಲಿ ಶ್ರೀಗಂಧದ ಮರವನ್ನು ಕಡಿಯುವುದರ ವಿರುದ್ಧ ದಾಳಿಯ ನೆಪದಲ್ಲಿ ಅರಣ್ಯ, ಪೊಲೀಸ್ ಮತ್ತು ಕಂದಾಯ ಸಿಬ್ಬಂದಿಗಳ 600 ಸಿಬ್ಬಂದಿಗಳ ತುಕಡಿಯೊಂದು ಮುತ್ತಿಗೆ ಹಾಕಿತು. ಅವರು ಮೂರು ದಿನಗಳ ಕಾಲ ಅಲ್ಲಿಯೇ ಬೀಡಾರ ಹೂಡಿದರು. ಅವರು ಅಲ್ಲಿ ಸುಮ್ಮನೆ ಇರಲಿಲ್ಲ. ಗುಡ್ಡಗಾಡು ನಿವಾಸಿಗಳ ಮೇಲೆ ದೊಡ್ಡದೊಂದು ಅರಾಜಕತೆಯನ್ನೇ ಸೃಷ್ಟಿಸಿದರು. ಆದಿವಾಸಿಗಳ ಮನೆಗಳು, ಸೊತ್ತುಗಳನ್ನು ಲೂಟಿ ಮಾಡಿದರು. ಕುರಿ, ಕೋಳಿಗಳನ್ನು ಹಿಡಿದು, ಕೊಯ್ದು, ಅಲ್ಲೇ ಅಡುಗೆ ಮಾಡಿ ತಿಂದರು. ಪಡಿತರ ಅಂಗಡಿಯಲ್ಲಿದ್ದ ಆಹಾರ ಧಾನ್ಯಗಳನ್ನು ತೆಗೆದು ಹೊರಗೆಸೆದರು. ಆದಿವಾಸಿಗಳು ಬಳಸುತ್ತಿದ್ದ ಕುಡಿಯುವ ನೀರಿನ ತೊಟ್ಟಿಗೆ ಸೀಮೆ ಎಣ್ಣೆ ಸುರಿದರು. ಮನಸೋ ಇಚ್ಛೆ ದಾಂಧಲೆ ನಡೆಸಿದರು.

ಈ ಕ್ರೂರಿಗಳು ಇಷ್ಟಕ್ಕೇ ಸುಮ್ಮನಾಗಲಿಲ್ಲ. ಶ್ರೀಗಂಧದ ಮರವನ್ನು ಕದ್ದೊಯ್ದಿದ್ದಾರೆ ಎಂದು ಆರೋಪಿಸಿ 90 ಮಹಿಳೆಯರು, 28 ಮಕ್ಕಳು, 15 ಪುರುಷರು ಸೇರಿದಂತೆ 133 ಮಂದಿಯನ್ನು ಬಂಧಿಸಿ ಎಳೆದೊಯ್ದರು. ಈ 90 ಮಹಿಳೆಯರ ಪೈಕಿ 18 ಮಹಿಳೆಯರ ಮೇಲೆ ರಾತ್ರಿಯಿಡೀ ಸಾಮೂಹಿಕ ಅತ್ಯಾಚಾರ ನಡೆಸಿದರು. ಬಾಯ್ಬಿಟ್ಟು ಹೇಳಲಾಗದ ಕೆಲವು ಚಿತ್ರಹಿಂಸೆಗಳಿಗೆ ಆ ಮಹಿಳೆಯರನ್ನು ಒಳಪಡಿಸಿದರು. ತಮ್ಮ ಮೇಲೆ ನಡೆದ ದೌರ್ಜನ್ಯಗಳ ವಿರುದ್ಧ ಧ್ವನಿ ಎತ್ತಲೂ ಆದಿವಾಸಿಗಳು ಭಯಪಡುತ್ತಿದ್ದರು. ಅಧಿಕಾರದಲ್ಲಿರುವವರು ನಡೆಸಿದ ಈ ದೌರ್ಜನ್ಯದ ವಿಷಯಗಳು, ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಆದಿವಾಸಿಗಳ ಸಂಘದ ಮಧ್ಯಪ್ರವೇಶದ ನಂತರವೇ ಇದು ಬೆಳಕಿಗೆ ಬಂದಿತು. ಸಂತ್ರಸ್ತರಿಗೆ ನ್ಯಾಯ ಕೊಡಿಸಲು ಜನ ವೇದಿಕೆಯಲ್ಲಿ ಮಾತ್ರವಲ್ಲ, ವಿಧಾನಸಭೆ, ಸಂಸತ್ತಿನಲ್ಲಿ, ನ್ಯಾಯಾಂಗ ಸೇರಿದಂತೆ ಎಲ್ಲಾ ಹಂತಗಳಲ್ಲಿ ಹೋರಾಡಿದ್ದು ಮಾರ್ಕ್ಸಿಸ್ಟ್ ಕಮ್ಯುನಿಸ್ಟ್ ಪಕ್ಷ. ತಮಿಳುನಾಡು ಬುಡಕಟ್ಟು ಸಂಘದ ವ್ಯಾಪಕ ಕಾನೂನು ಪ್ರಯತ್ನಗಳ ನಂತರ, ಭೀಕರ ಘಟನೆಯ ಮೂರು ವರ್ಷಗಳ ನಂತರ ತನಿಖೆಯನ್ನು ವಹಿಸಿಕೊಂಡ ಸಿಬಿಐ ಸಲ್ಲಿಸಿದ ಚಾರ್ಜ್‌ಶೀಟ್ ಸಲ್ಲಿಸಿತು.

19 ವರ್ಷಗಳ ನಿರಂತರ ಹೋರಾಟ

ವಾಚಾತಿ ಜನರ ಜೊತೆಗೂಡಿ ಸುಮಾರು 19 ವರ್ಷಗಳಿಂದ ನಡೆದ ಈ ಕಾನೂನು ಹೋರಾಟದ ಹಿನ್ನೆಲೆಯಲ್ಲಿ, ಸ್ವಾತಂತ್ರ್ಯೋತ್ತರ ಭಾರತದ ಕಾನೂನು ಇತಿಹಾಸದಲ್ಲಿ ಒಂದು ಮಹತ್ವದ ಕ್ಷಣದಲ್ಲಿ, ಧರ್ಮಪುರಿ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಎಸ್. ಕುಮಾರ ಗುರು ಅವರು, 2011ರ ಸೆಪ್ಟೆಂಬರ್ 29ರಂದು, ಸಿಬಿಐ ಸಲ್ಲಿಸಿದ ಚಾರ್ಜ್‌ಶೀಟ್‌ನಲ್ಲಿ ಆರೋಪಿತರಾದ ಎಲ್ಲಾ 269 ಅಧಿಕಾರಿಗಳನ್ನು ದೋಷಿ ಎಂದು ತೀರ್ಪು ನೀಡಿದರು. ಇವರಲ್ಲಿ 17 ಮಂದಿ ಅತ್ಯಾಚಾರದ ಆರೋಪದ ಮೇಲೆ ಶಿಕ್ಷೆಗೊಳಗಾದವರು. ಪ್ರಸ್ತುತ ತೀರ್ಪಿನ ಸಮಯದಲ್ಲಿ, 52 ಆರೋಪಿಗಳು ಅದಾಗಲೇ ನಿಧನರಾಗಿದ್ದರು. ಉಳಿದ 217 ಅಧಿಕಾರಿಗಳು ರಾಜ್ಯ ಹಿಂಸಾಚಾರದಲ್ಲಿ ಭಾಗಿಯಾಗಿದ್ದಕ್ಕಾಗಿ ಜೈಲು ಶಿಕ್ಷೆಗೆ ಗುರಿಯಾದರು. ಒಂದೇ ಪ್ರಕರಣದಲ್ಲಿ ಒಂದಕ್ಕಿಂತ ಹೆಚ್ಚು ಅಪರಾಧಿಗಳಿಗೆ ಏಕಕಾಲದಲ್ಲಿ ಶಿಕ್ಷೆ ವಿಧಿಸಿದ ಮಹತ್ವದ ತೀರ್ಪು ಇದಾಗಿತ್ತು. ಇದು ಇಡೀ ದೇಶವೇ ತಿರುಗಿ ನೋಡುವಂತೆ ಮಾಡಿತು.

ಮೇಲ್ಮನವಿ–ವಿಚಾರಣೆ

ಈ ಸನ್ನಿವೇಶದಲ್ಲಿ, ಗರಿಷ್ಠ ಶಿಕ್ಷೆ ಪಡೆದ 27 ಮಂದಿ ಮದ್ರಾಸ್ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಈ ಅರ್ಜಿಗಳನ್ನು ನ್ಯಾಯಾಧೀಶ ಬಿ. ವೇಲ್ಮುರುಗನ್ ತನಿಖೆ ನಡೆಸುತ್ತಿದ್ದರು. ವಿಚಾರಣೆಯ ಒಂದು ಭಾಗವಾಗಿ, ಈ ಪ್ರಕರಣಕ್ಕೆ ಸಂಬಂಧಿಸಿದ ಸ್ಥಳಗಳು ಮತ್ತು ಜನರ ನಡುವೆ ವೈಯಕ್ತಿಕ ತನಿಖೆ ನಡೆಸಲು ನಿರ್ಧರಿಸಲಾಯಿತು. ಅದರಂತೆ ಮಾರ್ಚ್ 4, 2023 ರಂದು ನ್ಯಾಯಾಧೀಶ ಪಿ. ವೇಲ್ಮುರುಗನ್ ನೇರವಾಗಿ ಆ ಪ್ರದೇಶಗಳಿಗೆ ಹೋದರು. ಘಟನೆಗೆ ಸಂಬಂಧಿಸಿವೆ ಎನ್ನಲಾದ ಗಿರಿಜನ ಪ್ರಾಥಮಿಕ ಶಾಲೆ, ಕೆರೆ ಪ್ರದೇಶ, ಆಲದ ಮರ, ನೀರಿನ ತೊಟ್ಟಿ, ಬೆಟ್ಟ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಂತ್ರಸ್ತರನ್ನು ಭೇಟಿ ಮಾಡಿ, ಪ್ರಕರಣಕ್ಕೆ ಸಂಬಂದಿಸಿ ಮಾತ್ರ ಮಾತನಾಡದೆ, ಅದನ್ನು ಹೊರತುಪಡಿಸಿ ಆದಿವಾಸಿಗಳ ಇತರ ಬೇಡಿಕೆಗಳನ್ನು ಸಹ ಕೇಳಿದರು.

ತೀರ್ಪಿನಲ್ಲಿರುವ ಅಂಶಗಳು

ಈ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಪಿ ವೇಲ್ಮುರುಗನ್ ಅವರು ಶುಕ್ರವಾರ ಸೆಪ್ಟೆಂಬರ್ 29 ರಂದು ತಮ್ಮ ತೀರ್ಪು ಪ್ರಕಟಿಸಿದರು. ಅಂದು ವಾಚಾತಿ ಪ್ರಕರಣದ ಆರೋಪಿಗಳು ಸಲ್ಲಿಸಿದ್ದ ಎಲ್ಲ ಮೇಲ್ಮನವಿಗಳನ್ನು ವಜಾಗೊಳಿಸುವುದಾಗಿ ಹೇಳಿದ ನ್ಯಾಯಾಧೀಶ ಪಿ. ವೇಲ್ಮುರುಗನ್ ಅವರು, ಧರ್ಮಪುರಿ ಜಿಲ್ಲಾ ಸತ್ರ ನ್ಯಾಯಾಲಯದ ನ್ಯಾಯಾಧೀಶರು ನೀಡಿದ್ದ ತೀರ್ಪನ್ನು ಎತ್ತಿಹಿಡಿದಿದ್ದಾರೆ.

ಪ್ರತಿ ಅತ್ಯಾಚಾರ ಸಂತ್ರಸ್ತರಿಗೆ ಈ ಹಿಂದೆ ನೀಡಲಾಗಿದ್ದ 15 ಸಾವಿರ ರೂ.ನಿಂದ 10 ಲಕ್ಷ ರೂ.ಗಳ ಪರಿಹಾರವನ್ನು ಪರಿಷ್ಕರಿಸುವಂತೆ ರಾಜ್ಯ ಸರಕಾರಕ್ಕೆ ಸೂಚಿಸಿದ್ದಾರೆ. ಇದಲ್ಲದೆ, ಅತ್ಯಾಚಾರ ಅಪರಾಧಗಳಿಗೆ ಶಿಕ್ಷೆಗೊಳಗಾದವರಿಂದ ಈ ಪರಿಹಾರದ ಶೇಕಡಾ 50 ರಷ್ಟನ್ನು ವಸೂಲಿ ಮಾಡುವಂತೆ ನ್ಯಾಯಾಧೀಶರು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ. ಇದಲ್ಲದೆ, ಅತ್ಯಾಚಾರ ಸಂತ್ರಸ್ತರಿಗೆ ಸರಿಯಾದ ವೈದ್ಯಕೀಯ ನೆರವು ನೀಡಲು ನಿರಾಕರಿಸಿದ ವೈದ್ಯಕೀಯ ಸಿಬ್ಬಂದಿಯಿಂದ ಪರಿಹಾರವನ್ನು ವಸೂಲಿ ಮಾಡುವಂತೆ ನ್ಯಾಯಮೂರ್ತಿ ವೇಲ್ಮುರುಗನ್ ಆದೇಶಿಸಿದ್ದಾರೆ. ದುರ್ಬಲ ಗ್ರಾಮಸ್ಥರನ್ನು ರಕ್ಷಿಸುವಲ್ಲಿ ವಿಫಲರಾದ ಹಿಂದಿನ ಧರ್ಮಪುರಿ ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಮತ್ತು ಜಿಲ್ಲಾ ಅರಣ್ಯಾಧಿಕಾರಿ ವಿರುದ್ಧ ಕಠಿಣ ಕ್ರಮಕ್ಕೆ ಆದೇಶಿಸಲಾಗಿದೆ.

ಅತ್ಯಾಚಾರ ಸಂತ್ರಸ್ತರಿಗೆ ಸರ್ಕಾರಿ ಉದ್ಯೋಗ ನೀಡುವಂತೆ ನ್ಯಾಯಾಧೀಶರು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ್ದಾರೆ. ವಿವಿಧ ಅಂಶಗಳಿಂದ ಸರ್ಕಾರಿ ಉದ್ಯೋಗಗಳು ಕಾರ್ಯಸಾಧ್ಯವಾಗದ ಸಂದರ್ಭಗಳಲ್ಲಿ, ಸಂತ್ರಸ್ತರಿಗೆ ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ಸಾಕಷ್ಟು ತರಬೇತಿಯನ್ನು ನೀಡಬೇಕು. ಹೆಚ್ಚುವರಿಯಾಗಿ, ವಚತಿ ಗ್ರಾಮದಲ್ಲಿ ತಕ್ಷಣದ ಅಭಿವೃದ್ಧಿ ಚಟುವಟಿಕೆಗಳನ್ನು ಪ್ರಾರಂಭಿಸಲು ರಾಜ್ಯ ಸರ್ಕಾರಕ್ಕೆ ನ್ಯಾಯಮೂರ್ತಿ ವೇಲ್ಮುರುಗನ್ ಆದೇಶಿಸಿದ್ದಾರೆ. ಸಮಗ್ರ ಅಭಿವೃದ್ಧಿಗೆ ಒತ್ತು ನೀಡಿ, ಎಲ್ಲ ರೀತಿಯಲ್ಲೂ ಅಭಿವೃದ್ಧಿ ಪಡಿಸಲು ಸಂಘಟಿತ ಪ್ರಯತ್ನ ನಡೆಸಬೇಕಿದೆ.


ಹಲವು ಸಂಘಟನೆಗಳು ಕೈಜೋಡಿಸಿದವು

ಆದಿವಾಸಿಗಳ ಮೇಲೆ ನಡೆದ ದೌರ್ಜನ್ಯದ ವಿರುದ್ಧ ಹೋರಾಡಿ, ಆರೋಪಿಗಳಿಗೆ ಶಿಕ್ಷೆಯಾಗುವಂತೆ ನೋಡಿಕೊಂಡ ಈ ಸುದೀರ್ಘ ಹೊರಾಟಕ್ಕೆ ಹಲವು ಸಂಘಟನೆಗಳು ಕೈಜೋಡಿಸಿದವು. ಕೆ. ಷಣ್ಮುಗಂ (ಈಗ CPI(M) ಕೇಂದ್ರ ಸಮಿತಿ ಸದಸ್ಯ) ನೇತೃತ್ವದ ತಮಿಳುನಾಡು ಬುಡಕಟ್ಟು ಸಂಘವು ಈ ಸುದೀರ್ಘ ಮತ್ತು ಪ್ರಯಾಸಕರ ಕಾನೂನು ಹೋರಾಟದ ಉದ್ದಕ್ಕೂ ಬಲಿಪಶುಗಳ ಪರವಾಗಿ ದೃಢವಾಗಿ ನಿಂತಿದ್ದರೆ, ಅಖಖಿಗ, ಂಖಏಖ, ಮತ್ತು ವಿಮಾ ಮತ್ತು ಬ್ಯಾಂಕ್ ನೌಕರರ ಸಂಘಗಳು ಸಂತ್ರಸ್ತರಲ್ಲಿ ಸಹಜತೆಯ ಭಾವನೆಯನ್ನು ಪುನಃಸ್ಥಾಪಿಸಲು ಬೆಂಬಲವನ್ನು ನೀಡುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿವೆ. ವಿಶೇಷವೆಂದರೆ, ಸಾರಿಗೆ ಒಕ್ಕೂಟದ ಸದಸ್ಯರು (ಸಿಐಟಿಯು) ರಾಜ್ಯಾದ್ಯಂತ ಬಸ್ ನಿಲ್ದಾಣಗಳಲ್ಲಿ ಹುಂಡಿಗಳ ಮೂಲಕ ದೇಣಿಗೆ ಸಂಗ್ರಹಿಸುವ ಮೂಲಕ ಒಗ್ಗಟ್ಟು ಪ್ರದರ್ಶಿಸಿದರು. ನಂತರ ಅವರು ಗ್ರಾಮದ ಪ್ರತಿ ಕುಟುಂಬಕ್ಕೆ ಅಡಿಗೆ ಪಾತ್ರೆಗಳನ್ನು ವಿತರಿಸಿದರು ಮತ್ತು ಉಳಿದ ಹಣವನ್ನು ಕಾನೂನು ವೆಚ್ಚಗಳನ್ನು ಭರಿಸಲು ಹಂಚಲಾಯಿತು.

ಕಾನೂನಿನ ಹಾರಾಟದಲ್ಲಿ, ಹಿರಿಯ ವಕೀಲರಾದ ಎನ್‌ಜಿಆರ್ ಪ್ರಸಾದ್ ಮತ್ತು ಆರ್ ವೈಗೈ (ಕಾಮ್ರೇಡ್ ಪಿ ರಾಮಮೂರ್ತಿ ಅವರ ಪುತ್ರಿ) ಸೇರಿದಂತೆ ವಕೀಲರ ಸಮರ್ಪಿತ ತಂಡವು ವಕೀಲರಾದ ಜಿ ಚಮ್ಕಿರಾಜ್, ಕೆ ಇಲಾಂಗೋ ಮತ್ತು ಸುಬ್ಬುರಾಮ್ ಅವರೊಂದಿಗೆ ಸಂತ್ರಸ್ತರ ದೃಷ್ಟಿಕೋನಗಳನ್ನು ವ್ಯಕ್ತಪಡಿಸುವಲ್ಲಿ ಈ ಪ್ರಯಾಣದ ಉದ್ದಕ್ಕೂ ಜೊತೆಯಾಗಿ ಕಾರ್ಯನಿರ್ವಹಿಸಿದರು.

ವಿಜಯೋತ್ಸವದಲ್ಲಿ ಸಂಭ್ರಮಿಸಿದರು

ಹೈಕೋರ್ಟ್ ತೀರ್ಪನ್ನು ಕೇಳಿದ ವಚಾತಿ ಜನರು ವಿಜಯೋತ್ಸವದಲ್ಲಿ ಸಂಭ್ರಮಿಸಿದರು. ಅವರು ಪಟಾಕಿ ಸಿಡಿಸುವ ಮೂಲಕ, ಮೆರವಣಿಗೆಗಳನ್ನು ಆಯೋಜಿಸುವ ಮೂಲಕ ಮತ್ತು ತಮಿಳುನಾಡು ಹಿಲ್ ಟ್ರೈಬ್ ಅಸೋಸಿಯೇಷನ್‌ನ ಮುಖಂಡರಿಗೆ ಸಿಹಿ ಹಂಚುವ ಮೂಲಕ ಈ ಸಂದರ್ಭವನ್ನು ಆಚರಿಸಿದರು. ಈ 30 ವರ್ಷಗಳ ಅವಧಿಯಲ್ಲಿ ಅವರ ಹೋರಾಟವನ್ನು ಗಮನಿಸಿದವರಿಗೆ ಅವರ ಸಂತೋಷದಾಯಕ ನೃತ್ಯಕ್ಕೆ ಸಾಕ್ಷಿಯಾಗುವುದು ಗಾಢವಾಗಿ ಚಲಿಸುವ ಕ್ಷಣವಾಗಿತ್ತು. ●



ಸಂಕಷ್ಟದಲ್ಲಿ ಆರ್ಥಿಕತೆ

ಪ್ರಕಾಶ್ ಕಾರತ್

ಕಳೆದ ಭಾನುವಾರ, ಹಳೆ ಪಿಂಚಣಿ ಯೋಜನೆಯನ್ನು ಮರುಸ್ಥಾಪಿಸುವಂತೆ ಒತ್ತಾಯಿಸಿ ಲಕ್ಷಾಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರು ರಾಜಧಾನಿ ನವದೆಹಲಿಯಲ್ಲಿ ಸಮಾವೇಶ ಗೊಂಡಿದ್ದರು. ಸಮೂಹ ಮಾಧ್ಯಮಗಳಲ್ಲಿ ಈ ಬೃಹತ್ ರಾಲಿಯ ಪ್ರಸಾರವು, ನಮ್ಮ ದೇಶವನ್ನು ಬಾಧಿಸುತ್ತಿರುವ ಆಳವಾದ ಆರ್ಥಿಕ ಅಸ್ವಸ್ಥತೆಯ ಪ್ರತಿಬಿಂಬವನ್ನು ಮರೆಮಾಚಿ ಕೇವಲ ಒಂದು ಘಟನೆ ಮಾತ್ರ ಎಂದು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿತ್ತು. ಹಳೆಯ ಪಿಂಚಣಿ ಯೋಜನೆಯ ಪ್ರಕಾರ, ಒಬ್ಬ ನೌಕರನು ತನ್ನ ಕೊನೆಯ ಸಂಬಳದ 50 ಪ್ರತಿಶತವನ್ನು ಪಿಂಚಣಿಯಾಗಿ ಪಡೆಯಲು ಅರ್ಹನಾಗಿರುತ್ತಾನೆ. ಹಣದುಬ್ಬರವನ್ನು ಲೆಕ್ಕಹಾಕಿ, ಅದಕ್ಕನುಗುಣವಾಗಿ, ಈ ಮೊತ್ತವನ್ನು ವಾರ್ಷಿಕವಾಗಿ ಸರಿಹೊಂದಿಸಲಾಗುತ್ತದೆ. ಮತ್ತೊಂದೆಡೆ, ಹೊಸ ಪಿಂಚಣಿ ಯೋಜನೆಯು ನಿವೃತ್ತ ಉದ್ಯೋಗಿಗಳಿಗೆ, ಹಳೆಯ ಪಿಂಚಣಿ ಯೋಜನೆಯಡಿಯಲ್ಲಿ ಅವರು ಪಡೆಯುತ್ತಿದ್ದ ಮೊತ್ತದ ಅರ್ಧಕ್ಕಿಂತ ಸ್ವಲ್ಪ ಹೆಚ್ಚಾಗಿರುತ್ತದೆ. 2004 ರ ನಂತರ ಸೇವೆಗೆ ಪ್ರವೇಶಿಸಿದ ಎಲ್ಲರೂ ಹೊಸ ಪಿಂಚಣಿ ಯೋಜನೆಯ ಪ್ರಯೋಜನವನ್ನು ಮಾತ್ರ ಪಡೆಯುತ್ತಾರೆ ಎಂದು ಕಾನೂನು ಕಡ್ಡಾಯ ಮಾಡಿದೆ.

20 ವರ್ಷಗಳ ನಂತರ ವಿವಿಧ ರಾಜ್ಯಗಳಲ್ಲಿ ಚುನಾವಣೆಗಳ ಮೇಲೆ ಪರಿಣಾಮ ಬೀರುವ ಜ್ವಲಂತ ಸಮಸ್ಯೆಯಾಗಿ ಇದೀಗ ಪರಿಣಮಿಸಿದೆ. ಈ ಅಂಶವು ಭಾರತವನ್ನು ಬಾಧಿಸುತ್ತಿರುವ ಜೀವನ ವೆಚ್ಚದ ಆಳವಾದ ಬಿಕ್ಕಟ್ಟನ್ನು ಹಾಗೂ ಬೆಲೆಗಳ ಹೆಚ್ಚಳ ಮತ್ತು ಕಡಿಮೆ ಆದಾಯವನ್ನು ಪ್ರತಿಬಿಂಬಿಸುತ್ತದೆ. ಮಧ್ಯಮ ವರ್ಗದವರಿಗೂ ಸಹ ಜೀವನೋಪಾಯ ಹೆಚ್ಚು ಶೋಚನೀಯವಾಗಿದೆ. ಹೊಸ ಪಿಂಚಣಿ ಯೋಜನೆಯನ್ನು ಸಂಸತ್ತಿನಲ್ಲಿ ಶಾಸನಕ್ಕಾಗಿ ತಂದಾಗ, ಸಿಪಿಐ(ಎಂ) ಹೊಸ ಪಿಂಚಣಿ ಕಾರ್ಮಿಕರ ಹಕ್ಕು, ಕೃಪೆಯ ಮೇಲೆ ನೀಡುವ ಸವಲತ್ತಲ್ಲ ಎಂಬ ತತ್ವಕ್ಕೆ ಬದ್ಧವಾಗಿತ್ತು, ಹಾಗಾಗಿ, ಹೊಸ ಪಿಂಚಣಿ ಯೋಜನೆಯನ್ನು ವಿರೋಧಿಸಿತ್ತು. ನಮ್ಮ ವಿರೋಧದ ಕಾರಣಗಳನ್ನು, ಇಂದಿನ ಪರಿಸ್ಥಿತಿ ಸಮರ್ಥಿಸುತ್ತಿದೆ.

ನಮ್ಮ ಜನರ ನೈಜ ಆದಾಯದ ಕುಗ್ಗುವಿಕೆ, ಜೀವನವನ್ನು ಇನ್ನಷ್ಟು ಶೋಚನೀಯಗೊಳಿಸಿದೆ. ಜೊತೆಗೆ, ದೇಶದ ಆರ್ಥಿಕ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಜನರ ಕೈಯಲ್ಲಿ ಕಡಿಮೆ ಕೊಳ್ಳುವ ಸಾಮರ್ಥ್ಯ; ಕಡಿಮೆ ದೇಶೀಯ ಬೇಡಿಕೆಯ ಪರಿಸ್ಥಿತಿ ಉದ್ಭವಿಸುತ್ತದೆ. ಇದು ಹೂಡಿಕೆಗಳನ್ನು ತಗ್ಗಿಸುತ್ತದೆ. ಏಕೆಂದರೆ ಅಂತಹ ಹೂಡಿಕೆಗಳಿಂದ ಉತ್ಪತ್ತಿಯಾಗುವ ಉತ್ಪನ್ನಗಳಿಗೆ ಮಾರುಕಟ್ಟೆ ಇರುವುದಿಲ್ಲ. ಲಾಭ ಗಳಿಸಲು ಮತ್ತು ಬೆಳವಣಿಗೆಯನ್ನು ಸಾಧಿಸಲು ಉತ್ಪಾದಿಸಿದ್ದನ್ನು ಮಾರಾಟ ಮಾಡಿದಾಗ ಮಾತ್ರ ಹೂಡಿಕೆಗಳು ಬೆಳೆಯುತ್ತವೆ. ಯಾವುದೇ ಬೇಡಿಕೆಯಿಲ್ಲದೆ ಪರಿಸ್ಥಿತಿಗಳಲ್ಲಿ ಹೂಡಿಕೆಗಳನ್ನು ಮಾಡುವುದರಿಂದ ಆರ್ಥಿಕ ಬೆಳವಣಿಗೆ ಸಾಧ್ಯವಿಲ್ಲ. ಇದು ಇಂದು ಭಾರತದ ಆರ್ಥಿಕತೆಯನ್ನು ಕಾಡುತ್ತಿರುವ ಮೂಲಭೂತ ಸಮಸ್ಯೆ ಇದಾಗಿದೆ.

ಮೋದಿ ಸರ್ಕಾರದ ಅಡಿಯಲ್ಲಿ ಕೋಮು–ಕಾರ್ಪೊರೇಟ್ ಶಕ್ತಿಗಳ ಶಾಮೀಲು ಗಟ್ಟಿಗೊಂಡಿದೆ. ದೇಶದಲ್ಲಿ ಉತ್ಪತ್ತಿಯಾಗುವ ಸಂಪತ್ತಿನ ಬಹುಭಾಗವು ಕ್ರೌರ್ಯ ನೀತಿಗಳಿಂದ ಕೆಲವೇ ಚಮಚಾ ಬಂಡವಾಳಗಾರರ ಸ್ವತ್ತಾಗಿ ಕಬಳಿಕೆಯಾಗುತ್ತಿದೆ. ಅದಾನಿ ವ್ಯವಹಾರವು ಇದಕ್ಕೆ ಅತ್ಯಂತ ಸೂಕ್ತ ಉದಾಹರಣೆಯಾಗಿದೆ. ನಮ್ಮ ಬಹುಪಾಲು ಜನರ ವೆಚ್ಚದಲ್ಲಿ ದೇಶದ ಸಂಪತ್ತನ್ನು ಕೆಲವು ಚಮಚಾ ಬಂಡವಾಳಿಗರನ್ನು ಶ್ರೀಮಂತಗೊಳಿಸಲು ತಿರುಗಿಸಲಾಗಿದೆ. ಮೋದಿಯವರ ಆರ್ಥಿಕ ನೀತಿಗಳು ಎರಡು ಭಾರತಗಳನ್ನು ಸೃಷ್ಟಿಸುವ ಪ್ರಕ್ರಿಯೆಗೆ ಮತ್ತಷ್ಟು ಒತ್ತು ನೀಡುತ್ತಿದೆ – ಶ್ರೀಮಂತರಿಗೆ ಹೊಳೆಯುತ್ತಿರುವ ಭಾರತ ಮತ್ತು ಬಡವರಿಗಾಗಿ ಬಳಲುತ್ತಿರುವ ಭಾರತ ಎಂಬುದು ವಾಸ್ತವವಾಗಿದೆ.

ಆದರೆ ಮೋದಿ ಸ್ಪಿನ್ ಯಂತ್ರದ ನಿರಂತರ ಪ್ರಚಾರದ ಮೂಲಕ, ಪುನರುಜ್ಜೀವನಗೊಳ್ಳುತ್ತಿರುವ ಭಾರತವು ಜಿಡಿಪಿಯ ದೃಷ್ಟಿಯಿಂದ ವಿಶ್ವದ 3ನೇ ಅತಿದೊಡ್ಡ ಆರ್ಥಿಕತೆಯತ್ತ ಸಾಗಿಸುತ್ತಿದೆ ಎಂದು ಬಿಂಬಿಸಲಾಗಿದೆ. ಯಾರು ಅಧಿಕಾರವನ್ನು ಮುನ್ನಡೆಸಿದರೂ ಪ್ರಸ್ತುತ ಅಂಕಿ–ಅಂಶಗಳ ಆಧಾರದಲ್ಲಿ, ಭಾರತವು 2027 ರಲ್ಲಿ ಮೂರನೇ ಸ್ಥಾನಕ್ಕೇರುತ್ತದೆ. ಆದರೆ, ವಾಸ್ತವತೆ ಎಂದರೆ, ತಲಾವಾರು ಜಿಡಿಪಿಯ ವಿಷಯದಲ್ಲಿ ಭಾರತದ ನಿಲುವಿನಲ್ಲಿ ಸತ್ಯ ಅಡಗಿದೆ. ತಲಾವಾರು ಜಿಡಿಪಿಯಲ್ಲಿ ಭಾರತ ಇಂದು ವಿಶ್ವದಲ್ಲಿ 142ನೇ ಸ್ಥಾನದಲ್ಲಿದೆ.

ಇತ್ತೀಚಿನ ಜಿ–20 ಶೃಂಗಸಭೆಯನ್ನು, ಭಾರತವು ಜಗತ್ತಿನ ಉದಯೋನ್ಮುಖ ಆರ್ಥಿಕ ಶಕ್ತಿ ಎಂದು ಬಿಂಬಿಸಲು ಬಳಸಿಕೊಳ್ಳಲಾಯಿತು. ಆದರೆ ಸತ್ಯವು ಮತ್ತೆ ಅಸತ್ಯದೊಳಗಿದೆ. ಎಲ್ಲಾ ಜಿ–20 ದೇಶಗಳಲ್ಲಿ, ಭಾರತವು ಅತ್ಯಂತ ಕಡಿಮೆ ತಲಾವಾರು ಜಿ.ಡಿ.ಪಿ.ಯನ್ನು ಹೊಂದಿದೆ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕಗಳ ವಿಷಯದಲ್ಲಿ ಅತ್ಯಂತ ಕೆಳಗಿನ ಸ್ಥಾನದಲ್ಲಿದೆ. ಆರ್ಥಿಕತೆಯಲ್ಲಿ ನಾವು ಕಡಿಮೆ ಕಾರ್ಮಿಕ ಭಾಗವಹಿಸುವಿಕೆಯ ದರವನ್ನು ಹೊಂದಿದ್ದೇವೆ, ಇದು ನಿರುದ್ಯೋಗದ ಅತ್ಯುನ್ನತ ಮಟ್ಟವನ್ನು ಸೂಚಿಸುತ್ತದೆ.

ಜನರ ಕೊಳ್ಳುವ ಸಾಮರ್ಥ್ಯದ ಈ ನಿರಂತರ ಕುಸಿತವು ಸ್ಥೂಲ ಆರ್ಥಿಕತೆಯ ಮೇಲೆ ಪರಿಣಾಮ ಬೀರುತ್ತಿದೆ. ಆರ್ಥಿಕತೆಯಲ್ಲಿ ಹೂಡಿಕೆಯ ಹೊಸ ಪ್ರಸ್ತಾವನೆಗಳು ಕಳೆದ ವರ್ಷದಿಂದ, ಸರ್ಕಾರಿ ಹೂಡಿಕೆಗಳಲ್ಲಿ 72.5 ಪ್ರತಿಶತ ಮತ್ತು ಖಾಸಗಿ ಹೂಡಿಕೆಗಳಲ್ಲಿ 79.2 ಪ್ರತಿಶತದಷ್ಟು ಕಡಿಮೆಯಾಗಿದೆ. "ಮೇಕ್ ಇನ್ ಇಂಡಿಯಾ" ದ ಹತ್ತು ವರ್ಷಗಳ ಭವ್ಯ ಯಶಸ್ಸಿನ ಬಗ್ಗೆ ಒಂದು ದೊಡ್ಡ ವರ್ಣಾಲಂಕೃತ ಕೂಗು ಮಾಡಲ್ಪಟ್ಟಿದೆ, ಇದರ ಸತ್ಯ ಏನು? ಉತ್ಪಾದನಾ ಬೆಳವಣಿಗೆಯು 2013–14 ರಿಂದ ಸರಾಸರಿ 5.9 ಶೇಕಡಾವನ್ನು ಹೊಂದಿದೆ, ಇದು ಸಾಧಿಸಬೇಕೆಂದುಕೊಂಡಿದ್ದ 12 ರಿಂದ 14 ರಷ್ಟು ಶೇಕಡಾ ಗುರಿಗಿಂತ ಕಡಿಮೆಯಾಗಿದೆ. ಉತ್ಪಾದನೆಯ ಜಿಡಿಪಿ ಪಾಲು ಶೇ.25 ರ ಗುರಿ ಹೊಂದಿದ್ದು, ಶೇ.16.4 ಕ್ಕೆ ನಿಶ್ಚಲವಾಗಿದೆ. ಉತ್ಪಾದನಾ ವಲಯದಲ್ಲಿನ ಉದ್ಯೋಗಗಳು 2011–12 ಮತ್ತು 2021–22 ರ ನಡುವೆ ಶೇ12.6 ರಿಂದ ಶೇ 11.6 ಕ್ಕೆ ಕುಸಿದಿವೆ. 'ವಿಶ್ವಕರ್ಮ ಯೋಜನೆ'ಯ ಮೂಲಕ ಒ.ಬಿ.ಸಿ. ಸಮುದಾಯದ ನುರಿತ ಕುಶಲಕರ್ಮಿಗಳಿಗಾಗಿ 13,000–15,000 ಕೋಟಿ ರೂ.ಗಳನ್ನು ನೀಡುವುದಾಗಿ, ಕೆಂಪುಕೋಟೆಯಿಂದ ಮೋದಿಜಿಯವರು ಘೋಷಿಸಿದ್ದರು. ಆದರೆ, 13,000 ಕೋಟಿ ರೂಪಾಯಿಗಳ ಸಾಲದ ಪ್ಯಾಕೇಜ್ ಅನ್ನು ಮಾತ್ರ ಮುಂದಿನ ಐದು ವರ್ಷಗಳಲ್ಲಿ ಶೇ 5 ಬಡ್ಡಿದರದೊಂದಿಗೆ ವಿತರಿಸಲಾಗುವುದು ಎಂದು ಸಂಸತ್‌ನಲ್ಲಿ ಘೋಷಿಸಿದರು.

ಗ್ರಾಮೀಣ ಸಂಕಷ್ಟವೂ ಹೆಚ್ಚುತ್ತಿದೆ. ಮಹಾತ್ಮಾ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಾಗಿ ಬೇಡಿಕೆಯು ಕಳೆದ ವರ್ಷ ಶೇ.16.3 ರಷ್ಟು ಇದ್ದು, ಇದು 2019–20 ರ ವರ್ಷಕ್ಕೆ ಹೋಲಿಸಿದರೆ, ಶೇ.29.4 ರಷ್ಟು ಹೆಚ್ಚಾಗಿದೆ. 2022–23 ರ ಆರ್ಥಿಕ ಸಮೀಕ್ಷೆಯು ನೈಜ ವೇತನದ ಋಣಾತ್ಮಕ ಬೆಳವಣಿಗೆಯನ್ನು ತೋರಿಸುತ್ತಿದೆ. ಅಂದರೆ ನೈಜ ವೇತನವು ಕಡಿಮೆಯಾಗಿದೆ.

ಇವೆಲ್ಲದರ ಒಟ್ಟು ಪರಿಣಾಮವೆಂದರೆ ಆರ್ಥಿಕ ಚಟುವಟಿಕೆಗಳ ಕುಗ್ಗುವಿಕೆ. ಉಡುಪುಗಳು, ಸಾಗರ ಉತ್ಪನ್ನಗಳು, ಪ್ಲಾಸ್ಟಿಕ್‌ಗಳು, ರತ್ನಗಳು ಮತ್ತು ಚಿನ್ನ, ಬೆಳ್ಳಿ ಆಭರಣಗಳಂತಹ, ಹೆಚ್ಚು ಕಾರ್ಮಿಕರನ್ನು ಒಳಗೊಳ್ಳುವ ಸರಕುಗಳ ರಫ್ತು ಕುಸಿತದಲ್ಲಿ ಇದು ಪ್ರತಿಫಲಿಸುತ್ತಿದೆ. ಈ ಉತ್ಪನ್ನಗಳ ವಿಷಯದಲ್ಲಿ ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಪಾಲು ತೀವ್ರವಾಗಿ ಕುಸಿಯುತ್ತಿದೆ, ಅಂದರೆ ಈ ಕ್ಷೇತ್ರಗಳಲ್ಲಿ ದೇಶೀಯ ಉದ್ಯೋಗವೂ ತೀವ್ರವಾಗಿ ಕುಸಿಯುತ್ತಿದೆ ಎಂಬುದನ್ನು ಗಮನಿಸಬೇಕು.

ಇದರ ಫಲಿತಾಂಶವೆಂದರೆ ಆಗಸ್ಟ್ 2023 ರಲ್ಲಿ ನಿರುದ್ಯೋಗ ದರದ ಪ್ರಮಾಣವು ಶೇ.8.1 ರಷ್ಟಿತ್ತು. 2022 ರಲ್ಲಿ ಯುವಜನ ನಿರುದ್ಯೋಗ (15–24 ವಯಸ್ಸಿನ) ಶೇ. 23.22 ರಷ್ಟಿತ್ತು. ಪದವೀಧರರಲ್ಲಿ, ಇದು ಶೇ. 42 ರಷ್ಟಿದೆ. ಆಗಸ್ಟ್ 2023 ರಲ್ಲಿ, ಸುಮಾರು 2 ಕೋಟಿ ಕುಟುಂಬಗಳು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಮಾಡಲು ಒತ್ತಾಯಿಸಿದವು. ಇದು ಭಾರತದ ಜನಸಂಖ್ಯಾ ಲಾಭಾಂಶದ ಮೋದಿ–ಪ್ರೇರಿತ ವಿನಾಶವಾಗಿದೆ. ಅಂದರೆ ಭಾರತದಲ್ಲಿ ಇಂದು ಒಟ್ಟು ಜನಸಂಖ್ಯೆಯಲ್ಲಿ ಉತ್ಪಾದನೆ ಮತ್ತು ಉದ್ಯೋಗಗಳಲ್ಲಿ ತೊಡಗಬಹುದಾದ ಅರ್ಹ ವಯಸ್ಸಿನವರು ಹೆಚ್ಚಿನ ಪ್ರಮಾಣದಲ್ಲಿ ಇದ್ದರೂ ಕೂಡ ಅದನ್ನು ಬಳಸಿಕೊಳ್ಳಲಾರದ, ಮೋದಿ ಪ್ರೇರಿತ ವಿನಾಶಕಾರಿ ನೀತಿಯ ಫಲವಾಗಿದೆ.

ಉದ್ಯೋಗ ಕಡಿತದೊಂದಿಗೆ, ಬೆಲೆಗಳು ವಿಪರೀತ ಏರುತ್ತಿವೆ. ಕಳೆದ ಕೆಲವು ವರ್ಷಗಳಿಂದ ಹಣದುಬ್ಬರವು ಆರ್.ಬಿ.ಐ. ಪ್ರಕಾರ ಸಹಿಸಿಕೊಳ್ಳಬಹುದಾದ ಶೇ. 6 ರ ಮಿತಿಯನ್ನು ಸತತವಾಗಿ ಮೀರಿದೆ. ಆಹಾರ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯು ಈ ಹಣದುಬ್ಬರವನ್ನು ಏರಿಸುತ್ತಿದೆ.

ಈ ಬಿಕ್ಕಟ್ಟಿನ ಸಂಚಿತ ಫಲಿತಾಂಶವೆಂದರೆ ಜಿಡಿಪಿ'ಯ ಶೇಕಡಾವಾರು ಕುಟುಂಬಗಳ ಹಣಕಾಸಿನ ಆಸ್ತಿಯಲ್ಲಿನ ಕುಸಿತ. ಇದು 2020–21 ರಲ್ಲಿ ಶೇ. 15.4 ಇದ್ದದ್ದು, 2022–23 ರಲ್ಲಿ ಶೇ. 10.9 ಕ್ಕೆ ಇಳಿದಿದೆ. ಜನರು ಬದುಕಲು ತಮ್ಮ ಕುಟುಂಬದ ಬೆಳ್ಳಿಯನ್ನು ಮಾರುತ್ತಿದ್ದಾರೆ. ಕುಟುಂಬಗಳ ನಿವ್ವಳ ಹಣಕಾಸಿನ ಆಸ್ತಿಯು 11.5 ಪ್ರತಿಶತದಿಂದ 5.1 ಪ್ರತಿಶತಕ್ಕೆ ಕುಸಿದಿದೆ.

ಜನರ ಆದಾಯದ ಕುಸಿಯುತ್ತಿದೆ. ಬೆಲೆಗಳು ಏರುತ್ತಿವೆ. ನಿರುದ್ಯೋಗ ಗಗನಕ್ಕೇರುತ್ತಿದೆ ಮತ್ತು ಉತ್ಪಾದನಾ ಬೆಳವಣಿಗೆಯಲ್ಲಿ ಕುಸಿತ ಕಾಣುತ್ತಿದೆ. ಇವು ಆಳವಾದ ಆರ್ಥಿಕ ಸಂಕಷ್ಟವನ್ನು ಪ್ರತಿಬಿಂಬಿಸುತ್ತವೆ. ಚಮಚಾ ಬಂಡವಾಳಿಶಾಹಿಗಳಿಗೆ ಸಂಪತ್ತಿನ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದನ್ನು ನಿಲ್ಲಿಸುವುದು ಮತ್ತು ಬದಲಿಗೆ ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ಆರ್ಥಿಕತೆಯಲ್ಲಿ ದೇಶೀಯ ಬೇಡಿಕೆಯ ಮಟ್ಟವನ್ನು ಹೆಚ್ಚಿಸುವ ಹೆಚ್ಚು ಅಗತ್ಯವಿರುವ ಮೂಲಸೌಕರ್ಯಗಳನ್ನು ನಿರ್ಮಿಸಲು ಸಾರ್ವಜನಿಕ ಹೂಡಿಕೆಗಳಿಗಾಗಿ ರಾಜ್ಯ ಸಂಪನ್ಮೂಲಗಳನ್ನು ಬಳಸುವುದು ಅಗತ್ಯವಾಗಿದೆ. ಆದಾಗ್ಯೂ, ಭಾರತದ ರಾಷ್ಟ್ರೀಯ ಸಂಪತ್ತನ್ನು ಲೂಟಿ ಮಾಡುವ ಮೂಲಕ ತಮ್ಮ ಲಾಭವನ್ನು ಗರಿಷ್ಠಗೊಳಿಸಲು ವಿದೇಶಿ ಮತ್ತು ಸ್ವದೇಶಿ ಬಂಡವಾಳಕ್ಕೆ ಮೋದಿ ಸರ್ಕಾರದ ಸಂಪೂರ್ಣ ಶರಣಾಗತಿ ಗಮನಿಸಿದರೆ, ಈ ಬಿಕ್ಕಟ್ಟು ಇನ್ನಷ್ಟು ಉಲ್ಬಣಗೊಳ್ಳಬಹುದು. ಭಾರತದ ಸಂಪತ್ತು ಆರ್ಥಿಕತೆಯ ಬೆಳವಣಿಗೆ ಮತ್ತು ಜನರ ಕಲ್ಯಾಣಕ್ಕಾಗಿ ಉತ್ಪಾದನೆಗೆ ಹೂಡಿಕೆ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕಿದೆ. ಇದಾಗಬೇಕಾದರೆ, ಸರ್ಕಾರ ಮತ್ತು ಪ್ರಭುತ್ವ ಅಧಿಕಾರದ ಲಗಾಮನ್ನು ಬಿಜೆಪಿ ಪಕ್ಷವು ನಿಯಂತ್ರಿಸುವುದಿಲ್ಲ ಎಂದು ಖಚಿತಪಡಿಸಿಕೊಳ್ಳುವುದು ಅನಿವಾರ್ಯವಾಗಿದೆ. (ಅಂದರೆ ಬಿಜೆಪಿ ಪಕ್ಷವನ್ನು ಅಧಿಕಾರದಿಂದ ಕೆಳಗಿಳಿಸುವುದು ಅಗತ್ಯವಾಗಿದೆ.)

ಅನು: ನಾಗರಾಜ ನಂಜುಂಡಯ್ಯ

ಶಿವಮೊಗ್ಗ ಗಲಭೆ ಮತಾಂಧರ ಯೋಜಿತ ಕೃತ್ಯ

ಏನೂ ಇಲ್ಲದೆಯೂ '...ಕುದಿಯುತ್ತಿದೆ ಶಿವಮೊಗ್ಗ ಕೊತ ಕೊತ... ಧಗ ಧಗ...'

ಈ ಸಲ ಗಣಪತಿ ಮೆರವಣಿಗೆ ಮತ್ತು ಈದ್ ಮಿಲಾದ್ ಮೆರವಣಿಗೆ ಒಟ್ಟಿಗೇ ಬಂದಿದ್ದ ಹಿನ್ನೆಲೆಯಲ್ಲಿ, ಕೋಮು ಗಲಬೆಯ ಸೂಕ್ಷ್ಮ ಪ್ರದೇಶವೆಂದು ಮೊದಲೇ ಗುರುತಿಸಲ್ಪಟ್ಟ ಶಿವಮೊಗ್ಗದಲ್ಲಿ ಒಂದು ತಿಂಗಳಿಂದಲೂ ಪೊಲೀಸರು ಮತ್ತು ಜಿಲ್ಲಾಡಳಿತವು ಮುತುವರ್ಜಿ ವಹಿಸಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದ್ದರೆಂದು ತಿಳಿದು ಬರುತ್ತದೆ. ಯಾವುದೇ ರೀತಿಯಲ್ಲಿ



ಶಾಂತಿ ಕದಡದಂತೆ ಎರಡೂ ಮೆರವಣಿಗೆಗಳು ಶಾಂತಿಯಿಂದ ನಡೆಯುವಂತೆ ಏರ್ಪಾಡು ಮಾಡಿಕೊಂಡಿದ್ದರು. ಶಿವಮೊಗ್ಗದ ಸೌಹಾರ್ದ ಸಹಬಾಳ್ವೆ ಬಯಸುವ ನಾಗರಿಕರು, ಹಿಂದು ಮುಸ್ಲಿಮ್ ಕ್ರೈಸ್ತ ದಾರ್ಮಿಕ ಮುಖಂಡರೆಲ್ಲರೂ ಈ ನಿಟ್ಟಿನಲ್ಲಿ ಶ್ರಮಿಸಿಯೂ ಇದ್ದಾರೆ.

ಅಹಿಂಸಾವಾದಿ ಗಾಂಧೀಜಿಯವರ ಜನ್ಮದಿನಾಚರಣೆಯ ಹಿಂದಿನ ದಿನ, ಪ್ರವಾದಿ ಪೈಗಂಬರರ ಮೆರವಣಿಗೆಯ ಕ್ಷಣ ಶಿವಮೊಗ್ಗದಲ್ಲಿ ಕೋಮುಹಿಂಸಾತ್ಮಕ ಗಲಭೆ ಆರಂಭವಾಗಿ 2023 ಅಕ್ಟೋಬರ್2 ರಂದೂ ಮುಂದುವರೆಯಿತು. ಶಿವಮೊಗ್ಗದ ರಾಗಿಗುಡ್ಡ ಪ್ರದೇಶ ಅಸಹಿಷ್ಣುತತೆಯ ಕುಲುಮೆಯಾದರೆ, ಪಕ್ಕದ ಶಾಂತಿನಗರ ಅಶಾಂತಿಯ ಬೀಡಾಯಿತು. ಈ ಮೂಲಕ ಕೋಮುಸೌಹಾರ್ದತೆಗಾಗಿ ಪ್ರಾಣವನ್ನೇ ಬಲಿಕೊಟ್ಟ ಮಹಾತ್ಮನಿಗೆ ಹಾಗೂ ಶಾಂತಿಯನ್ನು ಬಯಸಿದ ಪ್ರವಾದಿಗಳಿಗೆ ಅಗೌರವ ತೋರಿಸಲಾಯ್ತು.

ಆಗಿದ್ದಿಷ್ಟೇ 2023 ಸೆಪ್ಟಂಬರ್ 28 ರಂದು ಪ್ರವಾದಿ ಪೈಗಂಬರರ ಜನ್ಮ ದಿನಾಚರಣೆ. ಮುಸ್ಲಿಂ ಬಾಂಧವರಿಗೆ ಹರುಷದ ದಿನವಾಗಿದ್ದರಿಂದ, ಮೆರವಣಿಗೆ ಮೂಲಕ ಪ್ರವಾದಿಗಳಿಗೆ ಗೌರವ ಪ್ರೀತಿ ಸಲ್ಲಿಸುವುದು ವಾಡಿಕೆ. ಆದರೆ ಶಿವಮೊಗ್ಗದಲ್ಲಿ ಹಿಂದುತ್ವವಾದಿ "ಹಿಂದು ಮಹಾ ಸಭಾದವರು ಗಣೇಶನನ್ನು ಕೂಡಿಸಿ, ಆ ದಿನ ಅದ್ದೂರಿ ಮೆರವಣಿಗೆಯನ್ನು ಹಮ್ಮಿಕೊಂಡಿದ್ದರು. ಈ ಹಿಂದಿನ ವರ್ಷಗಳ ಕೋಮುಗಲಭೆ ಮತ್ತೆ ಮರು ಕಳಿಸಬಹುದು, ಸಮುದಾಯಗಳ ನಡುವೆ ಸಂಘರ್ಷ ಆಗಬಹುದು ಎಂಬ ಆತಂಕದಿಂದ ಪೋಲೀಸರು ಸೆ.28 ರ ಬದಲಿಗೆ, ಅಕ್ಟೋಬರ್ 1 ರಂದು ಈದ್ ಮೀಲಾದ್ ಪ್ರಯುಕ್ತ ಮೆರವಣಿಗೆಗೆ ಅನುಮತಿ ಇತ್ತಿದ್ದರು. ಅದಕ್ಕೆ ಮುಸ್ಲಿಂ ಬಾಂಧವರೂ ಒಪ್ಪಿದ್ದರು. ಹಿಂದೂ ಸಂಘಟನೆಗಳ ಅಬ್ಬರದ ಜೊತೆಗೆ ಗಣೇಶನ ವಿಸರ್ಜನೆಯ ಮೆರವಣಿಗೆಯೇನೋ ಸಾಂಗವಾಗಿ ನೆರವೇರಿತು. ಆದರೆ ಈದ್ ಮೆರವಣಿಗೆಯಲ್ಲಿ ಏನಾಗಬಾರದಿತ್ತೋ ಅದು ಆಗಿಯೇ ಹೋಯಿತು.

ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಬಸವರಾಜ ಬೊಮ್ಮಾಯಿಯವರು ಹೇಳಿದ ಕ್ರಿಯೆಗೆ ತಕ್ಕ ಪ್ರತಿಕ್ರಿಯೆಯೇ ಈ ಗಲಭೆಯ ಹಿಂದೆಯೂ ಇರುವಂತೆ ಕಾಣುತ್ತಿದೆ. ಅದು ಕೂಡಾ ಶುರುವಾಗುವುದು ಈ ಮತಾಂಧ ಹಿಂದೂ ಸಂಘಟನೆಗಳು ಮಾಡಿದ ಅತಿರೇಕದಿಂದ ಹಾಗೂ ಆ ಸಂಘಟನೆಗಳ ಹಿಂದಿರುವ ಕೋಮುವಾದಿ ಅಜೆಂಡಾದಿಂದ.

ಇದಕ್ಕೆ ಪ್ರತಿಯಾಗಿ ಅಂತಹುದೇ ಪ್ರತಿಕ್ರಿಯೆ ತೋರಿದ ಮುಸ್ಲಿಮರ ನಡುವಿನ ಮತೀಯ ಮೂಲಭೂತವಾದಿ ಶಕ್ತಿಗಳ ಕೃತ್ಯಗಳಿಂದ.

ಘಟನೆ ಎಂದರೆ ಹಿಂದೂ ಮಹಾಸಭಾದವರು ಪ್ರತಿವರ್ಷದಂತೆ ಅದ್ದೂರಿ ಗಣೇಶೋತ್ಸವವನ್ನು ಆಚರಿಸುತ್ತಾ ಬಂದಿದ್ದಾರೆ. ಎಲ್ಲಾ ಕಡೆಯಂತೆ ಇಲ್ಲೂ ಗಣೇಶನ ಉತ್ಸವ ನಡೆಸಿದ್ದರೆ ಯಾವತ್ತೂ ಸಮಸ್ಯೆ ಆಗುವುದಿಲ್ಲ. ಆದರೆ ಯಾವಾಗ ಕೋಮುದ್ವೇಷ ಪ್ರಚೋದಿಸುವ ಕೆಲಸವನ್ನು ಗಣೇಶ ಹಬ್ಬದ ನೆಪದಲ್ಲಿ 'ಸಂಘಿ'ಗಳು ಮಾಡುತ್ತಾರೋ ಅದು ಮತ್ತೊಂದು ಗುಂಪಿನವರಲ್ಲಿ ಅಸಹನೆಯನ್ನು ಹಾಗೂ ಆತಂಕವನ್ನೂ ಹೆಚ್ಚಲು ಕಾರಣವಾಗುತ್ತದೆ. ಶಿವಮೊಗ್ಗದ ಶಿವಪ್ಪ ಸರ್ಕಲ್ಲಿನಲ್ಲಿ ಶಿವಪ್ಪ ಉಗ್ರನರಸಿಂಹ ದೇವರು ಮುಸ್ಲಿಂ ವ್ಯಕ್ತಿಯ ಎದೆ ಬಗೆಯುವಂತಹ ಕಟೌಟ್ ಹಾಕಲಾಗಿತ್ತು. ಗಣೇಶ ಹಬ್ಬಕ್ಕೂ ಅದಕ್ಕೂ ಸಂಬಂಧವೇ ಇರಲಿಲ್ಲವಾದರೂ ಅದನ್ನು ಉದ್ದೇಶಪೂರ್ವಕವಾಗಿಯೇ ಹಾಕಲಾಗಿತ್ತು.. ನಗರದಲ್ಲಿ ಹಾಕಲಾದ ಉಗ್ರ ಹಿಂದುತ್ವವಾದಿಯಾದ ಸಾವರ್ಕರ್‌ರ ಪೋಸ್ಟರ್, ಬ್ಯಾನರ್‌ಗಳಿಗೂ ಗಣೇಶ ಹಬ್ಬಕ್ಕೂ ಯಾವುದೇ ಸಂಬಂಧ ಇಲ್ಲವಾದರೂ ಅವುಗಳನ್ನು ಅಳವಡಿಸಲಾಗಿತ್ತು. ಇದೇ ಹಿಂದುತ್ವವಾದಿಗಳು ಶಿವಮೊಗ್ಗದ ಬಸ್ ನಿಲ್ದಾಣದ ಮುಂದೆ ಜ್ಞಾನವ್ಯಾಪಿ ಶಿವನ ಮಹಾದ್ವಾರ ನಿರ್ಮಿಸಿದ್ದಕ್ಕೂ ಗಣೇಶೋತ್ಸವಕ್ಕೂ ಯಾವ ಸಂಬಂಧವೂ ಇರದಿದ್ದರೂ ಅದನ್ನು ನಿರ್ಮಿಸಲಾಗಿತ್ತು. ಮುಸ್ಲಿಮರೇ ಅಧಿಕವಾಗಿರುವ ಇಲ್ಯಾಸ್ ನಗರದತ್ತ ಗುರಿಯಿಟ್ಟು ಬಿಲ್ಲು



ಹಿಡಿದು ನಿಂತ ಶ್ರೀರಾಮನ ದೊಡ್ಡ ಕಟೌಟ್ ನಿರ್ಮಿಸುವುದಕ್ಕೂ ಗಣೇಶನ ಹಬ್ಬಕ್ಕೂ ನೇರಾನೇರಾ ಸಂಬಂಧವಿಲ್ಲವಾದರೂ ಅದನ್ನು ಮಾಡಲಾಯಿತು. ಇಲ್ಲಿ ಗಣೇಶ ಹಬ್ಬದಾಚರಣೆ ಬರೀ ನೆಪವಾಗಿದ್ದು ಹಿಂದುತ್ವದ ಪರ ಪ್ರಚಾರ ಹಾಗೂ ಮುಸ್ಲಿಂ ದ್ವೇಷವೇ ಪ್ರಮುಖವಾಗಿತ್ತು. ಮುಸ್ಲಿಂ ಸಮುದಾಯವನ್ನು ಕೆರಳಿಸುವ ಅಣಕಿಸುವ ಪ್ರಚೋದನಾ ದುರುದ್ದೇಶ ಉದ್ದೇಶವೂ ಇವುಗಳ ಹಿಂದಿತ್ತು.

ಮತಾಂಧ ಶಕ್ತಿಗಳ ಈ ಎಲ್ಲಾ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಕೆರಳಿದ ಮುಸ್ಲಿಂ ಯುವಕರು ಔರಂಗಜೇಬ್ ಮಹಾದ್ವಾರ ನಿರ್ಮಿಸಿದರು. ಮುಸ್ಲಿಂ ವ್ಯಕ್ತಿಯ ಎದೆ ಬಗೆಯುವ ನರಸಿಂಹ ಅವತಾರದ ಕಟೌಟಿಗೆ ಕೌಂಟರ್ ಆಗಿ ಬ್ರಿಟಿಷ್ ಪರ ಸೈನಿಕನನ್ನು ಕಾಲಡಿ ಹೊಸಕುವ ಟಿಪ್ಪು ಕಟೌಟನ್ನು ಈದ್ ಹಬ್ಬದ ನೆಪದಲ್ಲಿ ನಿಲ್ಲಿಸಿ ತಮ್ಮ ಆಕ್ರೋಶವನ್ನು ತೋರಿದರು. ಈದ್ ಆಚರಣೆಗೆ ಸಂಬಂಧವೇ ಇಲ್ಲದ ಔರಂಗಜೇಬ್ ಹಾಗೂ ಟಿಪ್ಪು ಕಟೌಟುಗಳನ್ನು ಕೆಲವು ಮುಸ್ಲಿಂ ಸಮುದಾಯದ ಮತಾಂಧರು ಅಳವಡಿಸಿದ್ದರು. ಇದು ಹಿಂದೂ ಮತಾಂಧರ ಕಣ್ಣು ಕೆಂಪೇರಿಸಿತು. ಮೊದಲೇ ಹಿಂದೂ ಕೋಮುವಾದಿಗಳ ಪ್ರಯೋಗಶಾಲೆ ಈ ಶಿವಮೊಗ್ಗ. ಇಂತಹ ಅಧಿಕ ಪ್ರಸಂಗವನ್ನು ಸಹಿಸಿಯಾರೆ? ಬೆಂಕಿ ಹಚ್ಚಲು ಸಿಕ್ಕ ಅವಕಾಶವನ್ನು ಬಿಟ್ಟಾರೆಯೇ? ಕೋಮುಗಲಭೆ ಹುಟ್ಟು ಹಾಕಲು ನೆಪಕ್ಕಾಗಿ ಶಿವಮೊಗ್ಗದ ಸಂಘ ಪರಿವಾರದ ಉದ್ರಿಕ್ತ ಮತಾಂಧ ಪಡೆ ಕಾಯುತ್ತಿತ್ತು ಅಲ್ಲವೇ? ಉದ್ವೇಗಗೊಳಿಸುವ ಈ ಕಟೌಟುಗಳು ಕೋಮು ಕಿಡಿ ಹೊತ್ತಿಕೊಳ್ಳಲು

ಪುಟ 14 ಕ್ಕೆ

ಸಂಚುಗಳು ಹಲವು ಅರಿಯಬೇಕಾದ ಸಂಗತಿಗಳು

ಶಿವಮೊಗ್ಗದ ರಾಗಿಗುಡ್ಡ ಪ್ರದೇಶದಲ್ಲಿ ಮೇಲಿಂದ ಮೇಲೆ ಇಂತಹ ಗಲಭೆಗಳು ನಡೆಯುತ್ತಿರುವುದರ ಹಿಂದೆ ಭೂಕಬಳಿಸುವ ಬಹುದೊಡ್ಡ ಮಾಫಿಯಗಳ ಸಂಚು ಇದೆ ಎನ್ನಲಾಗುತ್ತಿದೆ. ಪ್ರಾಕೃತಿಕ ಸೌಂದರ್ಯದಿಂದ ಕೂಡಿರುವ ಈ ಪ್ರದೇಶವನ್ನು ಹಂತ ಹಂತವಾಗಿ ನುಂಗಿ ನೊಣೆಯಲು ಸತತ ಪ್ರಯತ್ನಗಳು ನಡೆದಿರುವ ಸಂಗತಿ ಬಯಲಾಗಿದೆ. ಈ ಅಂಶವನ್ನು ಜನತೆ ಸರಿಯಾಗಿ ಅರ್ಥಮಾಡಿಕೊಳ್ಳಬೇಕು.

ಶಿವಮೊಗ್ಗದ ರಾಗಿಗುಡ್ಡದಲ್ಲಿ ಈದ್ ಮಿಲಾದ್ ಹಬ್ಬದ ಮೆರವಣಿಗೆ ಸಂದರ್ಭದಲ್ಲಿ ಉಂಟಾದ ಗಲಭೆ ಸಂಪೂರ್ಣವಾಗಿ ತಣ್ಣಗಾಗಿ ನಮ್ಮ ಹಿಡಿತಕ್ಕೆ ಬಂದಿದೆ. ಶಿವಮೊಗ್ಗದಲ್ಲಿ ಯಾವುದೇ ಕೊತಕೊತ, ಧಗಧಗ ಇಲ್ಲ ಎಂದು ಶಿವಮೊಗ್ಗ ಎಸ್ಪಿ ಮಿಥುನ್ ಕುಮಾರ್ ತಿಳಿಸಿದ್ದಾರೆ.

ಗಲಭೆಗೆ ಸಂಬಂಧಪಟ್ಟಂತೆ ಈವರೆಗೆ 60 ಮಂದಿಯನ್ನು ಬಂಧಿಸಲಾಗಿದ್ದು, 24 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಘಟನೆಯಲ್ಲಿ ಒಂದು ಕಾರು, ಆಟೋ, ಎರಡು ಬೈಕುಗಳಿಗೆ ಹಾನಿಯುಂಟಾಗಿದೆ. 7 ಮನೆಗಳ ಮೇಲೆ ಕಲ್ಲು ತೂರಾಟವಾಗಿತ್ತು. ಅರ್ಧ ಗಂಟೆಯಲ್ಲಿ ಪರಿಸ್ಥಿತಿ ಶಾಂತವಾಗಿದೆ ಎಂದು ಎಸ್ಪಿ ಮಿಥುನ್ ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಗಲಭೆ ಸಂಬಂಧ ರಾಗಿಗುಡ್ಡ ಪ್ರದೇಶದಲ್ಲಷ್ಟೆ ಕಲ್ಲುತೂರಾಟ ನಡೆದಿದೆ. ಶಿವಮೊಗ್ಗ ನಗರದ ಬೇರೆ ಯಾವ ಪ್ರದೇಶ ಕೂಡಾ ಗಲಭೆ ಪೀಡಿತವಾಗಿಲ್ಲ. ಗಲಭೆ ನಡೆದು ಕೇವಲ ಅರ್ಧ ಗಂಟೆಗಳಲ್ಲಿ ಪರಿಸ್ಥಿತಿ ಹತೋಟಿಗೆ ತರಲಾಗಿದೆ. ಮಾಧ್ಯಮಗಳಲ್ಲಿ ಬಂದಂತೆ ಶಿವಮೊಗ್ಗದಲ್ಲಿ ಯಾವುದೇ 'ಕೊತಕೊತ, ಧಗಧಗ' ಇಲ್ಲ. ಜಾಗೃತ ನಾಗರೀಕರು ಕೋಮುವಾದಿಗಳ ಕುತಂತ್ರವನ್ನು ಹೀಗೆ ವಿಫಲಗೊಳಿಸಿದ್ದಾರೆ.

ಇಂತಹ ಮಾಧ್ಯಮಗಳ ಮೇಲೆ ಕ್ರಮ ಯಾಕಿಲ್ಲ?

ದಿನಾಂಕ 1–10–2023ರಂದು ಶಿವಮೊಗ್ಗದ ಒಂದು ಏರಿಯಾದಲ್ಲಿ ಒಂದು ಸಣ್ಣ ಅಹಿತಕರ ಘಟನೆ ನಡೆಯಿತು. ಇದಕ್ಕೆ ಕಾರಣರಾದವರನ್ನು ನಂತರ ಗುರುತು ಹಿಡಿದು ಬಂದಿಸಲಾಯಿತು. ಈ ಮುಸುಕುದಾರಿ ಕಿಡಿಗೇಡಿಗಳಲ್ಲಿ ಹಿಂದು–ಮುಸ್ಲಿಂ ಇಬ್ಬರೂ ಇರುವುದು ನೋಡಿದರೆ ಇದೊಂದು ಪೂರ್ವಯೋಜಿತ ಕೃತ್ಯವೆಂದು ಪ್ರಾಥಮಿಕವಾಗಿ ಕಂಡುಕೊಳ್ಳಬಹುದಾಗಿರುತ್ತದೆ. ಒಂದು ಹಂತದಲ್ಲಿ ವಿಫಲರಾಗಿದ್ದರೂ ನಂತರ ಇದನ್ನು ತಹಬಂದಿಗೆ ತರುವಲ್ಲಿ ಶಿವಮೊಗ್ಗ ಪೊಲೀಸರು ಮತ್ತು ಜಿಲ್ಲಾಡಳಿತ ನಡೆಸಿರುವ ಪ್ರಯತ್ನ ಸ್ತುತ್ಯಾರ್ಹ ನಿಜ.

ಆದರೆ, ಈ ಘಟನೆಯನ್ನಿಟ್ಟುಕೊಂಡು ದೊಡ್ಡ ಮಟ್ಟದಲ್ಲಿ ಕೋಮುದ್ವೇಷ ಹರಡಲು ಪ್ರಯತ್ನ ಮಾಡಿರುವುದು ಕೆಲವು ಟಿ.ವಿ. ಮಾಧ್ಯಮಗಳು. ಅಲ್ಲಿನ ವಾಸ್ತವಗಳನ್ನು ತೋರಿಸದೆ, ನಡೆದ ಘಟನೆಗಳನ್ನು ತಿರುಚಿ ಟಿವಿ ಚಾನಲ್ ಮೂಲಕ ತಪ್ಪು ಸಂದೇಶ ನೀಡುವ ಪ್ರಯತ್ನ ನಡೆಸಿದ್ದಾರೆ. ಮುಸ್ಲಿಮರ ವಿರುದ್ಧ ಹಿಂದುಗಳನ್ನು ಎತ್ತಿಕಟ್ಟುವ ಪ್ರಯತ್ನ ಎಡೆಬಿಡದೆ ಮಾಡಿದ್ದಾರೆ. ಇವರ ವರದಿ ನೋಡಿದರೆ ಇಡೀ ಶಿವಮೊಗ್ಗ ಹೊತ್ತಿ ಉರಿಯುತ್ತಿದೆ ಎನ್ನುವಂತಿದ್ದರೂ ಇಡೀ ಶಿವಮೊಗ್ಗ ಶಾಂತಿಯುತವಾಗಿಯೇ ಇತ್ತು.

ಈ ಹಿಂದೆ ಹಿಜಾಬ್ ಗಲಾಟೆ ಸಮಯದಲ್ಲಿ ಇಂಥದ್ದೇ ಕೆಲಸ ಮಾಡಿ ಕೊನೆಗೆ ಇಡೀ ಮಾದ್ಯಮ ಲೋಕಕ್ಕೆ ಕೆಟ್ಟ ಹೆಸರು ತಂದಿದ್ದು ಸಂಘ ಪರಿವಾರಕ್ಕೆ ಇದೇ ವರದಿಗಾರರಾಗಿದ್ದರು. ಕೊನೆಗೆ ಯಾವಾಗ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ನೋಟೀಸ್ ನೀಡಿ, ವಿಚಾರಣೆಗೆ ಕರೆಸಿತೋ ಆಗ ತಲೆ ತಗ್ಗಿಸಿಕೊಂಡು ಮುಚ್ಚಳಿಕೆ ಕೊಟ್ಟು ಬಂದಿದ್ದರು.

ಇಲ್ಲಿ ಮಾಧ್ಯಮದ ಹೊಣೆಗಾರಿಕೆ ಪ್ರಶ್ನೆಯೂ ಇದೆ. ಒಂದು ಊರಿನಲ್ಲಿ ಅಥವಾ ನಗರದಲ್ಲಿ ಯಾವುದೋ ಒಂದು ಏರಿಯಾದಲ್ಲಿ ಕೋಮು ಉದ್ವಿಗ್ನತೆ ಶುರುವಾದರೆ ಅದನ್ನು ಮಾಧ್ಯಮ ಹೇಗೆ ಬಿತ್ತರಿಸಬೇಕು ಹೇಗೆ ಬಿತ್ತರಿಸಬಾರದು ಎಂಬುದನ್ನು ಒಬ್ಬ ಪತ್ರಕರ್ತ ಕಲಿತಿರಬೇಕು. ಅವನ ಕೆಲಸ ಸಮುದಾಯಗಳ ನಡುವಿನ ಹಗೆತನವನ್ನು ದೊಡ್ಡದು ಮಾಡಿ ತನ್ನ ಬೇಳೆಕಾಳು ಬೇಯಿಸಿಕೊಳ್ಳುವುದಲ್ಲ. ಬದಲಿಗೆ ಆ ಹಗೆತನ ಕಡಿಮೆ ಮಾಡಿ ಸಹಬಾಳ್ವೆ ಸಾದಿಸುವುದಾಗಿರಬೇಕು. ಒಂದು ವೇಳೆ ಈ ವಿಷಯದಲ್ಲಿ ಪೊಲೀಸ್ ಜಿಲ್ಲಾಡಳಿತ ಎಡವಿದರೂ ಅವರನ್ನು ಎಚ್ಚರಿಸಬೇಕಾದ ಹೊಣೆಗಾರಿಕೆ ಪತ್ರಕರ್ತ ಮತ್ತು ಮೀಡಿಯಾಗಳಿಗೆ ಇರುತ್ತದೆ.

ಆದರೆ ಶಿವಮೊಗ್ಗದಲ್ಲಿ ನಡೆಯುತ್ತಿರುವುದು ಇದಕ್ಕೆ ತದ್ವಿರುದ್ಧ. ಇಲ್ಲಿ ಪತ್ರಕರ್ತ ವೇಷದ ಕೋಮು ಕ್ರಿಮಿನಲ್‌ಗಳು ಬೆಂಕಿ ಹಚ್ಚಿ ಅದಕ್ಕೆ ತುಪ್ಪ ಸುರಿಯುವ ಕೆಲಸ ಮಾಡುತ್ತಿದ್ದಾರೆ. ಇಂತಹ ಮತಿಗೇಡಿ ಪತ್ರಕರ್ತರ ವೇಷದ ಗೋಮುಖ ವ್ಯಾಘ್ರಗಳ ಕುರಿತು ನಾಗರಿಕರು ಎಚ್ಚರ ವಹಿಸಬೇಕಿದೆ. ಇವರು ಮಾದ್ಯಮದಲ್ಲಿ ಬಿಂಬಿಸುವುದನ್ನೇ ನಿಜ ಎಂದುಕೊಂಡರೆ ಮತ್ತಷ್ಟು ದ್ವೇಷ ವ್ಯಾಪಿಸಿಕೊಳ್ಳುತ್ತದೆ. ಈ ನಿಟ್ಟಿನಲ್ಲಿ ನಾಗರಿಕರು ಇಂತಹ ಅವಿವೇಕಿಗಳ ಮೇಲೆ ಕಾನೂನು ಕ್ರಮ ಜರುಗಿಸಲು ಒತ್ತಾಯಿಸಬೇಕು. ಇವರ ಚಾನೆಲ್ ಗಳ ಮುಖ್ಯಸ್ತರ ಮೇಲೆ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು. ಇನ್ನೂ ಯಾಕಿಲ್ಲ?

‘ನ್ಯೂಸ್ ಕ್ಲಿಕ್’: ಕಟು ಸತ್ಯಗಳ ಮಂಡನೆ: ಪ್ರಜಾಪ್ರಭುತ್ವದ ಧ್ವನಿ ದಮನಿಸುವ ಪ್ರತಿಕಾರದ ಧಾಳಿ

ಅಕ್ಟೋಬರ್ 3 ರಂದು ಕೇಂದ್ರ ಗೃಹಮಂತ್ರಾಲಯದ ಅಡಿಯಲ್ಲಿರುವ ದಿಲ್ಲಿ ಪೋಲೀಸ್‌ನ ವಿಶೇಷ ಕೋಷ್ಠ 200ಕ್ಕೂ ಹೆಚ್ಚು ಪೋಲಿಸರೊಂದಿಗೆ ದಿಲ್ಲಿ, ಸಮೀಪದ ಗುರುಗ್ರಾಂ ಮತ್ತು ನೋಯ್ಡಾದಲ್ಲಿ, ಹೈದರಾಬಾದಿನಲ್ಲಿ ಮತ್ತು ಮುಂಬೈಯಲ್ಲಿ 50 ಮನೆಗಳಲ್ಲಿ 46 ಪತ್ರಕರ್ತರ ವಿರುದ್ಧ ದಾಳಿ ಮಾಡಿರುವ ಬೃಹತ್ ಕಾರ್ಯಾಚರಣೆ ಈಗ ದೇಶಾದ್ಯಂತ ಮಾತ್ರವಲ್ಲ, ಜಗತ್ತಿನಾದ್ಯಂತ ದೊಡ್ಡ ಸುದ್ದಿಯಾಗಿದೆ. ಈ ಕಾರ್ಯಾಚರಣೆಯ ಬಗ್ಗೆ ಹೊರಬಂದಿರುವ ಸಂಗತಿಗಳೇ ಈ ಇಡೀ ಕಾರ್ಯಾಚರಣೆ ದುರುದ್ದೇಶಪೂರಿತ ಆಶಯದ ಪ್ರದರ್ಶನ ಎಂದು ಈ ಕಾರ್ಯಾಚರಣೆಗೆ ಗುರಿಯಾಗಿರುವ ನ್ಯೂಸ್‌ಕ್ಲಿಕ್ ಈ ಸಂದರ್ಭದಲ್ಲಿ ನೀಡಿರುವ ಹೇಳಿಕೆ ವರ್ಣಿಸಿದೆ. ಹಿಂದಿನ ಪ್ರಧಾನ ಮಂತ್ರಿಗಳ ಮುಖ್ಯ ಮಾಧ್ಯಮ ಸಲಹೆಗಾರರಾಗಿದ್ದ ಸಂಜಯ್ ಬರು ರವರು ಕೂಡ ಇದು ದಿಲ್ಲಿ ಪೋಲೀಸ್‌ನ ಅಸಾಮರ್ಥ್ಯವನ್ನು ಪ್ರದರ್ಶಿಸಿದೆ, ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಎನ್.ಕೆ.ವೇದರಾಜ್

ಈ ಕಾರ್ಯಾಚರಣೆಯ ಭಾಗವಾಗಿ ಸಂಸ್ಥಾಪಕ –ಸಂಪಾದಕ ಪ್ರಬೀರ್ ಪರಕಾಯಸ್ಥ ಮತ್ತು ಮಾನವ ಸಂಪನ್ಮೂಲಗಳ ಮುಖ್ಯಸ್ಥ ಅಮಿತ್ ಚಕ್ರಚರ್ತಿಯವರನ್ನು ಬಂಧಿಸಿದಾಗ ಅವರಿಗೆ ಎಫ್‌ಐಆರ್‌ನ ಪ್ರತಿಯನ್ನು ನಿರಾಕರಿಸಲಾಯಿತು, ತಮ್ಮ ಮೇಲೆ ಹೊರಿಸಲಾಗಿರುವ ಆರೋಪವಾದರೂ ಏನು ಎಂಬುದರ ನಿಖರವಾದ ವಿವರಗಳ ಬಗ್ಗೆ ತಿಳಿಸಲಾಗಿಲ್ಲ ಎಂದಿರುವ ನ್ಯೂಸ್‌ಕ್ಲಿಕ್ ಹೇಳಿಕೆ “ಚೀನಾದ ಪ್ರಚಾರವನ್ನು ಉದ್ದೇಶಪೂರ್ವಕವಾಗಿ ನಡೆಸುತ್ತಿದೆ ಎಂದು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ (ಯುಎಪಿಎ) ಅಡಿಯಲ್ಲಿ ಅಪರಾಧಗಳ ಆರೋಪವನ್ನು ಹೊರಿಸಲಾಗಿದೆ ಎಂದಷ್ಟೇ ನಮಗೆ ತಿಳಿದು ಬಂದಿದೆ” ಎಂದಿದೆ.

ಮುಂದುವರೆದು,

“ನ್ಯೂಸ್‌ಕ್ಲಿಕ್ ವೆಬ್‌ಸೈಟ್‌ನಲ್ಲಿ ಇದುವರೆಗೆ ಪ್ರಕಟವಾದ ಎಲ್ಲಾ ಪತ್ರಿಕೋದ್ಯಮ ಸಂಬಂಧಿ ವಿಷಯಗಳು ಅಂತರ್ಜಾಲದಲ್ಲಿ ಲಭ್ಯವಿವೆ ಮತ್ತು ಅವನ್ನು ಯಾರಾದರೂ ನೋಡಬಹುದು. ದಿಲ್ಲಿ ಪೊಲೀಸ್‌ನ ವಿಶೇಷ ಕೋಷ್ಠವು ಚೀನಾದ ಪ್ರಚಾರ ಎಂದು ಪರಿಗಣಿಸುವ ಒಂದೇ ಒಂದು ಲೇಖನ ಅಥವಾ ವೀಡಿಯೊವನ್ನು ಉಲ್ಲೇಖಿಸಿಲ್ಲ. ವಾಸ್ತವವಾಗಿ, ದಿಲ್ಲಿ ಪೊಲೀಸ್‌ನ ವಿಶೇಷ ಕೋಷ್ಠದ ಪಶ್ನೆಗಳ ದಾಟಿ ದಿಲ್ಲಿ ಗಲಭೆಗಳು, ರೈತರ ಪ್ರತಿಭಟನೆಗಳು ಇತ್ಯಾದಿಗಳ ವರದಿಗಳ ಸುತ್ತವೇ ಇದ್ದು, ಎಲ್ಲವೂ ಪ್ರಸ್ತುತ ಕಲಾಪಗಳ ಹಿಂದೆ ದುರುದ್ದೇಶಪೂರಿತ ಮತ್ತು ಪ್ರಚೋದಿತ ಆಶಯವನ್ನೇ ಪ್ರದರ್ಶಿಸುತ್ತವೆ”

ಎಂದು ನ್ಯೂಸ್ ಕ್ಲಿಕ್ ಹೇಳಿದೆ.

ಹೌದು, 46 ಪತ್ರಕರ್ತರ ವಿಚಾರಣೆಗಳಲ್ಲಿ ಪೋಲೀಸರು ಇಂತಹ ಗುರುತರ ಆರೋಪದ ಬಗ್ಗೆ ಯಾವ ಪ್ರಶ್ನೆಯನ್ನೂ ಕೇಳಿಲ್ಲ! ಅವರ ಪ್ರಶ್ನೆಗಳು ದಿಲ್ಲಿ ಗಲಭೆಗಳು, ರೈತರ ಪ್ರತಿಭಟನೆಗಳು ಇತ್ಯಾದಿಗಳ ವರದಿಗಳ ಸುತ್ತವೇ ಇದ್ದವು ಎಂದು ನಿಷ್ಪಕ್ಷ ಮಾಧ್ಯಮಗಳು ವರದಿ ಮಾಡಿವೆ. ಆದ್ದರಿಂದಲೇ ನ್ಯೂಸ್‌ಕ್ಲಿಕ್‌ನ ಹೇಳಿಕೆ “ಪತ್ರಿಕಾ ಸ್ವಾತಂತ್ರ್ಯವನ್ನು ಗೌರವಿಸಲು ನಿರಾಕರಿಸುವ ಮತ್ತು ವಿಮರ್ಶೆಗಳನ್ನು ರಾಜದ್ರೋಹ ಅಥವಾ “ರಾಷ್ಟ್ರ ವಿರೋಧಿ” ಪ್ರಚಾರ ಎಂದು ಪರಿಗಣಿಸುವ ಸರ್ಕಾರದ ಈ ಕ್ರಮಗಳನ್ನು ನಾವು ಬಲವಾಗಿ ಖಂಡಿಸುತ್ತೇವೆ” ಎಂದು ಹೇಳಿದೆ.

ವಿಚಾರಣಾ ನ್ಯಾಯಾಲಯ ಈಗ ಆರೋಪಿಗಳಿಗೆ ಎಫ್‌ಐಆರ್ ನಿರಾಕರಿಸಲು ಸಾಧ್ಯವಿಲ್ಲ ಎನ್ನುತ್ತ ಅದನ್ನು ಆರೋಪಿಗಳಿಗೆ ಕೊಡುವಂತೆ ದಿಲ್ಲಿ ಪೋಲಿಸ್‌ಗೆ ತಾಕೀತು ಮಾಡಿರುವುದು ಬಹುಶಃ ಅದರ ‘ಸಾಮರ್ಥ್ಯ’ದ ಬಗ್ಗೆ ಸಂಜಯ ಬರು ರವರು ಹೇಳಿರುವ ಮಾತನ್ನು ಸಮರ್ಥಿಸುತ್ತದೆ.

ಅಂತೆ–ಕಂತೆಗಳ ಮಟ್ಟದಲ್ಲೇ...

ಈ ಮೊದಲು ಅಮೆರಿಕನ್ ವ್ಯಾಪಾರಸ್ಥ ನೆವಿಲ್ಲ್ ರಾಯ್ ಸಿಂಘಂ ಎಂಬವರ ಮೂಲಕ ಚೀನಾದ ಹಣ ‘ನ್ಯೂಸ್ ಕ್ಲಿಕ್’ಗೆ ಬಂದಿದೆ, ಅದನ್ನೇ ಬಳಸಿ ಅದು ‘ರಾಷ್ಟ್ರ–ವಿರೋಧಿ’ ಚಟುವಟಿಕೆಗಳನ್ನು ಬೆಂಬಲಿಸಿದೆ ಎಂಬುದು ಒಂದು ಆರೋಪವಾಗಿದ್ದರೆ, ಈಗ ಅದು ಕೊಡಲೇ ಬೇಕಾಗಿ ಬಂದಿರುವ ಎಫ್‌ಐಆರ್ ಚೀನೀ ಟೆಲಿಕಾಂ ಕಂಪನಿಗಳಾದ ಶಿಯೋಮಿ, ವಿವೊ ಮುಂತಾದವುಗಳು ‘ಚಿಪ್ಪು ಕಂಪನಿ’ಗಳನ್ನು ನಿರ್ಮಿಸಿ ಭಾರತ–ವಿರೋಧಿ ಪಿತೂರಿಗೆ ಹಣ ಕೊಡುತ್ತಿರುವುದಾಗಿ ತಿಳಿದುಬಂದಿದೆ” ಎಂದಿದೆಯಂತೆ. ಆದರೆ ಇವೆಲ್ಲವೂ ‘ಅಂತೆ–ಕಂತೆ’ಗಳ ಮಟ್ಟದಲ್ಲೇ ಇವೆ, ಸಮರ್ಥನೆಗಳೇನನ್ನೂ ಒದಗಿಸಿಲ್ಲ.

ನೆವಿಲ್ಲ್ ರಾಯ್ ತಮ್ಮ ವ್ಯಾಪಾರದಲ್ಲಿ ಸಾಕಷ್ಟು ಸಂಪತ್ತು ಗಳಿಸಿರುವ ಅಮೆರಿಕನ್ ವ್ಯಾಪಾರಿ ಎಡ ಒಲವಿನ ಅವರು ತಮ್ಮ ಗಳಿಕೆಯ ಒಂದು ಭಾಗವನ್ನು ಅಂತಹ ಒಲವಿನ ಸಂಸ್ಥೆ–ಸಂಘಟನೆಗಳಿಗೆ ಡೊನೇಷನ್‌ಗಳನ್ನು ಕೊಡುತ್ತಾರೆ ಎನ್ನುವ ಅವರ ಪರಿಚಯವಿರುವ ಭಾರತದ ಹಿರಿಯ ಪತ್ರಕರ್ತ ಎನ್.ರಾಂ, ಅವರು ಚೀನಾದ ಹಣವನ್ನೇನು ಕೊಡಬೇಕಾಗಿಲ್ಲ, ಮತ್ತು ಅವರು ಆ ಹಣವನ್ನು ರಿಸರ್ವ್ ಬ್ಯಾಂಕ್ ಅನುಮತಿ ಮುಂತಾದ ಕಾನೂನುಬದ್ಧ ರೀತಿಯಲ್ಲೇ ನ್ಯೂಸ್‌ಕ್ಲಿಕ್‌ಗೆ ಕೊಟ್ಟಿರುವುದು ಈಗಾಗಲೇ ದಾಖಲಾಗಿದೆ ಎಂದು ‘ದಿ ವೈರ್’ನಲ್ಲಿ ಪ್ರಕಟವಾಗಿರುವ (ಕರಣ್ ಥಾಪರ್‌ರೊಂದಿಗೆ) ಸಂದರ್ಶನದಲ್ಲಿ ಹೇಳಿದ್ದಾರೆ. ಈ ಹಣದಿಂದ ನ್ಯೂಸ್‌ಕ್ಲಿಕ್ ನಂತಹ ಒಂದು ಸಣ್ಣ ಸಂಸ್ಥೆ ಜನಗಳಲ್ಲಿ ಸರಕಾರದ ವಿರುದ್ಧ ಅಸಂತೃಪ್ತಿಯನ್ನು ಹರಡುತ್ತಿದೆ ಎಂಬುದು ಅರ್ಥಹೀನ ಆರೋಪ ಎಂದು ಅವರು ಹೇಳುತ್ತಾರೆ.

ಗಮನಾರ್ಹ ಸಂಗತಿಯೆಂದರೆ ಈ ಶಿಯೋಮಿ ಕಂಪನಿ 2020ರಲ್ಲಿ ಪಿಎಂಕೇರ್ ಫಂಡಿಗೆ 10 ಕೋಟಿ ರೂ. ಕೊಟ್ಟಿತ್ತು!

ಎರಡು ವರ್ಷಗಳ ನಂತರವೂ ಒಂದು ನಕಲಿ ಲೇಖನವೇ ಬೇಕಾಯಿತು!

ನ್ಯೂಸ್‌ಕ್ಲಿಕ್ ಹೇಳಿಕೆ ಮುಂದುವರೆದು ಹೀಗೆ ಹೇಳಿದೆ:

“ನ್ಯೂಸ್‌ಕ್ಲಿಕ್ 2021 ರಿಂದ ಭಾರತ ಸರ್ಕಾರದ ವಿವಿಧ ಏಜೆನ್ಸಿಗಳು ಸರಣಿ–ಸರಣಿಯಾಗಿ ಕೈಗೊಂಡಿರುವ ಕ್ರಮಗಳಿಂಗೆ ಗುರಿಯಾಗಿದೆ. ಅದರ ಕಚೇರಿಗಳು ಮತ್ತು ಅಧಿಕಾರಿಗಳ ನಿವಾಸಗಳ ಮೇಲೆ ಜಾರಿ ನಿರ್ದೇಶನಾಲಯ, ದಿಲ್ಲಿ ಪೊಲೀಸ್‌ನ ಆರ್ಥಿಕ ಅಪರಾಧ ವಿಭಾಗ ಮತ್ತು ಆದಾಯ ತೆರಿಗೆ ಇಲಾಖೆ ದಾಳಿ ನಡೆಸಿವೆ.

ಎಲ್ಲಾ ಸಾಧನಗಳು, ಲ್ಯಾಪ್‌ಟಾಪ್‌ಗಳು, ಉಪಕರಣಗಳು, ಫೋನ್‌ಗಳು ಇತ್ಯಾದಿಗಳನ್ನು ಈ ಹಿಂದೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಎಲ್ಲಾ ಇಮೇಲ್‌ಗಳು ಮತ್ತು ಸಂವಹನಗಳನ್ನು ಸೂಕ್ಷ್ಮದರ್ಶಕದ ಅಡಿಯಲ್ಲಿ ವಿಶ್ಲೇಷಿಸಲಾಗಿದೆ. ಎಲ್ಲಾ ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು, ಇನ್‌ವಾಯ್ಸ್‌ಗಳು, ನ್ಯೂಸ್‌ಕ್ಲಿಕ್ ಕಳೆದ ಹಲವಾರು ವರ್ಷಗಳಲ್ಲಿ ಮಾಡಿದ ವೆಚ್ಚಗಳು ಮತ್ತು ಸ್ವೀಕರಿಸಿದ ಹಣದ ಮೂಲಗಳನ್ನು ಕಾಲಕಾಲಕ್ಕೆ ಸರ್ಕಾರದ ವಿವಿಧ ಏಜೆನ್ಸಿಗಳು ಪರಿಶೀಲಿಸುತ್ತವೆ. ವಿವಿಧ ನಿರ್ದೇಶಕರು ಮತ್ತು ಇತರ ಸಂಬಂಧಿತ ವ್ಯಕ್ತಿಗಳು ಹಲವಾರು ಸಂದರ್ಭಗಳಲ್ಲಿ ಈ ಸರ್ಕಾರಿ ಏಜೆನ್ಸಿಗಳಿಂದ ವಿಚಾರಣೆಗೆ ಒಳಪಟ್ಟು ಲೆಕ್ಕವಿಲ್ಲದಷ್ಟು ಗಂಟೆಗಳ ಕಾಲ ಕಳೆದಿದ್ದಾರೆ.

ಆದರೂ, ಕಳೆದ ಎರಡಕ್ಕೂ ಮೀರಿದ ವರ್ಷಗಳಲ್ಲಿ, ಜಾರಿ ನಿರ್ದೇಶನಾಲಯಕ್ಕೆ ನ್ಯೂಸ್‌ಕ್ಲಿಕ್ ಮೇಲೆ ಅಕ್ರಮ ಹಣ ವರ್ಗಾವಣೆ ಆರೋಪ ಕುರಿತಂತೆ ದೂರು ದಾಖಲಿಸಲು ಸಾಧ್ಯವಾಗಿಲ್ಲ. ದಿಲ್ಲಿ ಪೊಲೀಸ್‌ನ ಆರ್ಥಿಕ ಅಪರಾಧ ವಿಭಾಗಕ್ಕೆ ನ್ಯೂಸ್‌ಕ್ಲಿಕ್ ವಿರುದ್ಧ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಅಪರಾಧಗಳ ಆರೋಪ ಪಟ್ಟಿ ಸಲ್ಲಿಸಲು ಸಾಧ್ಯವಾಗಲಿಲ್ಲ. ಆದಾಯ ತೆರಿಗೆ ಇಲಾಖೆಗೆ ತನ್ನ ಕ್ರಮಗಳನ್ನು ನ್ಯಾಯಾಲಯದ ಮುಂದೆ ಸಮರ್ಥಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಕಳೆದ ಹಲವಾರು ತಿಂಗಳುಗಳಲ್ಲಿ, ಪ್ರಬೀರ್ ಪುರಕಾಯಸ್ಥರನ್ನು ಈ ಯಾವುದೇ ಏಜೆನ್ಸಿಗಳು ಪ್ರಶ್ನಿಸಲು ಕರೆದಿಲ್ಲ.

ಆದರೂ, ಎಲ್ಲಾ ಮಾಹಿತಿ, ದಾಖಲೆಗಳು ಮತ್ತು ಸಂವಹನಗಳನ್ನು ಹೊಂದಿದ್ದರೂ ನ್ಯೂಸ್‌ಕ್ಲಿಕ್ ವಿರುದ್ಧದ ಯಾವುದೇ ಆರೋಪಗಳನ್ನು ಸಮರ್ಥಿಸಲು ಸಾಧ್ಯವಾಗದ ಸರ್ಕಾರಕ್ಕೆ ಕರಾಳ ಯುಎಪಿಎ ಯನ್ನು ಬಳಸಲು ಮತ್ತು ನಿಜವಾದ ಭಾರತದ – ರೈತರು, ಕಾರ್ಮಿಕರು, ಮತ್ತು ಉಪೇಕ್ಷೆಗೆ ಒಳಗಾಗಿರುವ ಸಮಾಜದ ಇತರ ವಿಭಾಗಗಳ ಕತೆಯನ್ನು ನಿರೂಪಿಸುವ ಸ್ವತಂತ್ರ ಮತ್ತು ನಿರ್ಭೀತ ಧ್ವನಿಗಳನ್ನು ಹಿಸುಕಿ ಹಾಕುವ ಪ್ರಯತ್ನವನ್ನು ನಡೆಸಲು ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಪ್ರಕಟವಾದ ಒಂದು ದುರುದ್ದೇಶಪೂರ್ಣ ಮತ್ತು ನಕಲಿ ಲೇಖನವೇ ಬೇಕಾಯಿತು.”

(ಒತ್ತು ನಮ್ಮದು)

ಆಳುವ ಪಕ್ಷ ಮತ್ತು ಅವರ ಭಕ್ತರುಗಳಿಗೆ ವರವಾಗಿ ಬಂದ ಈ ನ್ಯೂಯಾಕ್ ಟೈಮ್ಸ್ ನ ಲೇಖನ “ ಆಲಸ್ಯಪೂರ್ಣ ಮತ್ತು ಬೇಜವಾಬ್ದಾರಿ” ಪತ್ರಿಕೋದ್ಯಮ ಎಂದು ಒಂದು ದೊಡ್ಡ ಪ್ರತಿಷ್ಠಿತ ಪತ್ರಿಕೆಯ ಮುಖ್ಯ ಸಂಪಾದಕರಾಗಿ ದೀರ್ಘಕಾಲದ ಅನುಭವವಿರುವ ಎನ್.ರಾಂ ವರ್ಣಿಸಿದ್ದಾರೆ.

ನಗೆಪಾಟಲಿನ ಸಂಗತಿ

ಇನ್ನು, ಪೋಲೀಸರು ರೈತರ ಹೋರಾಟ, ದಿಲ್ಲಿ ಗಲಭೆ, ಸಿಎಎ–ವಿರೋಧಿ ಹೋರಾಟಗಳ ಬಗ್ಗೆ ವರದಿ/ ಲೇಖನ ಬರೆದಿದ್ದೀರಾ ಎಂದು ಪತ್ರಕರ್ತರನ್ನು ವಿಚಾರಿಸಿರುವುದು ನಗೆಪಾಟಲಿನ ಸಂಗತಿ, ಏಕೆಂದರೆ ಪತ್ರಕರ್ತರ ವೃತ್ತಿಯ ಬಗ್ಗೆ ಇಂತಹ ಅಜ್ಞಾನ ಒಂದೋ ಈ ಇಡೀ ಪ್ರಕರಣದ ಬಗ್ಗೆ ದಿಲ್ಲಿ ಪೋಲಿಸ್‌ನಲ್ಲಿರುವ ಗೊಂದಲವನ್ನು ತೋರಿಸುತ್ತದೆ, ಅಥವ ಅವರು ತಮ್ಮ ರಾಜಕೀಯ ‘ಬಾಸ್’ಗಳ ರಾಜಕೀಯ ಅಜೆಂಡಾವನ್ನು ಮುಂದೊತ್ತುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ ಎಂದು ವಿಶ್ಲೇಷಕರು ಗಮನಿಸಿದ್ದಾರೆ.

ನ್ಯೂಸ್‌ಕ್ಲಿಕ್’ನ ಹೇಳಿಕೆ ಈ ಆರೋಪಗಳ ಬಗ್ಗೆ ತನ್ನ ನಿಲುವನ್ನು

ಹೀಗೆ ಸುಸ್ಪಷ್ಟವಾಗಿ ಜನರ ಮುಂದಿಟ್ಟಿದೆ:

“ನಾವು ಈ ವಿಷಯಗಳನ್ನು ದಾಖಲುಗೊಳಿಸ ಬಯಸುತ್ತೇವೆ:

1. ನ್ಯೂಸ್‌ಕ್ಲಿಕ್ ಒಂದು ಸ್ವತಂತ್ರ ಸುದ್ದಿ ವೆಬ್‌ಸೈಟ್ ಆಗಿದೆ.
2. ನಮ್ಮ ಪತ್ರಿಕಾ ವಿಷಯವು ವೃತ್ತಿಯ ಅತ್ಯುನ್ನತ ಮಟ್ಟವನ್ನು ಆಧರಿಸಿದೆ.
3. ನ್ಯೂಸ್‌ಕ್ಲಿಕ್ ನೇರವಾಗಿ ಅಥವಾ ಪರೋಕ್ಷವಾಗಿ ಯಾವುದೇ ಚೀನೀ ಸಂಸ್ಥೆ ಅಥವಾ ಪ್ರಾಧಿಕಾರದ ಆದೇಶದ ಮೇರೆಗೆ ಯಾವುದೇ ಸುದ್ದಿ ಅಥವಾ ಮಾಹಿತಿಯನ್ನು ಪ್ರಕಟಿಸುವುದಿಲ್ಲ.
4. ನ್ಯೂಸ್‌ಕ್ಲಿಕ್ ತನ್ನ ವೆಬ್‌ಸೈಟ್‌ನಲ್ಲಿ ಚೀನೀ ಪ್ರಚಾರವನ್ನು ಪ್ರಸಾರ ಮಾಡುವುದಿಲ್ಲ.
5. ನ್ಯೂಸ್‌ಕ್ಲಿಕ್ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟವಾದ ವಿಷಯಕ್ಕೆ ಸಂಬಂಧಿಸಿದಂತೆ ನೆವಿಲ್ಲ್ ರಾಯ್ ಸಿಂಘಮ್ ರಿಂದ ನಿರ್ದೇಶನಗಳನ್ನು ತೆಗೆದುಕೊಳ್ಳುವುದಿಲ್ಲ.
6. ನ್ಯೂಸ್‌ಕ್ಲಿಕ್ ಸ್ವೀಕರಿಸುವ ಎಲ್ಲಾ ಹಣವನ್ನು ಸೂಕ್ತ ಬ್ಯಾಂಕಿಂಗ್ ಚಾನೆಲ್‌ಗಳ ಮೂಲಕ ಪಡೆಯಲಾಗಿದೆ ಮತ್ತು ದಿಲ್ಲಿ ಹೈಕೋರ್ಟಿನ ಕಲಾಪಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ದೃಢಪಡಿಸಿರುವಂತೆ ಕಾನೂನು ಪ್ರಕಾರ ಸಂಬಂಧಿತ ಅಧಿಕಾರಿಗಳಿಗೆ ವರದಿ ಮಾಡಲಾಗಿದೆ.”

ಈ ಹೇಳಿಕೆಯ ಕೊನೆಯಲ್ಲಿ “ನ್ಯಾಯಾಲಯಗಳು ಮತ್ತು ನ್ಯಾಯಾಂಗ ಪ್ರಕ್ರಿಯೆಯಲ್ಲಿ ನಮಗೆ ಸಂಪೂರ್ಣ ನಂಬಿಕೆ ಇದೆ. ನಾವು ಭಾರತದ ಸಂವಿಧಾನದ ಪ್ರಕಾರ ನಮ್ಮ ಪತ್ರಿಕಾ ಸ್ವಾತಂತ್ರ್ಯ ಮತ್ತು ನಮ್ಮ ಜೀವಗಳಿಗಾಗಿ ಹೋರಾಡುತ್ತೇವೆ” ಎಂದು ನ್ಯೂಸ್‌ಕ್ಲಿಕ್ ದೃಢವಾಗಿ ಹೇಳಿದೆ.

ಈ ನಡುವೆ 18 ಮಾಧ್ಯಮ ಸಂಘಟನೆಗಳು ನೇರವಾಗಿ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಿಗೆ “ಭಾರತ ನಿರಂಕುಶ ಪೋಲಿಸ್ ಪ್ರಭುತ್ವವಾಗುವ ಮುನ್ನ ಮಧ್ಯಪ್ರವೇಶಿಸಿ” ಎಂದು ಮನವಿ ಮಾಡಿವೆ.

ಪತ್ರಿಕೋದ್ಯಮ / ಭಯೋತ್ಪಾದನೆ



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ



ವ್ಯಂಗ್ಯಚಿತ್ರ ಕೃಪೆ: ರಾಕೇಶ್ ರಂಜನ್, ಮೊಲಿಟಿಕ್ಸ್.ಇನ್ ಅವರು ಈ ಚಿತ್ರಕ್ಕೆ ಕೋಟ್ಟಿರುವ ಶಿರೋನಾಮೆ “ರಾಜನಿಗೆ ಭಯವಾದಾಗಲೆಲ್ಲ ಪೊಲಿಸ್, ಇಡಿ, ಸಿಬಿಐಯನ್ನು ಮುಂದೆ ಬಿಡುತ್ತಾನೆ”!” ಐಟಿ ಸೆಲ್, ಭಕ್ತರು ಕೈ ಜೋಡಿಸುತ್ತಾರೆ!!

"ಭಾರತ ನಿರಂಕುಶ ಪೋಲೀಸ್ ಪ್ರಭುತ್ವವಾಗಿ ಬಿಡುವ ಮುನ್ನ ಮಧ್ಯಪ್ರವೇಶಿಸಿ"
ಸರ್ವೋಚ್ಚ ನ್ಯಾಯಾಧೀಶರಿಗೆ 18 ಮಾಧ್ಯಮ ಸಂಘಟನೆಗಳ ಮನವಿ

ದಿಲ್ಲಿ ಪೋಲೀಸ್ ನ್ಯೂಸ್‌ಕ್ಲಿಕ್ ವಿರುದ್ಧ ಅಕ್ಟೋಬರ್ 3ರಂದು ನಡೆಸಿದ ಕಾರ್ಯಾಚರಣೆ ಮತ್ತು ಅದರ ಸಂಸ್ಥಾಪಕ ಸಂಪಾದಕರು ಮತ್ತು ಇನ್ನೊಬ್ಬ ಪತ್ರಕರ್ತರ ಬಂಧನದ ವಿರುದ್ಧ ಬಲವಾದ ಆಕ್ರೋಶ ವ್ಯಾಪಕವಾಗಿ ವ್ಯಕ್ತಗೊಂಡಿದೆ. ಈ ಹಿನ್ನೆಲೆಯಲ್ಲಿ ನಡೆದಿರುವ ಒಂದು ಮಹತ್ವದ ಬೆಳವಣಿಗೆಯಲ್ಲಿ 18 ಮಾಧ್ಯಮ ಸಂಘಟನೆಗಳು ಸ್ವತಂತ್ರ ಮಾಧ್ಯಮಗಳ ವಿರುದ್ಧ ತನಿಖಾ ಸಂಸ್ಥೆಗಳ ಹೆಚ್ಚುತ್ತಿರುವ ದಮನಕಾರಿ ಬಳಕೆಯನ್ನು ಕೊನೆಗೊಳಿಸಲು ಉನ್ನತ ನ್ಯಾಯಾಂಗವು ಈಗ ಮಧ್ಯಪ್ರವೇಶಿಸಬೇಕು ಎಂದು ನೇರವಾಗಿ ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ಅವರಿಗೆ ಪತ್ರ ಬರೆದು ಮನವಿ ಮಾಡಿವೆ.

ಮಾಧ್ಯಮಗಳ ವಿರುದ್ಧ ಪ್ರಭುತ್ವದ ಕ್ರಮಗಳನ್ನು ಅಳತೆ ಮೀರಿದ ಮಟ್ಟಕ್ಕೆ ಒಯ್ಯಲಾಗಿದೆ, ಮತ್ತು ಅದು ಸಾಗುತ್ತಿರುವ ದಿಕ್ಕಿನಲ್ಲಿ ಮುಂದುವರಿಯಲು ಬಿಟ್ಟರೆ, ಸರಿಪಡಿಸುವ ಅಥವಾ ಪರಿಹಾರದ ಕ್ರಮಗಳಿಗೆ ಬಹಳ ತಡಮಾಡಿದಂತಾಗುತ್ತದೆ. ಆದ್ದರಿಂದ, ದೇಶದ ಸರ್ವೋಚ್ಚ ನ್ಯಾಯಾಲಯ ಮಧ್ಯಪ್ರವೇಶಿಸಲೇ ಬೇಕಾದ ಸನ್ನಿವೇಶ ಉಂಟಾಗಿದೆ, ಅಂತಹ ಮಧ್ಯಪ್ರವೇಶ ನಡೆಸದಿದ್ದರೆ ಬಹಳ ತಡವಾಗಿ ಬಿಟ್ಟು ನಿರಂಕುಶಾಧಿಕಾರದ ಪೋಲೀಸ್ ಪ್ರಭುತ್ವ ಸಾಮಾನ್ಯ ಸಂಗತಿಯಾಗಿ ಬಿಡಬಹುದಾದ್ದರಿಂದ, ಮುಖ್ಯನ್ಯಾಯಮೂರ್ತಿಗಳ ಆತ್ಮಸಾಕ್ಷಿಗೆ ಮನವಿ ಮಾಡುವುದನ್ನು ಬಿಟ್ಟು ತಮ್ಮ ಮುಂದೆ ಅನ್ಯಮಾರ್ಗವಿಲ್ಲದಂತಾಗಿದೆ ಎಂದು ಡಿಜಿಪಬ್ ನ್ಯೂಸ್ ಇಂಡಿಯಾ ಫೌಂಡೇಶನ್, ಇಂಡಿಯನ್ ವಿಮೆನ್ಸ್ ಪ್ರೆಸ್ ಕೋರ್, ಪ್ರೆಸ್ ಕ್ಲಬ್ ಆಫ್ ಇಂಡಿಯಾ, ನವದೆಹಲಿ, ಫೌಂಡೇಶನ್ ಫಾರ್ ಮೀಡಿಯಾ ಪ್ರೊಫೆಷನಲ್ಸ್, ನೆಟ್‌ವರ್ಕ್ ಆಫ್ ವುಮೆನ್ ಇನ್ ಮೀಡಿಯಾ, ಇಂಡಿಯಾ, ಚಂಡೀಗಢ ಪ್ರೆಸ್ ಕ್ಲಬ್, ನ್ಯಾಷನಲ್ ಅಲಿಯನ್ಸ್ ಆಫ್ ಜರ್ನಲಿಸ್ಟ್ಸ್, ದಿಲ್ಲಿ ಪತ್ರಕರ್ತರ ಒಕ್ಕೂಟ, ಕೇರಳ ಕಾರ್ಯನಿರತ ಪತ್ರಕರ್ತರ ಸಂಘ, ಬೃಹನ್ಮುಂಬೈ ಪತ್ರಕರ್ತರ ಒಕ್ಕೂಟ, ಫ್ರೀ ಸ್ಪೀಚ್ ಕಲೆಕ್ಟಿವ್, ಮುಂಬೈ, ಮುಂಬೈ ಪ್ರೆಸ್ ಕ್ಲಬ್, ಅರುಣಾಚಲ ಪ್ರದೇಶ ಕಾರ್ಯನಿರತ ಪತ್ರಕರ್ತರ ಒಕ್ಕೂಟ, ಪ್ರೆಸ್ ಅಸೋಸಿಯೇಷನ್ ಆಫ್ ಇಂಡಿಯಾ, ಗುವಾಹಟಿ ಪ್ರೆಸ್ ಕ್ಲಬ್, ಇಂಡಿಯನ್ ಜರ್ನಲಿಸ್ಟ್ ಯೂನಿಯನ್, ಕೊಲ್ಕತ ಪ್ರೆಸ್ ಕ್ಲಬ್ ಮತ್ತು ವರ್ಕಿಂಗ್ ನ್ಯೂಸ್ ಕ್ಯಾಮರಾಮನ್ಸ್ ಅಸೋಸಿಯೇಷನ್ ಜಂಟಿಯಾಗಿ ಬರೆದಿರುವ ಪತ್ರ ಆತಂಕ ವ್ಯಕ್ತಪಡಿಸಿದೆ.

"ತಾತ್ಪೂರ್ತಿಕ, ಬೇಕಾಬಿಟ್ಟಿ ಜಪ್ತಿಗಳನ್ನು ಮತ್ತು ವಿಚಾರಣೆಗಳನ್ನು ಖಂಡಿತವಾಗಿಯೂ ತಾನು 'ಪ್ರಜಾಪ್ರಭುತ್ವದ ತಾಯಿ' ಎಂಬ ಪ್ರಚಾರವನ್ನು ಆರಂಭಿಸಿರುವ ದೇಶದಲ್ಲೇನು, ಯಾವುದೇ ಪ್ರಜಾಸತ್ತಾತ್ಮಕ ದೇಶದಲ್ಲಿಯೂ ಸ್ವೀಕಾರಾರ್ಹವೆಂದು ಪರಿಗಣಿಸಲು ಸಾಧ್ಯವಿಲ್ಲ" ಎಂದು ತಮ್ಮ ಪತ್ರ ಕೊನೆಯಲ್ಲಿ ಈ ಸಂಘಟನೆಗಳು ಹೇಳಿವೆ.

ಈ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ **(ಇವುಗಳಲ್ಲಿರುವ ಒತ್ತು ನಮ್ಮದು):**

"ನಾವು ಈ ಪತ್ರವನ್ನು ಸ್ವತಂತ್ರ ಪತ್ರಿಕಾರಂಗವನ್ನು ಪ್ರತಿನಿಧಿಸುವ ಮತ್ತು ನಮ್ಮ ಸಂವಿಧಾನದಲ್ಲಿ ಪ್ರತಿಪಾದಿಸಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯಗಳನ್ನು ಎತ್ತಿಹಿಡಿಯಲು ಬದ್ಧವಾಗಿರುವ ಸಂಘಟನೆಗಳ ಸ್ವಯಂಪ್ರೇರಿತ ಮತ್ತು ಮುಕ್ತ ಒಕ್ಕೂಟವಾಗಿ ಬರೆಯುತ್ತಿದ್ದೇವೆ.

ಈ ಪತ್ರವು ನಾಗರಿಕರ ಮೂಲಭೂತ ಹಕ್ಕುಗಳ ಜಾಗರೂಕ ರಕ್ಷಕರಿಗೆ–ಈ ಪದವು ಎಷ್ಟೇ ಚರ್ವಿತಚರ್ವಣವಾಗಿರಬಹುದಾದರೂ– ಒಂದು ಶ್ರದ್ಧಾಪೂರ್ವಕ ಮನವಿಯಾಗಿದೆ; ಭಾರತದಲ್ಲಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಚಲಾವಣೆಗೆ ಅತ್ಯಗತ್ಯವಾಗಿರುವ ಒಂದು ಸಂಸ್ಥೆಯು, ಸರ್ವೋಚ್ಚವಾಗಿರುವ ಮತ್ತು ಆ ಸ್ವಾತಂತ್ರ್ಯಗಳನ್ನು ಪ್ರತಿಷ್ಠಾಪಿಸಿರುವ ಸಂವಿಧಾನವನ್ನು ರಕ್ಷಿಸಲು ಪ್ರತಿಜ್ಞಾಬದ್ಧವಾಗಿರುವ ಸಂಸ್ಥೆಗೆ ಮಾಡಿರುವ ಒಂದು ಮನವಿ.

ನಾವು ಈ ಪತ್ರವನ್ನು, ಇದು ಕೇವಲ ಭಾರತದ ಮುಖ್ಯ ನ್ಯಾಯಾಧೀಶರಿಗೆ ಮಾತ್ರವಲ್ಲ, ನ್ಯಾಯಾಲಯದ ಒಳಗೆ ಮತ್ತು ಹೊರಗೆ "ಪತ್ರಿಕಾರಂಗಕ್ಕೆ ಅಧಿಕಾರಸ್ಥರ ಮುಖದೆದುರು ಸತ್ಯವನ್ನು ಎತ್ತಿ ತೋರುವ ಮತ್ತು ನಾಗರಿಕರ ಮುಂದೆ ಕಟುಸಂಗತಿಗಳನ್ನು ಪ್ರಸ್ತುತಪಡಿಸಿ ಪ್ರಜಾಪ್ರಭುತ್ವವನ್ನು ಸರಿಯಾದ ದಿಕ್ಕಿನಲ್ಲಿ ಹಾಗೂ ಮುನ್ನಡೆಸುವ ಆಯ್ಕೆಗಳನ್ನು ಮಾಡಲು ಅವರಿಗೆ ಅನುವು ಮಾಡಿಕೊಡುವ ಕರ್ತವ್ಯ ಇದೆ" ಮತ್ತು ಪತ್ರಕರ್ತರು ಈ ಪಾತ್ರವನ್ನು "ಪ್ರತೀಕಾರದ ಬೆದರಿಕೆಯಿಂದ ನಡುಗದೆ" ನಿರ್ವಹಿಸುವ ವರೆಗೆ ಭಾರತದ ಸ್ವಾತಂತ್ರ್ಯಗಳು ಸುರಕ್ಷಿತವಾಗಿರುತ್ತವೆ ಎಂದು ಹೇಳಿರುವವರಿಗೆ ಬರೆಯುತ್ತಿದ್ದೇವೆ ಎಂಬ ಪರಿಜ್ಞಾನ ನಮಗಿದೆ.

ನಿಜಸಂಗತಿಯೆಂದರೆ, ಇಂದು, ಭಾರತದ ಪತ್ರಕರ್ತರ ದೊಡ್ಡ ವಿಭಾಗವು ಪ್ರತೀಕಾರದ ಬೆದರಿಕೆಯ ಅಡಿಯಲ್ಲಿ ಕೆಲಸ ಮಾಡುತ್ತಿದೆ. ಮತ್ತು ನ್ಯಾಯಾಂಗವು, ನಾವೆಲ್ಲರೂ ಉತ್ತರದಾಯಿಯಾಗಿರುವ ಒಂದು ಸಂವಿಧಾನವಿದೆ ಎಂಬ ಮೂಲಭೂತ ಸತ್ಯದೊಂದಿಗೆ ಅಧಿಕಾರಸ್ಥರನ್ನು ಎದುರಿಸಬೇಕಾಗಿದೆ.

ಅಕ್ಟೋಬರ್ 3, 2023 ರಂದು, ದಿಲ್ಲಿ ಪೊಲೀಸ್‌ನ ವಿಶೇಷ ಕೋಷ್ಠ ಆನ್‌ಲೈನ್ ಸುದ್ದಿತಾಣ ನ್ಯೂಸ್‌ಕ್ಲಿಕ್'ನೊಂದಿಗೆ ಒಂದಿಲ್ಲೊಂದು ರೀತಿಯಲ್ಲಿ ಸಂಪರ್ಕವಿರುವ 46 ಪತ್ರಕರ್ತರು, ಸಂಪಾದಕರು, ಬರಹಗಾರರು ಮತ್ತು ವೃತ್ತಿಪರರ ಮನೆಗಳ ಮೇಲೆ ದಾಳಿ ನಡೆಸಿತು,. ಈ ದಾಳಿಗಳಿಂದಾಗಿ ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯಿದೆ(ಯು.ಎ.ಪಿ.ಎ.)ಯ ವಿವಿಧ ವಿಭಾಗಗಳ ಅಡಿಯಲ್ಲಿ ಇಬ್ಬರನ್ನು ಬಂಧಿಸಲಾಯಿತು ಮತ್ತು ಮೊಬೈಲ್ ಫೋನ್‌ಗಳು ಮತ್ತು ಕಂಪ್ಯೂಟರ್‌ಗಳನ್ನು ಜಪ್ತಿಮಾಡಿಕೊಳ್ಳಲಾಯಿತು– ಅವುಗಳಲ್ಲಿರುವ ದತ್ತಾಂಶಗಳ ರಕ್ಷಣೆಯನ್ನು ಖಾತ್ರಿಪಡಿಸಲು ಅಗತ್ಯವಾದ ವಿಧಿ–ವಿಧಾನಗಳನ್ನು ಅನುಸರಿಸದೆಯೇ ಅವನ್ನು ವಶಪಡಿಸಿಕೊಳ್ಳಲಾಗಿದೆ. ಯು.ಎ.ಪಿ.ಎ.ಯ ಆವಾಹನೆಯು ವಿಶೇಷವಾಗಿ ಮೈನಡುಗಿಸುವಂತದ್ದು. **ಪತ್ರಕಾರಿತೆಯನ್ನು 'ಭಯೋತ್ಪಾದನೆ' ಎಂಬಂತೆ ವಿಚಾರಣೆಗೆ ಒಳಪಡಿಸಲಾಗದು. ಅದು ಅಂತಿಮವಾಗಿ ಎಲ್ಲಿಗೆ ಹೋಗುತ್ತದೆ ಎಂದು ಹೇಳಲು ಇತಿಹಾಸದಲ್ಲಿ ವಿಪುಲ ನಿದರ್ಶನಗಳಿವೆ.**

ನೀವು ಸುಪ್ರೀಂ ಕೋರ್ಟ್‌ನಲ್ಲಿರುವ ಅವಧಿಯಲ್ಲಿ, ಹೇಗೆ ಹಲವಾರು ಸಂದರ್ಭಗಳಲ್ಲಿ, ದೇಶದ ತನಿಖಾ ಸಂಸ್ಥೆಗಳನ್ನು



ಕಲೆ: ಪರಿಪ್ಲಬ್ ಚಕ್ರವರ್ತಿ, ದಿ ವೈರ್

ದುರುಪಯೋಗಪಡಿಸಿಕೊಳ್ಳಲಾಗಿದೆ ಮತ್ತು ಪತ್ರಿಕಾರಂಗದ ವಿರುದ್ಧ ಅಸ್ತ್ರವಾಗಿ ಬಳಸಲಾಗಿದೆ ಎಂಬುದನ್ನು ನೋಡಿದ್ದೀರಿ. ಸಂಪಾದಕರು ಮತ್ತು ವರದಿಗಾರರ ವಿರುದ್ಧ ರಾಜದ್ರೋಹ ಮತ್ತು ಭಯೋತ್ಪಾದನೆ ಪ್ರಕರಣಗಳನ್ನು ದಾಖಲಿಸಲಾಗಿದೆ ಮತ್ತು ಒಂದಾದ ಮೇಲೆ ಇನ್ನೊಂದರಂತೆ ಹಲವಾರು, ಬಾಲಿಶವಾದ ಎಫ್‌ಐಆರ್‌ಗಳನ್ನು ಪತ್ರಕರ್ತರ ವಿರುದ್ಧ ಕಿರುಕುಳದ ಸಾಧನವಾಗಿ ಬಳಸಲಾಗಿದೆ.

ಈ ಪತ್ರವನ್ನು ನಿಮಗೆ ಬರೆಯುವ ಉದ್ದೇಶವು ಕಾನೂನಿನಿಂದ ಸ್ಥಾಪಿಸಲಾದ ಪ್ರಕ್ರಿಯೆ ಮತ್ತು ಕಾರ್ಯವಿಧಾನವನ್ನು ಬದಿಗೊತ್ತುವುದು ಅಥವಾ ತಪ್ಪಿಸಿಕೊಳ್ಳುವುದಲ್ಲ. ಆದರೆ ತನಿಖೆಯ ಹೆಸರಿನಲ್ಲಿ ಪತ್ರಕರ್ತರನ್ನು ಆದೇಶ ನೀಡಿ ಕರೆಸುವಾಗ ಮತ್ತು ಅವರ ಸಾಧನಗಳನ್ನು ಜಪ್ತಿಮಾಡಿಕೊಂಡಾಗ, ಅಂತಹ ಪ್ರಕ್ರಿಯೆಯಲ್ಲಿ ಒಂದು ದುರುದ್ದೇಶ ಹುದುಗಿರುತ್ತದೆ, ಅದಕ್ಕೆ ತಡೆಹಾಕಬೇಕಾಗಿದೆ.

ಸಂವಿಧಾನದ ಪ್ರಕಾರ ಬಂಧನದ ಆಧಾರವನ್ನು ಹೇಳಲು ಪೊಲೀಸರು ಬಾಧ್ಯರಾಗಿರುವಂತೆಯೇ, ಅದು ಪ್ರಶ್ನೆಗಳಿಗೆ ಒಳಪಡಿಸಲು ಒಂದು ಪೂರ್ವ ಷರತ್ತೂ ಆಗಿರಬೇಕು. ಅದಿಲ್ಲದೆ, **ನ್ಯೂಸ್‌ಕ್ಲಿಕ್ ಪ್ರಕರಣದಲ್ಲಿ ನಾವು ನೋಡಿದಂತೆ, ಕೆಲವು ನಿರ್ದಿಷ್ಟವಾಗಿ ಹೇಳದ ಅಪರಾಧದ ತನಿಖೆಯ ಬಗ್ಗೆ ಅಸ್ಪಷ್ಟವಾದ ಸಮರ್ಥನೆಗಳು ಪತ್ರಕರ್ತರನ್ನು ರೈತರ ಚಳವಳಿ, ಸರ್ಕಾರವು ಕೋವಿಡ್ ಸಾಂಕ್ರಾಮಿಕವನ್ನು ನಿಭಾಯಿಸಿರುವ ರೀತಿ ಮತ್ತು ಪೌರತ್ವ (ತಿದ್ದುಪಡಿ) ಕಾಯ್ದೆಯ ವಿರುದ್ಧ ಪ್ರತಿಭಟನೆ ಮುಂತಾದವುಗಳನ್ನು ವರದಿ ಮಾಡಿರುವ ಬಗ್ಗೆ ಪ್ರಶ್ನಿಸಲು ಆಧಾರವಾಗಿ ಮಾರ್ಪಟ್ಟಿವೆ.**

ಪತ್ರಕರ್ತರು ಕಾನೂನನ್ನು ಮೀರಿದವರು ಎಂದು ನಾವು ಹೇಳುವುದಿಲ್ಲ. ನಾವು ಕಾನೂನನ್ನು ಮೀರಿ ಇಲ್ಲ ಮತ್ತು ಇರಲು ಬಯಸುವುದಿಲ್ಲ. ಆದಾಗ್ಯೂ, ಮಾಧ್ಯಮಗಳನ್ನು ಬೆದರಿಸುವುದು ಸಮಾಜದ ಪ್ರಜಾಸತ್ತಾತ್ಮಕ ಸಂರಚನೆಯನ್ನು ಬಾಧಿಸುತ್ತದೆ. ಮತ್ತು **ಪತ್ರಕರ್ತರನ್ನು, ಅವರ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವ್ಯವಹಾರಗಳನ್ನು ಕುರಿತ ವರದಿಗಳನ್ನು ಸರಕಾರವು ಒಪ್ಪುವುದಿಲ್ಲ ಎಂಬ ಕಾರಣಕ್ಕೆ ಕ್ರಿಮಿನಲ್ ಪ್ರಕ್ರಿಯೆಗೆ ಗುರಿಪಡಿಸುವುದು, ಪತ್ರಿಕಾರಂಗವನ್ನು ಪ್ರತೀಕಾರದ ಬೆದರಿಕೆಯಿಂದ ನಡುಗಿಸುವ ಪ್ರಯತ್ನವಾಗುತ್ತದೆ – ಇದು ನೀವು ಸ್ವಾತಂತ್ರ್ಯಕ್ಕೆ ಬೆದರಿಕೆ ಎಂದು ಗುರುತಿಸಿರುವ ಅಂಶವೇ ಆಗಿದೆ.**


ಪ್ರಭುತ್ವದ ಏಜೆನ್ಸಿಗಳು ಸದ್ಭಾವನೆಯಿಂದ ಕೂಡಿರುತ್ತವೆ ಎಂದು ಭಾವಿಸಿಕೊಂಡು ಅವಕ್ಕೆ ತನಿಖೆಯ ವ್ಯಾಪಕ ಅಧಿಕಾರಗಳನ್ನು ನೀಡಲಾಗಿದೆ. ಅದೇ ರೀತಿಯಲ್ಲಿ, ಬಲವಂತದ ವಿರುದ್ಧ ವ್ಯಾಪಕವಾದ ನಿರೋಧಕಗಳನ್ನೂ ವಾಕ್ ಸ್ವಾತಂತ್ರ್ಯದ ಸಾಂವಿಧಾನಿಕ ನಿಬಂಧನೆಗಳು ಒಳಗೊಂಡಿರಬೇಕು ಮತ್ತು ವಿಶೇಷವಾಗಿ ಈ ಅಧಿಕಾರಗಳ ದುರುಪಯೋಗ ಮತ್ತೆ–ಮತ್ತೆ ನಡೆಯುತ್ತಿರುವಾಗ ಪೋಲಿಸ್ ಪಡೆ ಮಿತಿಗಳನ್ನು ಮೀರುವ ವಿರುದ್ಧ ವಿಧಾನಗಳನ್ನು ರೂಪಿಸಬೇಕು. ವರ್ಷಾನುಗಟ್ಟಲೆ ನಡೆಯುವ ಒಂದು ವಿಚಾರಣೆಯ ಕೊನೆಯಲ್ಲಿ ಪ್ರತಿ ಪ್ರಕರಣದಲ್ಲೂ ಬಹಳಷ್ಟು ಪಣಕ್ಕೊಡ್ಡಲ್ಪಟ್ಟಿರುತ್ತದೆ.

ಯುಎಪಿಎ ಅಡಿಯಲ್ಲಿ ಬಂಧಿತರಾದ ಪತ್ರಕರ್ತರಿಗೆ ಜಾಮೀನು ಕೊಡುವ ಮುನ್ನವೂ ಕೂಡ ವರ್ಷಾನುಗಟ್ಟಲೆಯಲ್ಲದಿದ್ದರೂ, ತಿಂಗಳುಗಟ್ಟಲೆ, ಅವರು ಕಂಬಿಗಳ ಹಿಂದೆಯೇ ಕಳೆಯಬೇಕಾಗುತ್ತದೆ. ಈಗಾಗಲೇ ಸಿದ್ದಿಕ್ ಕಪ್ಪನ್ ಪ್ರಕರಣ ನಮ್ಮ ಮುಂದಿದೆ; ಅಂತಿಮವಾಗಿ ಜಾಮೀನು ಪಡೆಯುವ ಮೊದಲು ಅವರನ್ನು ಎರಡು ವರ್ಷ ಮತ್ತು ನಾಲ್ಕು ತಿಂಗಳ ಕಾಲ ಸೆರೆವಾಸದಲ್ಲಿಡಲಾಯಿತು. ಕಸ್ಟಡಿಯಲ್ಲಿದ್ದ ಫಾದರ್ ಸ್ಟಾನ್ ಸ್ವಾಮಿಯ ದುರಂತ ಸಾವು 'ಭಯೋತ್ಪಾದನೆ'ಯನ್ನು ಎದುರಿಸುವ ನೆಪದಲ್ಲಿ ಅಧಿಕಾರಿಗಳು ಮಾನವ ಜೀವನದ ಬಗ್ಗೆ ಎಷ್ಟು ಅಸಡ್ಡೆ ತೋರುತ್ತಿದ್ದಾರೆ ಎಂಬುದನ್ನು ನೆನಪಿಸುತ್ತದೆ.

ನಮ್ಮ ಭಯವೆಂದರೆ, ಮಾಧ್ಯಮಗಳ ವಿರುದ್ಧ ಪ್ರಭುತ್ವದ ಕ್ರಮಗಳನ್ನು ಅಳತೆ ಮೀರಿದ ಮಟ್ಟಕ್ಕೆ ಒಯ್ಯಲಾಗಿದೆ ಎಂಬುದು, ಮತ್ತು ಅವರು ಸಾಗುತ್ತಿರುವ ದಿಕ್ಕಿನಲ್ಲಿ ಮುಂದುವರಿಯಲು ಬಿಟ್ಟರೆ, ಸರಿಪಡಿಸುವ ಅಥವಾ ಪರಿಹಾರದ ಕ್ರಮಗಳಿಗೆ ಬಹಳ ತಡಮಾಡಿದಂತಾಗುತ್ತದೆ. ಆದ್ದರಿಂದ, ಮಾಧ್ಯಮಗಳ ವಿರುದ್ಧ ತನಿಖಾ ಸಂಸ್ಥೆಗಳ ಹೆಚ್ಚುತ್ತಿರುವ ದಮನಕಾರಿ ಬಳಕೆಯನ್ನು ಕೊನೆಗೊಳಿಸಲು ಉನ್ನತ ನ್ಯಾಯಾಂಗವು ಈಗ ಮಧ್ಯಪ್ರವೇಶಿಸಬೇಕು ಎಂಬುದು ನಮ್ಮ ಸಾಮೂಹಿಕ ಅಭಿಪ್ರಾಯವಾಗಿದೆ.

ನಿರ್ದಿಷ್ಟವಾಗಿ, ನ್ಯಾಯಾಲಯಗಳು ಈ ಕೆಳಗಿನ ಅಂಶಗಳನ್ನು ಪರಿಗಣಿಸಬೇಕೆಂದು ಕೋರುತ್ತೇವೆ: ಹೊಂದಿರುತ್ತೇವೆ:

1. **ಪತ್ರಕರ್ತರ ಫೋನ್‌ಗಳು ಮತ್ತು ಲ್ಯಾಪ್‌ಟಾಪ್‌ಗಳನ್ನು ಜಪ್ತಿಮಾಡುವ ಚಾಳಿಯನ್ನು ನಿರುತ್ಸಾಹಗೊಳಿಸಲು ನಿಯಮಾವಳಿಗಳನ್ನು ರೂಪಿಸಬೇಕು.** ಖ್ಯಾತ ಶಿಕ್ಷಣತಜ್ಞರು ಸಲ್ಲಿಸಿದ ರಿಟ್ ಅರ್ಜಿ – ರಾಮ್ ರಾಮಸ್ವಾಮಿ ಮತ್ತು ಇತರರು ವರ್ಸಸ್ ಭಾರತ ಒಕ್ಕೂಟ **W.P.** (ಅಡಿಟ) ಸಂ. 138/2021– ಸುಪ್ರಿಂಕೋರ್ಟಿನ ಪರಿಶೀಲನೆಯಲ್ಲಿದೆ, ಇದರಲ್ಲಿ ಭಾರತ ಸರಕಾರ ಸಲ್ಲಿಸಿದ ಅಫಿಡವಿಟ್‌ಗಳಿಂದ ಅದು ತೃಪ್ತವಾಗಿಲ್ಲ. ನ್ಯಾಯದ ಚಕ್ರ ತಿರುಗುತ್ತಿರುವಾಗಲೇ, ಪ್ರಭುತ್ವವು ನಿರ್ಭಿಡೆಯಿಂದ ವರ್ತಿಸುತ್ತಲೇ ಇದೆ. ಸಾಧನಗಳನ್ನು ಜಪ್ತಿ ಮಾಡಿಕೊಳ್ಳುವುದು ನಮ್ಮ ವೃತ್ತಿಪರ ಕೆಲಸಕ್ಕೆ **ಪುಟ 15 ಕ್ಕೆ**



ಮಹಾರಾಷ್ಟ್ರದ ಬಿಜೆಪಿ ನಾಯಕಿ ಮತ್ತು ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವೆಯಾಗಿದ್ದ ಪಂಕಜಾ ಮುಂಡೆ ಅವರ ಮೇಲೆ 2015ರಲ್ಲಿ 'ಚಿಕ್ಕಿ ಹಗರಣ'ದ ಆರೋಪ ಕೇಳಿಬಂದಿತ್ತು. ಅಂಗನವಾಡಿ ಮಕ್ಕಳಿಗೆ ಕಳಪೆ ಗುಣಮಟ್ಟದ 'ಚಿಕ್ಕಿ' (ನೆಲಗಡಲೆ ಮತ್ತು ಬೆಲ್ಲದಿಂದ ತಯ್ಯಾರಿಸಿದ ತಿಂಡಿ) ಸರಭರಾಜು ಮಾಡಲು ಕಾರಣವಾದ ಮತ್ತು ನಿಯಮ ಉಲ್ಲಂಘಿಸಿ ರೂ. 206 ಕೋಟಿ ಮೊತ್ತದ ಗುತ್ತಿಗೆ ನೀಡಿದ ಆರೋಪ ಇದಾಗಿದೆ. ತನಿಖೆ ಕೈಗೆತ್ತಿಕೊಂಡು, ಉತ್ಪನ್ನಗಳ ಮಾದರಿಗಳನ್ನು ಪರೀಕ್ಷೆಗೆ ಪ್ರಯೋಗಾಲಯಗಳಿಗೆ ಕಳುಹಿಸಿದಾಗ, ಚಿಕ್ಕಿಯಲ್ಲಿ ಮಣ್ಣಿನ ಕಣಗಳಿವೆ ಮತ್ತು ಚಿಕ್ಕಿ ಕಳಪೆ ಗುಣಮಟ್ಟದ್ದಾಗಿದೆ ಎಂದು ಕಂಡುಬಂದಿತು. ಈ ಪ್ರಕರಣದ ತನಿಖೆ ನಡೆಸಿದ ಮಹಾರಾಷ್ಟ್ರದ ಎಸಿಬಿ, 2016ರ ಡಿಸೆಂಬರ್ ನಲ್ಲಿ ಪಂಕಜಾ ಮುಂಡೆ ಅವರಿಗೆ ಕ್ಲೀನ್ ಚಿಟ್ ನೀಡಿತು. ಆದರೆ, ನಿಯಮ ಉಲ್ಲಂಘಿಸಿ ಗುತ್ತಿಗೆ ನೀಡಿದ ಪಂಕಜಾ ಅವರ ತಪ್ಪಿಗಾಗಲೀ, ಅಂಗನವಾಡಿ ಮಕ್ಕಳಿಗೆ ಮಣ್ಣು ಮಿಶ್ರಿತ, ಕಳಪೆ ಗುಣಮಟ್ಟದ ಚಿಕ್ಕಿ ಸರಭರಾಜು ಮಾಡಿದ ಗುತ್ತಿಗೆದಾರರ ವಿರುದ್ಧವಾಗಲೀ ಕಾನೂನು ಕ್ರಮ ಜರುಗಿಸಲೇ ಇಲ್ಲ.

ಮೋದಿ–9 ವರ್ಷಗಳು – ಭಾಗ–19

ನಿಯಮ ಉಲ್ಲಂಘಿಸಿ ಒಂದೇ ದಿನದಲ್ಲಿ ರೂ. 206 ಕೋಟಿ ಮೊತ್ತದ ಒಪ್ಪಂದಕ್ಕೆ ಸಹಿ!

ಗುತ್ತಿಗೆ ನೀಡಿದ ಸಚಿವೆ ಪಂಕಜಾ ಮುಂಡೆ ಅವರಿಗೆ ಕ್ಲೀನ್ ಚಿಟ್!! ಮಕ್ಕಳಿಗೆ ಕಳಪೆ ಚಿಕ್ಕಿ ಒದಗಿಸಿದ ಗುತ್ತಿಗೆದಾರರ ವಿರುದ್ಧವೂ ಕ್ರಮವಿಲ್ಲ!!!

ಒಂದೇ ದಿನದಲ್ಲಿ ರೂ. 206 ಕೋಟಿ ಮೊತ್ತದ ಗುತ್ತಿಗೆ ಒಪ್ಪಂದಕ್ಕೆ ಸಹಿ. ಗುತ್ತಿಗೆ ನೀಡುವಾಗ ಯಾವುದೇ ನಿಯಮಗಳನ್ನು ಪಾಲಿಸಲಿಲ್ಲ. ಟೆಂಡರ್ ಕರೆಯಲಿಲ್ಲ. ಸ್ಪರ್ಧಾತ್ಮಕ ಬಿಡ್‌ಗಳಿಲ್ಲ. ಸುಪ್ರೀಂ ಕೋರ್ಟ್ ಆದೇಶ ಮತ್ತು ಹೈಕೋರ್ಟ್ ನಿರ್ದೇಶನಗಳ ಅನುಸರಣೆ ಇಲ್ಲ. ದರ ನಿಗದಿಯಲ್ಲೂ ದುಪ್ಪಟ್ಟು. ಇದು 'ಚಿಕ್ಕಿ ಹಗರಣ' ದಲ್ಲಿ ಪಂಕಜಾ ಮುಂಡೆ ಅವರ ವಿರುದ್ಧ ಕೇಳಿ ಬಂದ ಆರೋಪಗಳು.

ಇದು 2015ಕ್ಕೂ ಮುನ್ನ ಮಹಾರಾಷ್ಟ್ರದಲ್ಲಿ ನಡೆದ ಒಂದು ಹಗರಣ. ಮಹಾರಾಷ್ಟ್ರದ ಅಂದಿನ ಬಿಜೆಪಿ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಮತ್ತು ಬಿಜೆಪಿ ನಾಯಕಿ ಪಂಕಜಾ ಮುಂಡೆ ಅವರಿಗೆ ಸಂಬಂಧಿಸಿದ ಹಗರಣವಿದು. ನಿಯಮ ಉಲ್ಲಂಘಿಸಿ ರೂ. 206 ಕೋಟಿ ಮೊತ್ತದ ಗುತ್ತಿಗೆ ನೀಡುವ ಮೂಲಕ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ರಾಜ್ಯ ಸರ್ಕಾರ ನಡೆಸುವ ಅಂಗನವಾಡಿಗಳಿಗೆ ಕಳಪೆ ಗುಣಮಟ್ಟದ ಚಿಕ್ಕಿ (ನೆಲಗಡಲೆ ಮತ್ತು ಬೆಲ್ಲದಿಂದ ತಯ್ಯಾರಿಸುವ ತಿಂಡಿ) ನೀಡಲು ಕೆಲವು ಪೂರೈಕೆದಾರರಿಗೆ ಒಲವು



ತೋರಿದ ಆರೋಪ ಪಂಕಜಾ ಮುಂಡೆ ಅವರ ಮೇಲಿತ್ತು.

ಬೆಳಕಿಗೆ ಬಂದ ಹಗರಣ

ಜೂನ್ 15 ರಂದು ಅಹಮದ್‌ನಗರ ಜಿಲ್ಲಾ ಪರಿಷತ್ ಅಧ್ಯಕ್ಷೆ ಮಂಜುಶ್ರೀ ಗುಂಡ್ ಅವರಿಂದ ಸಚಿವೆ ಪಂಕಜಾ ಮುಂಡೆ ಅವರ ಕಚೇರಿಗೆ ಪತ್ರ ಬಂದಾಗ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಗಳ (ಐಸಿಡಿಎಸ್) ಅಡಿಯಲ್ಲಿ ಬುಡಕಟ್ಟು ವಿದ್ಯಾರ್ಥಿಗಳಿಗೆ ವಿತರಿಸುವ ಚಿಕ್ಕಿಯ ಗುಣಮಟ್ಟದ ಬಗ್ಗೆ ದೂರು ನೀಡಿದಾಗ ಹಗರಣವು ಮೊದಲು ಬೆಳಕಿಗೆ ಬಂದಿತು.

ಮುಂಡೆ ಅವರ ಆದೇಶದ ಮೇರೆಗೆ ಫೆಬ್ರವರಿಯಲ್ಲಿ ರೂ. 206 ಕೋಟಿ ಮೌಲ್ಯದ ಗುತ್ತಿಗೆ ನೀಡುವಾಗ ನಿಯಮಗಳನ್ನು ಉಲ್ಲಂಘಿಸಿ ಕೆಲವು ಕಂಪನಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ಆರೋಪಿಸಿ, ಜೂನ್ 2015 ರಲ್ಲಿ, ಕಾಂಗ್ರೆಸ್ ವಕ್ತಾರ ಸಚಿನ್ ಸಾವಂತ್ ಅವರು ಎಸಿಬಿಗೆ ದೂರು ಸಲ್ಲಿಸಿದರು.

ಈ ಖರೀದಿ ಹಗರಣದ ಬಗ್ಗೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ತನಿಖೆ ನಡೆಸಬೇಕೆಂದು ಬಾಂಬೆ ಹೈಕೋರ್ಟ್‌ನಲ್ಲಿ 29 ಜೂನ್ 2015 ಅರ್ಜಿ ಸಲ್ಲಿಸಲಾಯಿತು.

ದುಪ್ಪಟ್ಟು ದರ ನಿಗದಿ

ಪಂಕಜಾ ಮುಂಡೆ ಅವರು ಮಹಾರಾಷ್ಟ್ರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆಯಾಗಿ ಅಧಿಕಾರ ವಹಿಸಿಕೊಂಡ ನಂತರ, ಮಹಾರಾಷ್ಟ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ನಿಗದಿತ ಮಾರ್ಗಸೂಚಿಗಳನ್ನು ಅನುಸರಿಸದೆ, 206 ಕೋಟಿ ರೂಪಾಯಿ ಮೌಲ್ಯದ ಸರಕುಗಳನ್ನು ಖರೀದಿಸಿದೆ. ಸರ್ಕಾರದ ನಿಯಮಗಳ ಪ್ರಕಾರ, 3 ಲಕ್ಷ ರೂ.ಗಿಂತ ಹೆಚ್ಚಿನ ಆದೇಶವನ್ನು ನೀಡುವ ಸಚಿವಾಲಯಗಳು ಇ–ಟೆಂಡರ್ ಪ್ರಕ್ರಿಯೆಯ



ಮೂಲಕ ಮಾಡಬೇಕು. ಆದರೆ, ಪಂಕಜಾ ಅವರು, ಅಂಗನವಾಡಿ ಮತ್ತು ಶಾಲೆಗಳಿಗೆ ಚಿಕ್ಕಿ, ಚಾಪೆ ಮತ್ತು ಪುಸ್ತಕಗಳನ್ನು ಖರೀದಿಸಲು ರೂ. 206 ಕೋಟಿ ಮೊತ್ತದ, 24 ಖರೀದಿ ಒಪ್ಪಂದಗಳು/ಆದೇಶಗಳನ್ನು ಟೆಂಡರ್ ಕರೆಯದೆ ಒಂದೇ ದಿನದಲ್ಲಿ ತೆರವುಗೊಳಿಸಿದ್ದಾರೆ ಎಂದು ಆರೋಪಿಸಲಾಯಿತು. ವಿದ್ಯಾರ್ಥಿಗಳಿಗೆ ಪೂರೈಸಿದ ಚಿಕ್ಕಿಯಲ್ಲಿ ಮಣ್ಣು ಮತ್ತು ಮಣ್ಣಿನ ಕಣಗಳು ಕಂಡುಬಂದಿವೆ ಎಂದು ಆರೋಪಿಸಿ ದೂರು ನೀಡಲಾಯಿತು.

ಸೂರ್ಯಕಾಂತ ಮಹಿಳಾ ಉದ್ಯೋಗಿಕ್ ಸಹಕಾರಿ ಸಂಸ್ಥೆಗೆ (SMASS) ರೂ. 113 ಕೋಟಿ ಮೌಲ್ಯದ ಚಿಕ್ಕಿ ಸರಭರಾಜು ಗುತ್ತಿಗೆಯನ್ನು ನೀಡಲಾಯಿತು. ಇತರ ಗುಂಪುಗಳು ಪ್ರತಿ ಕೆಜಿಗೆ ರೂ. 127 ಕೇಳಿದ್ದರೂ ಸಹ, SMASS ಪ್ರತಿ ಕೆಜಿ ಚಿಕ್ಕಿಗೆ ರೂ. 285 ಬೆಲೆಯನ್ನು ಉಲ್ಲೇಖಿಸಿತ್ತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಗುತ್ತಿಗೆಗಳನ್ನು ನೀಡುವ ಜವಾಬ್ದಾರಿ ಹೊಂದಿರುವ ಇಲಾಖೆಯು, ಏಪ್ರಿಲ್ 2013 ರಲ್ಲಿ ಇದೇ ಎಸ್‌ಎಂಎಎಸ್ ಎಸ್‌ಗೆ ಗುತ್ತಿಗೆಯನ್ನು ವಿರೋಧಿಸಿತ್ತು. ಆಗಿನ ಕೈಗಾರಿಕಾ ಅಭಿವೃದ್ಧಿ ಆಯುಕ್ತರಾಗಿದ್ದ ರಾಧಿಕಾ ರಸ್ತೋಗಿ ಅವರು ಟೆಂಡರ್‌ಗಳನ್ನು ಆಹ್ವಾನಿಸಿ ಮಾತ್ರ ಗುತ್ತಿಗೆ ನೀಡಬೇಕೆಂದು ಸ್ಪಷ್ಟವಾಗಿ ಹೇಳಿದ್ದರು.

ಆರೋಪ ನಿರಾಕರಿಸಿದ ಸಚಿವೆ

ಎಲ್ಲರೂ ಮಾಡುವಂತೆ ಪಂಕಜಾ ಅವರೂ ತಮ್ಮ ಮೇಲಿನ ಆರೋಪಗಳನ್ನು ತಳ್ಳಿಹಾಕಿದರು. ನಿಯಮ ಉಲ್ಲಂಘಿಸಿ ನಡೆಸಿದ ಗುತ್ತಿಗೆ ಒಪ್ಪಂದವನ್ನು ಸಮರ್ಥಿಸಿಕೊಳ್ಳಲು ಅವರು ನೀಡಿದ ಕಾರಣ ಹೀಗಿತ್ತು: "ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಸರಕುಗಳನ್ನು ಖರೀದಿಸಲು, ಆದೇಶಿಸಲು ಇನ್ನಷ್ಟು ವಿಳಂಬವಾಗಿದ್ದರೆ ಕೇಂದ್ರದಿಂದ ಬಿಡುಗಡೆಯಾದ ಹಣವು ಲ್ಯಾಪ್ಸ್ ಆಗುತ್ತಿತ್ತು. ಸರ್ಕಾರಿ ನಿಧಿಯ ಪ್ರತಿ ಪೈಸೆಯನ್ನು ಉಳಿಸುವುದು ನನ್ನ ಉದ್ದೇಶವಾಗಿತ್ತು."

"ಯಾರಿಗೂ ಅನುಕೂಲ ಮಾಡಿಕೊಡುವ ಪ್ರಶ್ನೆಯೇ ಇಲ್ಲ. ಗುತ್ತಿಗೆ ಪಡೆದ ಗುತ್ತಿಗೆದಾರರು ಹೊಸಬರೇನಲ್ಲ. ಎನ್‌ಸಿಪಿ ಸರ್ಕಾರದ ಅವಧಿಯಲ್ಲಿ ಅದೇ ಗುತ್ತಿಗೆದಾರರು ಸರಕುಗಳನ್ನು ಪೂರೈಸುತ್ತಿದ್ದಾರೆ. ಹಿಂದಿನ ಸರ್ಕಾರವು ಗುತ್ತಿಗೆ ಪ್ರಕ್ರಿಯೆ ಪ್ರಾರಂಭಿಸಿದೆ" ಎಂದು ಪಂಕಜಾ ತಾವು ಅಕ್ರಮವಾಗಿ ನಡೆಸಿದ ಒಪ್ಪಂದದ ಕ್ರಮಗಳನ್ನು ಸಮರ್ಥಿಸಿಕೊಂಡರು.

ಪಂಕಜಾ ಅವರಿಗೆ ಕ್ಲೀನ್ ಚಿಟ್ ನೀಡಿದ ಎಸಿಬಿ!

ಡಿಸೆಂಬರ್ 20, 2016 ರಂದು, ಮಹಾರಾಷ್ಟ್ರದ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಅಂಗನವಾಡಿ ಮತ್ತು ಶಾಲಾ ಮಕ್ಕಳಿಗೆ ರೂ. 206 ಕೋಟಿ ಮೊತ್ತದ ಸಾಮಗ್ರಿಗಳ ಗುತ್ತಿಗೆ ನೀಡುವಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪದ ಮೇಲೆ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಪಂಕಜಾ ಮುಂಡೆ ವಿರುದ್ಧದ ಚಿಕ್ಕಿ ಹಗರಣ ಪ್ರಕರಣವನ್ನು ಮುಚ್ಚುವಂತೆ ಶಿಫಾರಸು ಮಾಡಿತು. ಮುಚ್ಚಿದ ವರದಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸಿರುವುದಾಗಿ ಎಸಿಬಿ ಮೂಲಗಳು ಖಚಿತಪಡಿಸಿದವು.

ಎಫ್‌ಐಆರ್ ದಾಖಲಿಸಿಲ್ಲವೇಕೆ? ಹೈಕೋರ್ಟ್ ಪ್ರಶ್ನೆ

2015 ರಲ್ಲಿ ರಾಜ್ಯ ಸರ್ಕಾರ ನಡೆಸುವ ಶಾಲೆಗಳಿಗೆ ಕಳಪೆ ಗುಣಮಟ್ಟದ ಚಿಕ್ಕಿಗಳನ್ನು ವಿತರಿಸಿದ ಸರಬರಾಜುದಾರರ ವಿರುದ್ಧ ಇಲ್ಲಿಯವರೆಗೆ ಏಕೆ ಪ್ರಥಮ ಮಾಹಿತಿ ವರದಿ (ಎಫ್‌ಐಆರ್) ದಾಖಲಿಸಿಲ್ಲ ಎಂದು ಬಾಂಬೆ ಹೈಕೋರ್ಟ್ ಆಗಸ್ಟ್ 12, 2021 ರಂದು ಮಹಾರಾಷ್ಟ್ರ ಸರ್ಕಾರವನ್ನು ಕೇಳಿದೆ.

ಮುಖ್ಯ ನ್ಯಾಯಮೂರ್ತಿ ದೀಪಂಕರ್ ದತ್ತಾ ಮತ್ತು ನ್ಯಾಯಮೂರ್ತಿ ಗಿರೀಶ್ ಕುಲಕರ್ಣಿ ಅವರ ವಿಭಾಗೀಯ ಪೀಠವು, "ಪೂರೈಕೆದಾರರ ವಿರುದ್ಧ ಆಹಾರ ಸುರಕ್ಷತಾ ಕಾಯ್ದೆಯಡಿಯಲ್ಲಿ ಯಾವುದೇ ಅಪರಾಧ ಅಥವಾ ಎಫ್‌ಐಆರ್ ಏಕೆ

ಪುಟ 14 ಕ್ಕೆ

ತಮಗೆ ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸಿಕೊಂಡರು

ಅಂಗನವಾಡಿ ಮಕ್ಕಳಿಗೆ ಚಿಕ್ಕಿ ಮತ್ತು ಆಯುರ್ವೇದಿಕ್ ಬಿಸ್ಕತ್ತುಗಳ ಖರೀದಿಗೆ ಸಂಬಂಧಿಸಿದಂತೆ 2004 ಮತ್ತು 2006 ರಲ್ಲಿ ಸುಪ್ರೀಂ ಕೋರ್ಟ್ ಪೌಷ್ಠಿಕಾಂಶ ಪೂರೈಕೆಗಾಗಿ ಖಾಸಗಿ ಗುತ್ತಿಗೆದಾರರನ್ನು ನಿಷೇಧಿಸಿದೆ. ಮತ್ತು ಅಂಗನವಾಡಿಗಳಲ್ಲಿನ ಮಕ್ಕಳ ಪೋಷಣೆಯ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ICDS) ಹಣವನ್ನು ಧಾನ್ಯಗಳನ್ನು ಖರೀದಿಸಲು ಮತ್ತು ಆಹಾರವನ್ನು ತಯಾರಿಸಲು ಗ್ರಾಮ ಸಮುದಾಯಗಳು, ಸ್ವ–ಸಹಾಯ ಗುಂಪುಗಳು ಮತ್ತು ಮಹಿಳಾ ಮಂಡಲಗಳನ್ನು ಬಳಸಿಕೊಳ್ಳುವ ಮೂಲಕ ಖರ್ಚು ಮಾಡಬೇಕು ಎಂದು ಕೋರ್ಟ್ ನಿರ್ದೇಶಿಸಿದೆ.

ಅಕ್ಟೋಬರ್ 7, 2004 ರ ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮಗಳ ವಿವರಗಳನ್ನು ನೀಡುವ ಅಫಿಡವಿಟ್‌ಗಳನ್ನು ಸಲ್ಲಿಸಲು ಡಿಸೆಂಬರ್ 13, 2006 ರಂದು ಎಲ್ಲಾ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಯಿತು. ಅದರ ನಂತರ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ 2 ರಿಂದ 6 ವರ್ಷ ವಯಸ್ಸಿನ ಮಕ್ಕಳಿಗೆ ಬೆಳಗಿನ ತಿಂಡಿ ಮತ್ತು ಬಿಸಿ ಬೇಯಿಸಿದ ಊಟದ ರೂಪದಲ್ಲಿ ಪೂರಕ ಪೌಷ್ಟಿಕಾಂಶವನ್ನು ಒದಗಿಸುವಂತೆ ನಿರ್ದೇಶಿಸಲಾಯಿತು.

ಆದರೆ ಮಹಾರಾಷ್ಟ್ರ ಸರ್ಕಾರವು ಬಿಸಿ ಬೇಯಿಸಿದ ಆಹಾರದ ಬದಲಿಗೆ ಚಿಕ್ಕಿ ಮತ್ತು ಬಿಸ್ಕತ್‌ಗಳನ್ನು ಪೂರಕ ಪೌಷ್ಟಿಕಾಂಶವಾಗಿ ಮಹಿಳಾ ಮಂಡಲಗಳು ಅಥವಾ ಮಹಿಳಾ ಸ್ವಸಹಾಯ ಗುಂಪುಗಳ ಬದಲಿಗೆ ಮಹಿಳಾ ಸಂಘ ಅಥವಾ ಮಹಿಳಾ ಸಂಸ್ಥೆಗಳಿಗೆ ನೀಡಿತು. ದೊಡ್ಡ ಗುತ್ತಿಗೆದಾರರು ಬರದಂತೆ ನೋಡಿಕೊಳ್ಳಲು, ಯಾವುದೇ ಒಂದು ಸ್ವಸಹಾಯ ಸಂಘವು ಐದಕ್ಕಿಂತ ಹೆಚ್ಚು ಅಂಗನವಾಡಿಗಳನ್ನು ಪೂರೈಸಬಾರದು ಎಂದು ಅವರು ಸರ್ಕಾರದ ನಿರ್ಣಯವನ್ನು ಅಂಗೀಕರಿಸಿದರು.


ಈ ವ್ಯವಸ್ಥೆಯು ಕಾರ್ಯನಿರ್ವಹಿಸಲು ಪ್ರಾರಂಭಿಸಿದಾಗ, 2009 ರಲ್ಲಿ ಮಹಾರಾಷ್ಟ್ರ ಸರ್ಕಾರವು ಮತ್ತೊಮ್ಮೆ ಹೊಸ ವ್ಯವಸ್ಥೆಯನ್ನು ಪರಿಚಯಿಸಿತು. ಅದರ ಮೂಲಕ ಕೇವಲ ವಾಣಿಜ್ಯ ಹಿತಾಸಕ್ತಿಗಳೊಂದಿಗೆ ದೊಡ್ಡ ಖಾಸಗಿ ಗುತ್ತಿಗೆದಾರರಿಗೆ ಹಿಂಬಾಗಿಲ ಪ್ರವೇಶವನ್ನು ಅನುಮತಿಸಲಾಯಿತು. ನಂತರ ಆ ನಿಟ್ಟಿನಲ್ಲಿ 2011ರಲ್ಲಿ ಸರ್ಕಾರಿ ನಿರ್ಣಯಗಳ (ಜಿಆರ್) ಜಾರಿ ಮಾಡಲಾಗಿತ್ತು.

ಏತನ್ಮಧ್ಯೆ ಅವರು ಬುದ್ಧಿವಂತಿಕೆಯಿಂದ ಬಳಸಿದ ಪದ 'ಮಹಿಳಾ ಸಂಸ್ಥೆಗಳು'. ಮಹಿಳಾ ಸಂಸ್ಥೆಗಳು ಕೇವಲ ಸ್ವಸಹಾಯ ಸಂಘಗಳನ್ನು ಮತ್ತು ಮಹಿಳಾ ಮಂಡಲಗಳನ್ನು ಒಳಗೊಂಡಿಲ್ಲ. ಆದರೆ ಅದರಲ್ಲಿ ಮಹಿಳೆಯರನ್ನು ಹೊಂದಿರುವ ಯಾವುದೇ ಘಟಕ, ಗಾತ್ರ ಮತ್ತು ವಹಿವಾಟು ಲೆಕ್ಕಿಸದೆ, ಮಹಿಳಾ ಸಂಸ್ಥೆಗಳನ್ನು ಸೇರಿಸುವ ಮೂಲಕ ಮಹಾರಾಷ್ಟ್ರ ಸರ್ಕಾರವು ಖಾಸಗಿ ಕಂಪನಿಗಳು ಮತ್ತು ಗುತ್ತಿಗೆದಾರರಿಗೆ ಬಾಗಿಲು ತೆರೆಯಿತು. ಮತ್ತು ಗುತ್ತಿಗೆಯನ್ನು ಮೂರು ಮಹಿಳಾ ಸಂಸ್ಥೆಗಳಿಗೆ ನೀಡಲಾಯಿತು. ಆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ, ಪಂಕಜಾ ಮುಂಡೆ ಈ ಖಾತೆಯ ಹೊಣೆ ಹೊತ್ತ ನಂತರ, ಖಾಸಗಿ ಗುತ್ತಿಗೆದಾರರ ಹಿತಾಶಕ್ತಿ ಮತ್ತು ಭ್ರಷ್ಟಾಚಾರ ಮತ್ತಷ್ಟು ಹೆಚ್ಚಿತು.

ಮಹಿಳೆಯರಿಗೆ ಸೀಟು ಮೀಸಲು: ಮುಂಬರುವ ಸಂಸತ್ ಚುನಾವಣೆಯಲ್ಲಿ ಜಾರಿಗೊಳಿಸಬೇಕು

ಸಂಸತ್ತಿನಲ್ಲಿ ಸಿಪಿಐ(ಎಂ) ಲೋಕಸಭಾ ಸದಸ್ಯರಾದ ಎ.ಎಂ. ಆರಿಫ್ ಅವರ ಒತ್ತಾಯ

ಇಪ್ಪತ್ತೇಳು ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ಸೆಪ್ಟೆಂಬರ್ 20, 2023 ರಂದು ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡನೆಯಾಗಿ, ಸಂಸತ್ತಿನ ಅನುಮೋದನೆ ದೊರಕಿದೆ. ಇಷ್ಟು ವರ್ಷ ಅಧಿಕಾರಕ್ಕೆ ಬಂದ ಸರಕಾರಗಳು ಈ ಮಸೂದೆಯನ್ನು ನಾಶಮಾಡಲು ಯತ್ನಿಸಿ ಅಸಡ್ಡೆಯಿಂದ ಮೂಲೆಗುಂಪು ಮಾಡಲು ಯತ್ನಿಸಿವೆ. ಆದರೆ, ಎಡಪಕ್ಷಗಳು ಮತ್ತು ಎಐಡಿಡಬ್ಲ್ಯೂಎ (ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ) ಸೇರಿದಂತೆ ಮಹಿಳಾ ಚಳವಳಿಯ ಕೆಲವು ವಿಭಾಗಗಳು ಮಾತ್ರ ಈ ಮಸೂದೆಯನ್ನು ಜೀವಂತವಾಗಿಡಲು ನಿರಂತರವಾಗಿ ಹೋರಾಟ ಮತ್ತು ಪ್ರಚಾರ ನಡೆಸುತ್ತಿವೆ. ಈಗ ಮಸೂದೆಗೆ ಅನುಮೋದನೆ ದೊರಕಿದ್ದರೂ ಮೀಸಲಾತಿಗಾಗಿ ಮಹಿಳೆಯರು ಮತ್ತಷ್ಟು ವರ್ಷಗಳ ಸಮಯ ಕಾಯುವಂತಹ ಸ್ಥಿತಿ ನಿರ್ಮಾಣ ಮಾಡಲಾಗಿದೆ. ಸೆಪ್ಟೆಂಬರ್ 20, 2023 ರಂದು ಮಹಿಳಾ ಮೀಸಲಾತಿಗೆ ಸಂಬಂಧಿಸಿದ ಕರಡು ಮಸೂದೆಯನ್ನು ಮಂಡಿಸಿದಾಗ, ಮಸೂದೆ ಕುರಿತಂತೆ ಸಿಪಿಎಂ ಸಂಸದ ಎ.ಎಂ. ಆರಿಫ್ ಅವರು ಸಂಸತ್ತಿನಲ್ಲಿ ಮಾತನಾಡಿ, "ಜನಗಣತಿ ಹಾಗೂ ಕ್ಷೇತ್ರ ಪುನರ್ ವಿಂಗಡಣೆಗೆ ಕಾಯದೆ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಈ ಮಸೂದೆಯನ್ನು ಈ ಸರ್ಕಾರ ಜಾರಿಗೆ ತರಬೇಕೆಂದು ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷದ ಪರವಾಗಿ ವಿನಂತಿಸುತ್ತೇನೆ" ಎಂದರು. ಅವರ ಸಂಪೂರ್ಣ ಮಾತುಗಳು ಇಲ್ಲಿವೆ.



ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪರವಾಗಿ ನಾನು 2023 ರ ಸಂವಿಧಾನ (128 ನೇ ತಿದ್ದುಪಡಿ) ಮಸೂದೆಯನ್ನು ಸಂಪೂರ್ಣವಾಗಿ ಸ್ವಾಗತಿಸಲು ಬಯಸುತ್ತೇನೆ. ಇದನ್ನು ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲು ತರಲಾಗಿದೆ. ದೇಶದ ಕಾನೂನುಗಳನ್ನು ರೂಪಿಸುವಲ್ಲಿ ಮತ್ತು ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಈ ಬಗ್ಗೆ ನಮ್ಮ ದೇಶದಲ್ಲಿ ಬಹಳ ಹಿಂದೆಯೇ ಚರ್ಚೆ ಆರಂಭವಾಗಿದೆ. ಮತ್ತು ಈಗಷ್ಟೇ, ಈ ನಿಟ್ಟಿನಲ್ಲಿ ಹಿಂದಿನ ಎಲ್ಲಾ ಪ್ರಯತ್ನಗಳನ್ನು ಮರೆಮಾಚಿ, ಬಿಜೆಪಿ ಸರ್ಕಾರ ಮಾತ್ರ ಇದನ್ನು ಮಾಡಲು ಸಾಧ್ಯ ಎಂಬಂತೆ ಈ ಸರ್ಕಾರ (ಬಿಜೆಪಿ ಸರ್ಕಾರ) ಈ ಮಸೂದೆಯನ್ನು ಮಂಡಿಸಿದೆ.

ವಾಸ್ತವವಾಗಿ, ಈ ಮಸೂದೆಯನ್ನು ತಂದ ಶ್ರೇಯಸ್ಸು ಕಾಮ್ರೇಡ್ ಬೃಂದಾ ಕಾರತ್, ಅನಿರಾಜ, ಶ್ರೀಮತಿ ಟೀಚರ್ ಸೇರಿದಂತೆ ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಹಿಳಾ ಸಂಘಟನೆಗಳಿಗೆ ಸಲ್ಲುತ್ತದೆ ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ಜಾರಿಗೊಳಿಸಬೇಕು ಎಂದು, ಸಂವಿಧಾನದ ಪ್ರಕಾರ ಎಲ್ಲರಿಗೂ ಸಮಾನ ನ್ಯಾಯ, ಸಮಾನ ಸ್ಥಾನಮಾನವನ್ನು ಖಾತ್ರಿಪಡಿಸಬೇಕು ಎಂದು ಒತ್ತಾಯಿಸಿ, ಸುಪ್ರೀಂ ಕೋರ್ಟ್‌ಗೆ ಹೋದವರಿಗೆ ಸಲ್ಲುತ್ತದೆ. ಇಷ್ಟು ವರ್ಷಗಳಿಂದ ಈ ಪ್ರಯತ್ನದಲ್ಲಿ ತೊಡಗಿಸಿಕೊಂಡಿರುವ ಎಲ್ಲ ನಾಯಕರಿಗೆ ನನ್ನ ಅಭಿನಂದನೆಗಳನ್ನು ವ್ಯಕ್ತಪಡಿಸುತ್ತೇನೆ. ಈ ಬಾರಿಯ ಲೋಕಸಭೆಯ ಅಧಿವೇಶನ ಮುಗಿಯುವ ಹಂತದಲ್ಲಿ ಮಂಡಿಸಿ, ಅದೂ ಕೂಡ ತಕ್ಷಣ ಅನುಷ್ಠಾನಗೊಳಿಸದೆ ಕಾಲಹರಣ ಮಾಡುವ ರೀತಿಯಲ್ಲಿ ತಂದಿರುವ ಈ ವಿಧೇಯಕವು ದೇಶದ ಮಹಿಳೆಯರ ಬಗ್ಗೆ ಆಳುವವರಿಗೆ ಇರುವ ನಕಲಿ ಅನುಕಂಪವನ್ನು ಬಯಲು ಮಾಡಿದೆ.

ನೀತಿ ಉಲ್ಲಂಘನೆ... ಪ್ರಜಾಪ್ರಭುತ್ವಕ್ಕೆ ಅಗೌರವ

ಪ್ರತಿ ದಿನ ಲೋಕಸಭೆಯಲ್ಲಿ ನಡೆಸಬೇಕಾದ ಅಜೆಂಡಾದ ಬಗ್ಗೆ ಕೊನೆಯ ಗಳಿಗೆಯವರೆಗೂ ಏನನ್ನೂ ಹೇಳದೆ ಸಂಸತ್ತಿನ ಎಲ್ಲ ನೀತಿ ನಿಯಮಗಳನ್ನು ಈ ಸರ್ಕಾರ ಸಾರಾಸಗಟಾಗಿ ಉಲ್ಲಂಘಿಸಿ ನಮ್ಮನ್ನೆಲ್ಲ ಕತ್ತಲಲ್ಲಿಟ್ಟಿದೆ. ಈ ಮಸೂದೆಯನ್ನು ಮಂಡಿಸುವವರೆಗೂ ನಮಗೆ ಅದರ ಬಗ್ಗೆ ಏನೂ ತಿಳಿದಿಲ್ಲ. ಆದರೆ ಅದೇ ಸಮಯದಲ್ಲಿ ಬಿಜೆಪಿಯ ಎಲ್ಲರಿಗೂ ಇದು ಈಗಾಗಲೇ ಚೆನ್ನಾಗಿ ತಿಳಿದಿದೆ. (ನಾಯಕರ ಆದೇಶದಂತೆ ಕೆಲವು ಭಾಗಗಳನ್ನು ಅಳಿಸಲಾಗಿದೆ.) ನಾವೆಲ್ಲರೂ ಇದನ್ನು ನೋಡಿದ್ದೇವೆ. ಸಂಸತ್ತಿನ ಸದಸ್ಯರಿಗಿಂತ ಅವರು ಈ ಸರ್ಕಾರಕ್ಕೆ ಹೆಚ್ಚು ನಂಬಲರ್ಹರು. ಇದು ಪ್ರಜಾಪ್ರಭುತ್ವಕ್ಕೆ ಮಾಡಿದ ಮತ್ತೊಂದು ಅವಮಾನ. ಈ ಸರ್ಕಾರ ಯಾಕೆ ಹೀಗೆ ವರ್ತಿಸುತ್ತಿದೆ? ಇದು ಈ ಸದನ ಮತ್ತು ಪ್ರಜಾಸತ್ತಾತ್ಮಕ ಗೌರವದ ಅಪಹಾಸ್ಯವಲ್ಲದೆ ಬೇರೇನೂ ಅಲ್ಲ. 2014ರಲ್ಲಿ ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯನ್ನು ಪ್ರಕಟಿಸಿದಾಗ ಸಂಸತ್ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವುದಾಗಿ ಭರವಸೆ ನೀಡಿತ್ತು. ವಾಸ್ತವವಾಗಿ, ಅವರು ತಮ್ಮ ಚುನಾವಣಾ ಭರವಸೆಗಳನ್ನು ಗೌರವಿಸಿದ್ದರೆ, ಈ ಸದನದಲ್ಲಿ ಕನಿಷ್ಠ ಮೂರನೇ ಒಂದು ಭಾಗದಷ್ಟು ಅಥವಾ ಇನ್ನೂ ಹೆಚ್ಚು ಮಹಿಳಾ ಸದಸ್ಯರು ಇರುತ್ತಿದ್ದರು. 2019ರಲ್ಲಿ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದಾಗಲೂ ಇಂತಹ ಸಂವಿಧಾನ ತಿದ್ದುಪಡಿ ತರಲು ಅವಕಾಶ ಸಿಕ್ಕ ನಂತರ ಅದನ್ನು ಅನುಷ್ಠಾನಕ್ಕೆ ತರಲು ನಿಜವಾಗಿಯೂ ಕಾಳಜಿ ಇದ್ದಲ್ಲಿ ಅದನ್ನು ಜಾರಿಗೊಳಿಸಬಹುದಿತ್ತು.

ಸ್ತ್ರೀಯರಿಂದ ಶಾಪಗ್ರಸ್ತರಾಗುವಿರಿ

ಈ ಸರ್ಕಾರ ಸದನದಲ್ಲಿ ಯಾವುದೇ ಚರ್ಚೆ ನಡೆಸದೆ ಅಥವಾ ಸ್ಥಾಯಿ ಸಮಿತಿಗೆ ಏನನ್ನೂ ಕಳುಹಿಸದೆ ಲೆಕ್ಕವಿಲ್ಲದಷ್ಟು ಕಾನೂನುಗಳನ್ನು ಜಾರಿಗೆ ತಂದಿದೆ. ಇಷ್ಟು ಅವಧಿಯಲ್ಲಿ ಬಿಜೆಪಿಯಾಗಲಿ, ಈ ಸರಕಾರವಾಗಲಿ ಮಹಿಳಾ ಮೀಸಲಾತಿ ಬಗ್ಗೆ ಬಾಯಿ ತೆರೆದಿಲ್ಲ. ಎರಡನೇ ಬಾರಿಗೆ ಅಧಿಕಾರಕ್ಕೆ ಬಂದು ನಾಲ್ಕೂವರೆ ವರ್ಷಗಳ ನಂತರ ಈ ಮಸೂದೆಯನ್ನು ಮಂಡಿಸಲಾಗಿದೆ. ಈಗಲೂ 2024ರಲ್ಲಿ ನಡೆಯುವ ಚುನಾವಣೆಯಲ್ಲಿ ಮಹಿಳೆಯರಿಗೆ ಮೀಸಲಾತಿ ಇಲ್ಲ. ಅದಕ್ಕೆ ವ್ಯತಿರಿಕ್ತವಾಗಿ 2029ರಲ್ಲಿ ತರುವುದಾಗಿ ಹೇಳಿದ್ದೀರಿ. ಹಾಗಾಗಿ ವಿನಾಯಕ ಚತುರ್ಥಿಯಂದು, ರಾಷ್ಟ್ರೀಯ ಅಸೆಂಬ್ಲಿಯ ಹೊಸ ಕಟ್ಟಡವನ್ನು ಪ್ರವೇಶಿಸುವ ಮಹಿಳೆಯರಿಂದ ನೀವು ಶಾಪಗ್ರಸ್ತರಾಗುತ್ತೀರಿ. ಅದೇ ರೀತಿ ಜನಗಣತಿ ಮತ್ತು ಕ್ಷೇತ್ರಗಳ ಮರು ವಿಂಗಡಣೆಯ ಸಮಯವನ್ನು ನಿರ್ದಿಷ್ಟಪಡಿಸಲಾಗಿಲ್ಲ. ಇದರಿಂದ ಮಹಿಳೆಯರು ಇನ್ನೂ ಹಲವು ವರ್ಷ ಕಾಯಬೇಕಾಗಿದೆ.

ಸುಪ್ರೀಂ ಕೋರ್ಟ್ ಪ್ರಶ್ನೆಗಳಿಗೆ ಉತ್ತರಿಸಲಾಗದೆ

ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸ್ಪಂದಿಸುವ ಸರ್ಕಾರದ ಬಾಧ್ಯತೆಗೆ ಪ್ರತಿಯಾಗಿ ಮಸೂದೆಯನ್ನು ಮಂಡಿಸಲಾಗಿದೆ ಎಂಬುದು ಸ್ಪಷ್ಟವಾಗಿದೆ. ಮಹಿಳೆಯರಿಗೆ ಮೀಸಲಾತಿಗೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರಲ್ಲಿ ಸುಮಾರು ಒಂದು ತಿಂಗಳ ಹಿಂದೆ, ಅಂದರೆ ಆಗಸ್ಟ್ 11 ರಂದು ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ಕೇಳಿದ ಪ್ರಶ್ನೆಯನ್ನು ನಾನು ಉಲ್ಲೇಖಿಸಲು ಬಯಸುತ್ತೇನೆ. "ಇದಕ್ಕೆ ಸಂಬಂಧಿಸಿ ನೀವು (ಸರ್ಕಾರ) ಇನ್ನೂ ಉತ್ತರ ನೀಡಿಲ್ಲ. ಇದಕ್ಕೆ ಉತ್ತರಿಸಲು ಏಕೆ ಸಂಕೋಚಪಡುತ್ತೀರಿ? ನೀವು ಯಾಕೆ ಉತ್ತರಿಸುತ್ತಿಲ್ಲ? ನೀವು ಅದನ್ನು ಕಾರ್ಯಗತಗೊಳಿಸುತ್ತೀರಾ ಅಥವಾ ಇಲ್ಲವೇ? ನಿಮ್ಮ ಆದ್ಯತೆ ಏನು ಎಂದು ಹೇಳಿ. ಏಕೆಂದರೆ ಇದು ನಿರ್ಲಕ್ಷಿಸಲಾಗದ ತುಂಬಾ ಮುಖ್ಯವಾದ ಸಮಸ್ಯೆಯಾಗಿದೆ. ಇದು ಬಹಳ ಮುಖ್ಯ. ಇದು ನಮಗೆಲ್ಲರಿಗೂ ಸಂಬಂಧಿಸಿದ ವಿಷಯವಾಗಿದೆ."

> ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸ್ಪಂದಿಸುವ ಸರ್ಕಾರದ ಬಾಧ್ಯತೆಗೆ ಪ್ರತಿಯಾಗಿ ಮಸೂದೆಯನ್ನು ಮಂಡಿಸಲಾಗಿದೆ ಎಂಬುದು ಸ್ಪಷ್ಟವಾಗಿದೆ. ಮಹಿಳೆಯರಿಗೆ ಮೀಸಲಾತಿಗೆ ಸಂಬಂಧಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರಲ್ಲಿ ಸುಮಾರು ಒಂದು ತಿಂಗಳ ಹಿಂದೆ, ಅಂದರೆ ಆಗಸ್ಟ್ 11 ರಂದು ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ಕೇಳಿದ ಪ್ರಶ್ನೆಯನ್ನು ನಾನು ಉಲ್ಲೇಖಿಸಲು ಬಯಸುತ್ತೇನೆ. "ಇದಕ್ಕೆ ಸಂಬಂಧಿಸಿ ನೀವು (ಸರ್ಕಾರ) ಇನ್ನೂ ಉತ್ತರ ನೀಡಿಲ್ಲ. ಇದಕ್ಕೆ ಉತ್ತರಿಸಲು ಏಕೆ ಸಂಕೋಚಪಡುತ್ತೀರಿ? ನೀವು ಯಾಕೆ ಉತ್ತರಿಸುತ್ತಿಲ್ಲ? ನೀವು ಅದನ್ನು ಕಾರ್ಯಗತಗೊಳಿಸುತ್ತೀರಾ ಅಥವಾ ಇಲ್ಲವೇ? ನಿಮ್ಮ ಆದ್ಯತೆ ಏನು ಎಂದು ಹೇಳಿ. ಏಕೆಂದರೆ ಇದು ನಿರ್ಲಕ್ಷಿಸಲಾಗದ ತುಂಬಾ ಮುಖ್ಯವಾದ ಸಮಸ್ಯೆಯಾಗಿದೆ. ಇದು ಬಹಳ ಮುಖ್ಯ. ಇದು ನಮಗೆಲ್ಲರಿಗೂ ಸಂಬಂಧಿಸಿದ ವಿಷಯವಾಗಿದೆ."

ಈ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ಕೇಳಿದೆ. ಆ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡಲು ಕೊನೆಯ ಅವಕಾಶವಾಗಿ ಈ ಮಸೂದೆಯನ್ನು ಮಂಡಿಸಲಾಗಿದೆ. ಅದೇ ರೀತಿ ನಾಗಾಲ್ಯಾಂಡ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ವೇಳೆ ಮಹಿಳೆಯರಿಗೆ ಮೀಸಲಾತಿ ನೀಡುವ ವಿಚಾರವಾಗಿ ಸುಪ್ರೀಂ ಕೋರ್ಟ್ ಇತ್ತೀಚೆಗೆ ಸರ್ಕಾರಕ್ಕೆ ತನ್ನ ಅಸಮಾಧಾನ ವ್ಯಕ್ತಪಡಿಸಿತ್ತು. ನಂತರ, "ನಿಮ್ಮೊಂದಿಗೆ ಒಪ್ಪದ ಸರ್ಕಾರಿ ಸಂಸ್ಥೆಗಳ ವಿರುದ್ಧ ನೀವು ತೀವ್ರ ನಿಲುವುಗಳನ್ನು ತೆಗೆದುಕೊಳ್ಳುತ್ತೀರಿ. ಆದರೆ ನಿಮ್ಮದೇ ಸರ್ಕಾರ ಸಂವಿಧಾನದ ನಿಯಮಗಳನ್ನು ಉಲ್ಲಂಘಿಸಿ ವರ್ತಿಸುತ್ತಿದೆ. ಅದರ ಬಗ್ಗೆ ನೀವು ಏನನ್ನೂ ಹೇಳಲು ಬಯಸುವುದಿಲ್ಲ" ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಇದಕ್ಕೂ ಸರಕಾರ ಸ್ಪಂದಿಸಿಲ್ಲ.

ನಿಜವಾದ ಇತಿಹಾಸ ಹೇಳಬೇಕು

ಮುಂದೆ, ಈ ಮಸೂದೆಯ ಸಾರಾಂಶವನ್ನು ಪರಿಶೀಲಿಸಿದಾಗ, ಇದು ಈ ಸದನದಲ್ಲಿ ಪರಿಚಯಿಸಲಾದ ಅತ್ಯಂತ ಆಸಕ್ತಿದಾಯಕ ಮಸೂದೆಗಳಲ್ಲಿ ಒಂದಾಗಿದೆ. ರಾಜೀವ್ ಗಾಂಧಿ ಪ್ರಧಾನಿಯಾಗಿದ್ದಾಗಿನಿಂದಲೂ ಹಲವು ಪ್ರಯತ್ನಗಳು ನಡೆದಿವೆ. ಇದಕ್ಕಾಗಿ 2010ರಲ್ಲಿ ರಾಜ್ಯಸಭೆಯಲ್ಲೂ ಮಸೂದೆ ಅಂಗೀಕಾರವಾಗಿತ್ತು. ಈ ಎಲ್ಲಾ ಇತಿಹಾಸವನ್ನು ಇದನ್ನು ತರುವ ಉದ್ದೇಶ ಮತ್ತು ಕಾರಣಗಳಲ್ಲಿ ಹೇಳಬೇಕು. ಇದಕ್ಕೆ ವ್ಯತಿರಿಕ್ತವಾಗಿ, ನಮ್ಮ ಕಾನೂನು ಸಚಿವರು ಈ ವಿಷಯದಲ್ಲಿ ಏನು ಹೇಳಿದ್ದಾರೆ? ಪ್ರಧಾನಿ ಆಗಾಗ ಹೇಳುತ್ತಿರುತ್ತಾರೆ, ಅಮೃತಕಾಲಂ, ವಿಕ್ಷಿತ್ ಭಾರತ್ (ಭಾರತವನ್ನು ಸಶಕ್ತಗೊಳಿಸೋಣ) ಮತ್ತು ನಾರಿ ಶಕ್ತಿ (ಮಹಿಳಾ ಶಕ್ತಿ)ಗಳನ್ನು ಪ್ರಧಾನಿ ಆಗಾಗ್ಗೆ ಉಲ್ಲೇಖಿಸುತ್ತಾರೆ. ನಾನು ಕೇರಳ ರಾಜ್ಯದ ಜನರ ಪ್ರತಿನಿಧಿಯಾಗಿ ನಿಮ್ಮ ಮುಂದೆ ನಿಂತಿದ್ದೇನೆ. ಕೇರಳವು 1990 ರ ದಶಕದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಪರಿಚಯಿಸಿತು – ಸುಮಾರು 32 ವರ್ಷಗಳ ಹಿಂದೆ. ಆ ಸಮಯದಲ್ಲಿ ಸುಮಾರು 30 ಪ್ರತಿಶತದಷ್ಟು ಸೀಟುಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿತ್ತು. 2008 ರಲ್ಲಿ, ನಾವು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು 50% ಕ್ಕೆ ಹೆಚ್ಚಿಸಿದ್ದೇವೆ, ಸಂವಿಧಾನವು ನಿಗದಿಪಡಿಸಿದ 33% ಮಿತಿಯನ್ನು ಮೀರಿದೆ.

ದೇಶದ ಯಾವುದೇ ರಾಜ್ಯಕ್ಕಿಂತ ಮಹಿಳೆಯರಿಗೆ ಹೆಚ್ಚಿನ ಕೋಟಾವನ್ನು ಒದಗಿಸಿದ ದೇಶದ ಮೊದಲ ರಾಜ್ಯ ಎಂದು ಹೇಳಿಕೊಳ್ಳಲು ನನಗೆ ತುಂಬಾ ಹೆಮ್ಮೆ ಇದೆ. ಆದುದರಿಂದ ಈ ಮಸೂದೆಯನ್ನು ತರುವ ಮೂಲಕ ಈ ರಾಷ್ಟ್ರೀಯ ಸಭೆಯು ಇತಿಹಾಸವನ್ನು ಸೃಷ್ಟಿಸುವ ನಿರ್ಧಾರವನ್ನು ತೆಗೆದುಕೊಂಡಿದೆ ಎಂದು ಹೇಳುವುದು ದೇಶದ ಮಹಿಳೆಯರನ್ನು ಮೂರ್ಖರನ್ನಾಗಿ ಮಾಡುವ ರಾಜಕೀಯ ಹಾಸ್ಯವಲ್ಲದೆ ಬೇರೇನೂ ಅಲ್ಲ ಎಂದು ನಾನು ನಿಮಗೆ ತಿಳಿಸಲು ಬಯಸುತ್ತೇನೆ. ಆದ್ದರಿಂದ ಜನಗಣತಿ ಹಾಗೂ ಕ್ಷೇತ್ರ ಪುನರ್ ವಿಂಗಡಣೆಗೆ ಕಾಯದೆ ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಈ ಮಸೂದೆಯನ್ನು ಈ ಸರ್ಕಾರ ಜಾರಿಗೆ ತರಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪರವಾಗಿ ವಿನಂತಿಸುತ್ತೇನೆ.



ಅರಣ್ಯ ಭೂಮಿಯ ವಾಣಿಜ್ಯ ಶೋಷಣೆಯಿಂದ ಪರಿಸರ ಹಾನಿಯ ಹೊರತಾಗಿ, ಅರಣ್ಯ ಅವಲಂಬಿತ ಜನಸಂಖ್ಯೆಯ ಜೀವನೋಪಾಯದ ಪ್ರಶ್ನೆಯೂ ಇದೆ. ಅರಣ್ಯಗಳ ನಾಶವು ಅವರಿಗೆ ಯಾವುದೇ ಪರ್ಯಾಯ ಜೀವನೋಪಾಯದ ಮೂಲವನ್ನು ಒದಗಿಸದೆ, ಅವರ ಪ್ರಸ್ತುತ ಜೀವನೋಪಾಯದ ನಾಶವನ್ನು ಸೂಚಿಸುತ್ತದೆ. ಇದಲ್ಲದೆ ನಮ್ಮಂತಹ ದೇಶದಲ್ಲಿ ಭೂ–ಬಳಕೆಯ ಸಾಮಾಜಿಕೀಕರಣದ ಅಗತ್ಯತೆಯ ಪ್ರಶ್ನೆಯೂ ಇದೆ. ಮೂರು ಕುಖ್ಯಾತ ಕೃಷಿ ಕಾನೂನುಗಳು ಸ್ವಂತ ಬಳಕೆಗಾಗಿ, ಅಥವಾ ಭಾರತೀಯ ಆಹಾರ ನಿಗಮಕ್ಕೆ ಮಾರಾಟದ ಮೂಲಕ ರಾಷ್ಟ್ರೀಯ ಬಳಕೆಗಾಗಿ ಆಹಾರ ಧಾನ್ಯಗಳನ್ನು ಉತ್ಪಾದಿಸುವುದನ್ನು ಬಿಟ್ಟು, ಮುಂದುವರೆದ ದೇಶಗಳಿಗಾಗಿ ವಾಣಿಜ್ಯ ಬೆಳೆಗಳನ್ನು ಉತ್ಪಾದಿಸುವ ಕಡೆಗೆ ಭೂ–ಬಳಕೆಯನ್ನು ಬದಲಾಯಿಸುವ ಉದ್ದೇಶವನ್ನು ಹೊಂದಿದ್ದವು. ಅದು ಈಡೇರಲಿಲ್ಲ. ಈಗ ಅರಣ್ಯ ಸಂರಕ್ಷಣಾ ಕಾಯಿದೆಯ ತಿದ್ದುಪಡಿಯು ಅದನ್ನೇ ಮಾಡಲು ಪ್ರಯತ್ನಿಸುತ್ತಿದೆ: ಭೂ–ಬಳಕೆಯನ್ನು ಅರಣ್ಯದಿಂದ ರಿಯಲ್ ಎಸ್ಟೇಟ್ ಅಥವಾ ಮುಂದುವರೆದ ದೇಶಗಳ ಅಥವಾ ದೇಶೀಯ ಶ್ರೀಮಂತರ ಬೇಡಿಕೆಗಳ ಸರಕುಗಳತ್ತ ತಿರುಗಿಸುವುದು.. .. ..

ಪ್ರೊ. ಪ್ರಭಾತ್ ಪಟ್ನಾಯಕ್

ಶ್ರೀಮಂತರ ಲಾಭಕ್ಕಾಗಿ ಅರಣ್ಯಗಳ ನಾಶ, ಬಡ ಅರಣ್ಯ–ಅವಲಂಬಿತರ ಬದುಕಿನ ನಾಶ

ಕಾರ್ಪೊರೇಟ್ ಹಿತಾಸಕ್ತಿಗಳನ್ನೇ ಸದಾ ಕೋರುವ ಮೋದಿ ಸರ್ಕಾರವು ಒಂದು ಯೋಜನೆಯನ್ನು ಪ್ರಾರಂಭಿಸಿದೆ. ಅದರಲ್ಲಿ ರಿಯಲ್ ಎಸ್ಟೇಟ್ ಡೆವಲಪರ್‌ಗಳು ಮತ್ತು ಇತರ ಕಾರ್ಪೊರೇಟ್‌ಗಳು ದೊಡ್ಡ ಪ್ರಮಾಣದಲ್ಲಿ ಭಾರತದ ಅರಣ್ಯಗಳ ಆವರಣವನ್ನು ಧ್ವಂಸ ಮಾಡಿ ಲಾಭ ಪೇರಿಸಿಕೊಳ್ಳಲು ಅವಕಾಶ ಮಾಡಿಕೊಡಲಾಗುತ್ತಿದೆ. ಸರ್ಕಾರ ಅರಣ್ಯವೆಂದು ಪರಿಗಣಿಸದ ಅರಣ್ಯದಲ್ಲಿನ ಪ್ರದೇಶಗಳನ್ನು ತೆಗೆದುಹಾಕಲು ಅರಣ್ಯ ಸಂರಕ್ಷಣಾ ಕಾಯಿದೆಗೆ ತಿದ್ದುಪಡಿ ತರುತ್ತಿದೆ.

1996 ರಲ್ಲಿ, ಸುಪ್ರೀಂ ಕೋರ್ಟ್ ಒಂದು ಆದೇಶವನ್ನು ನೀಡಿದ್ದು, ಅದರ ಪ್ರಕಾರ ಪ್ರತಿಯೊಂದು ಅರಣ್ಯ ಪ್ರದೇಶವನ್ನು, ಅದು ಯಾರ ಮಾಲೀಕತ್ವದಲ್ಲೇ ಇದ್ದರೂ, ಸರ್ಕಾರದ ದಾಖಲೆಗಳು ಆದನ್ನು ಅರಣ್ಯವೆಂದು ಗುರುತಿಸದಿದ್ದರೂ ಸಹ ರಕ್ಷಿಸಬೇಕು. ಸರ್ಕಾರದ ದಾಖಲೆಗಳು ಶೋಚನೀಯವೆನ್ನುವಷ್ಟು ಅಪೂರ್ಣವಾಗಿವೆ ಮತ್ತು ಯಾವುದು ಅರಣ್ಯ ಎಂಬ ಬಗ್ಗೆ ನಿರೂಪಣೆಗಳು ಸಂಪೂರ್ಣವಾಗಿ ಅಸ್ಪಷ್ಟವಾಗಿವೆ ಹಾಗೂ ರಾಜ್ಯದಿಂದ ರಾಜ್ಯಕ್ಕೆ ಭಿನ್ನವಾಗಿವೆ, ಇವುಗಳಲ್ಲಿ ಏಕರೂಪತೆ ಇಲ್ಲ ಎಂಬ ಸನ್ನಿವೇಶಕ್ಕೆ ಸ್ಪಂದಿಸಿ ಈ ಆದೇಶ ಬಂದಿತ್ತು. ಪ್ರತಿ ರಾಜ್ಯದಲ್ಲೂ ಅಧಿಕೃತ ದಾಖಲೆಗಳಲ್ಲಿ ಅರಣ್ಯ ಎಂದು ಗುರುತಿಸಿರದ ಎಲ್ಲ ಪ್ರದೇಶಗಳನ್ನು ಗುರುತಿಸಲು ಮತ್ತು ಅವಕ್ಕೆ ಅಧಿಕೃತ ಮಾನ್ಯತೆ ನೀಡಿ, ಆಮೂಲಕ ಅವುಗಳನ್ನು ಕಾನೂನಿನಡಿಯಲ್ಲಿ ರಕ್ಷಿಸಬಹುದು ಎಂದು ನ್ಯಾಯಾಲಯ ಹೇಳಿತ್ತು.

ಆದೇಶ ಪಾಲಿಸದಿರುವುದೇ ನೆಪ

2014 ರ ಹೊತ್ತಿಗೆ, ಸುಪ್ರೀಂ ಕೋರ್ಟ್ ಆದೇಶದ ಪೂರ್ಣ ಹದಿನೆಂಟು ವರ್ಷಗಳ ನಂತರವೂ ಪತ್ರಕರ್ತರ ಗುಂಪು ಪಡೆದ ಮಾಹಿತಿಗಳ ಪ್ರಕಾರ ಹರಿಯಾಣ, ಬಿಹಾರ, ಗುಜರಾತ್ ಮತ್ತು ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯ ಸರ್ಕಾರಗಳು ಅರಣ್ಯ ಪ್ರದೇಶಗಳನ್ನು ಗುರುತಿಸಲು ಮತ್ತು ಅವನ್ನು ಸರಕಾರದ ದಾಖಲೆಗಳಲ್ಲಿ ಸೇರಿಸಲು ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ಈ ಸಂಗತಿ ಕೇಂದ್ರ ಸರ್ಕಾರಕ್ಕೆ ಕಾನೂನನ್ನೇ ತಿದ್ದುಪಡಿ ಮಾಡಲು ಮತ್ತು ಸರ್ಕಾರಿ ದಾಖಲೆಗಳು ಗುರುತಿಸದ ಅರಣ್ಯಗಳಿಗೆ ಎಲ್ಲಾ ರಕ್ಷಣೆಯನ್ನು ಹಿಂತೆಗೆದುಕೊಳ್ಳಲು ನೆಪ ಒದಗಿಸಿದೆ.

ಇದು ಸ್ಪಷ್ಟವಾಗಿ ಸುಪ್ರೀಂ ಕೋರ್ಟ್ ಆದೇಶದ ಸಾರವನ್ನು ಉಲ್ಲಂಘಿಸುತ್ತದೆ. ನ್ಯಾಯಾಲಯದ ಆದೇಶವನ್ನು ತ್ವರಿತವಾಗಿ ಅನುಸರಿಸಲು ರಾಜ್ಯಗಳಿಗೆ ಹೇಳಿ, ಆ ಮೂಲಕ ಎಲ್ಲಾ ಅರಣ್ಯಗಳಿಗೆ ಸರಿಯಾದ ರಕ್ಷಣೆ ಇರುವಂತೆ ಮಾಡುವ ಬದಲು, ಅಥವಾ ವರದಿ ಮಾಡದ ರಾಜ್ಯಗಳಲ್ಲಿ ದಾಖಲಾಗದ ಅರಣ್ಯ ಪಟ್ಟಿಗಳ ಪ್ರಮಾಣವನ್ನು ವರದಿ ಮಾಡಲು ತನ್ನದೇ ಆದ ತಜ್ಞರ ಸಮಿತಿಯನ್ನಾದರೂ ನೇಮಿಸುವ ಬದಲು, ನ್ಯಾಯಾಲಯದ ಆದೇಶವನ್ನು ಪಾಲಿಸದಿರುವುದನ್ನೇ ಆ ಆದೇಶದ ಒತ್ತನ್ನೇ ರದ್ದು ಮಾಡಲು ಒಂದು ನೆಪವಾಗಿ ಬಳಸಲಾಗಿದೆ.

ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಅರಣ್ಯ ಸಂರಕ್ಷಣಾ ಕಾಯ್ದೆಗೆ ತಿದ್ದುಪಡಿಯನ್ನು ಖಾಸಗಿ ತೋಟಗಳನ್ನು ಅರಣ್ಯಗಳ ವ್ಯಾಖ್ಯಾನದ ಅಡಿಯಲ್ಲಿ ಸೇರಿಸಲಾಗುತ್ತದೆ ಎಂಬ ಭಯವಿದ್ದುದರಿಂದ ತರಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ. ತೋಟಗಳನ್ನು ಅರಣ್ಯಗಳೆಂದು ಪರಿಗಣಿಸಿದರೆ ಅದು ತೋಟದ ಮಾಲೀಕರಿಗೆ ತಮ್ಮ ಭೂಮಿಯನ್ನು ಅವರು ಬಯಸಿದರೆ, ಇತರ ಉದ್ದೇಶಗಳಿಗೆ ಬಳಸುವ ಸ್ವಾತಂತ್ರ್ಯವನ್ನು ನಿರಾಕರಿಸುತ್ತದೆ. ಮತ್ತು ಈ ಭಯವು ಖಾಸಗಿ ತೋಟಗಳ ಬೆಳವಣಿಗೆಯನ್ನು ತಡೆಯುತ್ತದೆ ಮತ್ತು ಅದರಿಂದಾಗಿ ಹಸಿರು ಹೊದಿಕೆಯ ಬೆಳವಣಿಗೆಯನ್ನೂ ತಡೆಯುತ್ತದೆ. ಈ ಭಯವನ್ನು ಹೋಗಲಾಡಿಸಲು ಮತ್ತು ಹಸಿರು ಹೊದಿಕೆಯನ್ನು ವಿಸ್ತರಿಸಲು ಸರ್ಕಾರವು ಕಾಯಿದೆಗೆ ತಿದ್ದುಪಡಿ ಮಾಡುತ್ತಿದೆಯಂತೆ!

ಸರಕಾರದ ನಿಜ ಆಶಯವೇ ಬೇರೆ

ಕನಿಷ್ಠ ಎರಡು ಕಾರಣಗಳಿಗಾಗಿ ಇದು ಸಂಪೂರ್ಣವಾಗಿ ತೋರಿಕೆಯ ವಾದವಾಗಿದೆ: ಮೊದಲನೆಯದಾಗಿ, ಇದು ತೋಟಗಳ ಬೆಳವಣಿಗೆಯ ಕೊರತೆಗೆ ಒಂದು ಕಾರಣವನ್ನು ಒಡ್ಡುತ್ತದೆ, ಅಂದರೆ ತೋಟ–ಮಾಲೀಕರ ಮನಸ್ಸಿನಲ್ಲಿ ಇರುವ ಭಯದಿಂದಾಗಿ ಈ ಬೆಳವಣಿಗೆಯಾಗಿಲ್ಲ ಎನ್ನುತ್ತದೆ. ಆದರೆ ಇದಕ್ಕೆ ಯಾವುದೇ ಸ್ವತಂತ್ರ ಮತ್ತು ಪ್ರಾಯೋಗಿಕ–ಆಧಾರದ ಪುರಾವೆಗಳಿಲ್ಲ; ಮತ್ತು ಎರಡನೆಯದಾಗಿ, ಅರಣ್ಯಗಳು ಮತ್ತು ನೆಡುತೋಪುಗಳ ನಡುವಿನ ವ್ಯತ್ಯಾಸವನ್ನು ಗುರುತಿಸುವ ಸಮಸ್ಯೆಗೆ ಪರಿಹಾರವಾಗಿ ಹೆಚ್ಚು ನಿಖರವಾದ ವ್ಯಾಖ್ಯಾನಗಳನ್ನು ರೂಪಿಸಬಹುದಾಗಿತ್ತು. ಅದರ ಬದಲು ಅನಗತ್ಯವಾಗಿ ಇಡೀ ಕಾನೂನನ್ನೇ ನಿರುಪಯುಕ್ತಗೊಳಿಸಲು ಅದನ್ನು ಬಳಸಲಾಗಿದೆ. ಸರ್ಕಾರದ ಆಶಯವು ಬೇರೆಯೇ ಆಗಿತ್ತು ಎಂಬುದಿಲ್ಲಿ ಸ್ಪಷ್ಟ: ಅದು ದೇಶದ ಸಮಸ್ತ ಅರಣ್ಯ ಪ್ರದೇಶದ ರಕ್ಷಣೆಯಾಗಿರಲಿಲ್ಲ, ಬದಲಿಗೆ ಅದರ ಬಹಳಷ್ಟು ಭಾಗಗಳನ್ನು ವಾಣಿಜ್ಯ ಬಳಕೆಗೆ ತೆರೆಯುವುದಾಗಿತ್ತು.

ಹೀಗೆ ತೆರೆದುಕೊಡುವುದರಿಂದ ಆಗುವ ಪರಿಸರ ಹಾನಿ ಅಪಾರ. ಅಧಿಕೃತ ದಾಖಲೆಗಳ ಪ್ರಕಾರ ಅರಣ್ಯಗಳ ವ್ಯಾಪ್ತಿ ನಿಖರವಾಗಿ ಎಷ್ಟು ಎಂಬುದನ್ನು ಸರ್ಕಾರವು ಸಾರ್ವಜನಿಕರಿಗೆ ಬಹಿರಂಗಪಡಿಸಿಲ್ಲ, ಇದರಿಂದಾಗಿ ಈಗ ಎಷ್ಟು ಅರಣ್ಯ ಪ್ರದೇಶವನ್ನು ವಾಣಿಜ್ಯ ಬಳಕೆಗೆ ತೆರೆಯಲಾಗುತ್ತದೆ ಎಂದು ಅಂದಾಜು ಮಾಡುವುದು ಕಷ್ಟಕರವಾಗಿದೆ, ಆದರೆ ಇದು ಗಣನೀಯ ಪ್ರಮಾಣದಲ್ಲಿದೆ ಎಂದು ಬಲ್ಲ ಮೂಲಗಳು ಸಂದೇಹ ಪಡುತ್ತಿವೆ. ಉದಾಹರಣೆಗೆ, ಹರಿಯಾಣದೊಳಗೆ ಬರುವ ಅರಾವಳಿ ಪರ್ವತ ಶ್ರೇಣಿಯನ್ನು ಆವರಿಸಿರುವ ಅರಣ್ಯಗಳನ್ನು ಅಧಿಕೃತವಾಗಿ ಅರಣ್ಯಗಳೆಂದು ದಾಖಲಿಸಲಾಗಿಲ್ಲ ಮತ್ತು ಅವು ವಾಣಿಜ್ಯ ಉದ್ದೇಶಗಳಿಗಾಗಿ ತೆರೆದುಕೊಳ್ಳುತ್ತವೆ; ರಾಜಧಾನಿಗೆ ಅವುಗಳ ಸಾಮೀಪ್ಯವು ಅವುಗಳನ್ನು ವಾಣಿಜ್ಯ ಯೋಜನೆಗಳಿಗೆ ಆಕರ್ಷಕ ಸ್ಥಳವನ್ನಾಗಿ ಮಾಡುತ್ತದೆ, ಇದು ರಾಷ್ಟ್ರೀಯ ರಾಜಧಾನಿ ಪ್ರದೇಶದಿಂದ ಬಹಳ ಅಗತ್ಯವಿರುವ ಹಸಿರನ್ನು ತೆಗೆದುಹಾಕುತ್ತದೆ.

ಆದರೆ ಅರಣ್ಯ ಭೂಮಿಯ ಇಂತಹ ವಾಣಿಜ್ಯ ಶೋಷಣೆಯಿಂದ ಉಂಟಾಗುವ ಪರಿಸರ ಹಾನಿಯ ಹೊರತಾಗಿ, ಅರಣ್ಯ ಅವಲಂಬಿತ ಜನಸಂಖ್ಯೆಯ ಜೀವನೋಪಾಯದ ಪ್ರಶ್ನೆಯೂ ಇದೆ. ಅನೇಕ ಜನರು ಜೀವನೋಪಾಯಕ್ಕಾಗಿ ಸಣ್ಣ ಅರಣ್ಯ ಉತ್ಪನ್ನಗಳ ಸಂಗ್ರಹವನ್ನು ಅವಲಂಬಿಸಿದ್ದಾರೆ; ಅರಣ್ಯಗಳ ನಾಶವು ಅವರ ಪ್ರಸ್ತುತ ಜೀವನೋಪಾಯದ ನಾಶವನ್ನು ಸೂಚಿಸುತ್ತದೆ, ಆದರೆ ಅವರಿಗೆ ಸರ್ಕಾರ ಯಾವುದೇ ಪರ್ಯಾಯ ಜೀವನೋಪಾಯದ ಮೂಲವನ್ನು ಒದಗಿಸುವುದಿಲ್ಲ. ಇದು ಅವರು ದಟ್ಟ ದರಿದ್ರರಾಗಲು ಪ್ರಬಲ ಕಾರಣವಾಗುತ್ತದೆ; ಅವರು ಬಂಡವಾಳದ ಆದಿಮ ಸಂಚಯ ಎಂದು ಮಾರ್ಕ್ಸ್ ಕರೆದಿರುವ ಪ್ರಕ್ರಿಯೆಯ ಬಲಿಪಶುಗಳಾಗುತ್ತಾರೆ. ಆದ್ದರಿಂದ ದಲಿತ ಮತ್ತು ಬುಡಕಟ್ಟು ಗುಂಪುಗಳನ್ನು ಪ್ರತಿನಿಧಿಸುವ ಹಲವು ಸಂಘಟನೆಗಳು ಮೋದಿ ಸರ್ಕಾರದ ಅರಣ್ಯ ಸಂರಕ್ಷಣಾ ಕಾಯ್ದೆಯ ತಿದ್ದುಪಡಿಗೆ ತೀವ್ರ ವಿರೋಧ ವ್ಯಕ್ತಪಡಿಸಿರುವುದರಲ್ಲಿ ಆಶ್ಚರ್ಯವೇನಿಲ್ಲ.

ಭೂಬಳಕೆಯ ಸಾಮಾಜೀಕರಣದ ಅಗತ್ಯ

ಆದರೆ ಅರಣ್ಯ ಭೂಮಿಯನ್ನು ವಾಣಿಜ್ಯ ಬಳಕೆಗಾಗಿ ತೆರೆದಿರುವ ನಿರ್ದಿಷ್ಟ ಪ್ರಕರಣವು ನಮ್ಮಂತಹ ದೇಶದಲ್ಲಿ ಭೂ–ಬಳಕೆಯ ಸಾಮಾಜಿಕೀಕರಣದ ಅಗತ್ಯತೆಯ ಒಂದು ಹೆಚ್ಚು ವಿಶಾಲವಾದ ಸಮಸ್ಯೆಯ ಭಾಗವಾಗಿದೆ ಮತ್ತು ಅದನ್ನು ಎತ್ತಿ ತೋರುತ್ತದೆ. ಭೂಮಿ ಒಂದು ವಿರಳ ಸಂಪನ್ಮೂಲವಲ್ಲವಷ್ಟೇ ಅಲ್ಲ. ಅದರ ಪೂರೈಕೆಯು ಕಾಲಾನಂತರದಲ್ಲಿ ಸುಲಭವಾಗಿ ವೃದ್ಧಿಸುವುದಿಲ್ಲ. ಆದ್ದರಿಂದ ಉದ್ಯೋಗ, ಆಹಾರ ಭದ್ರತೆ ಮತ್ತು ಇತರ ಸಾಮಾಜಿಕ ಉದ್ದೇಶಗಳಿಗೆ ಏನಾಗುತ್ತದೆ ಎಂಬುದನ್ನು ನಿರ್ಧರಿಸಲು ಭೂಮಿಯನ್ನು ಹೇಗೆ ಬಳಸಲಾಗುತ್ತದೆ ಎಂಬುದು ಬಹಳ ನಿರ್ಣಾಯಕವಾಗುತ್ತದೆ. ಸಾಮಾಜಿಕ ಉದ್ದೇಶಗಳ ಸಾಧನೆಗೆ ಭೂ–ಬಳಕೆಯ ಮಾದರಿಯು ತುಂಬಾ ಮುಖ್ಯವಾದ ಕಾರಣ, ಈ ಮಾದರಿಯನ್ನು ಮಾರುಕಟ್ಟೆಯ ಮರ್ಜಿಗೆ ಬಿಡಲಾಗುವುದಿಲ್ಲ. ಭೂಮಿ ಸಾಮಾಜಿಕ ಒಡೆತನದಲ್ಲಿ ಇಲ್ಲದಿದ್ದರೂ ಸಹ, ಭೂ–ಬಳಕೆಯನ್ನು ಸಾಮಾಜಿಕವಾಗಿಯೇ ನಿರ್ಧರಿಸಬೇಕು, ಇದೇ ತಾನೇ, ಇತರ ಉದ್ದೇಶಗಳಿಗಾಗಿ ಭತ್ತದ ಭೂಮಿಯನ್ನು ತಿರುಗಿಸುವುದನ್ನು ನಿಯಂತ್ರಿಸುವ ಕೇರಳ ಸರ್ಕಾರದ ಶಾಸನದ ಹಿಂದಿನ ತರ್ಕ.

ಇದರ ಅರ್ಥವೇನೆಂದರೆ, ಭೂಮಿ–ಮಾರಾಟದ ಒಂದು ನಿರ್ದಿಷ್ಟ ವಹಿವಾಟಿನ ಬಗ್ಗೆ ಖರೀದಿದಾರ ಮತ್ತು ಮಾರಾಟಗಾರನು ಒಪ್ಪಂದ ಮಾಡಿಕೊಂಡಿದ್ದರೂ, ಈ ವಹಿವಾಟಿನ ನಂತರ ಆ ಭೂಮಿಯನ್ನು ಪ್ರಸಕ್ತ ಬಳಕೆಗಿಂತ ಭಿನ್ನವಾಗಿ ಬಳಸುವುದಾದರೆ, ಅದಕ್ಕೆ ಸಾಮಾಜಿಕ ಅನುಮೋದನೆ ಇದ್ದರೆ ಮಾತ್ರವೇ ಆ ವಹಿವಾಟಿಗೆ ಅವಕಾಶ ನೀಡಬೇಕು. ಅರಣ್ಯ ಭೂಮಿಯನ್ನು, ಅದು ಯಾರದೇ ಒಡೆತನದಲ್ಲಿ ಇದ್ದರೂ, ಇತರ ಉದ್ದೇಶಗಳಿಗಾಗಿ ಬೇರೆಡೆಗೆ ತಿರುಗಿಸುವುದನ್ನು ಸಂಪೂರ್ಣವಾಗಿ ನಿಷೇಧಿಸುವ 1996 ರ್ಲ ಸುಪ್ರಿಂಕೋರ್ಟ್ ಆದೇಶವನ್ನು ಈ ಸಾಮಾನ್ಯ ತತ್ವದ ಅನ್ವಯದ ನಿರ್ದಿಷ್ಟ ನಿದರ್ಶನವಾಗಿ ನೋಡಬಹುದು. ಈ ನಿರ್ದಿಷ್ಟ ನಿದರ್ಶನದಲ್ಲಿ, ಮುಕ್ತ ಮಾರುಕಟ್ಟೆಯ ಕ್ರಿಯೆಯನ್ನು ಮೊಟಕುಗೊಳಿಸಲು ತಕ್ಷಣದ ಮತ್ತು ಸರ್ವಸಾಮಾನ್ಯ ಒಪ್ಪಂದವಿರುತ್ತದೆ; ಆದರೆ ಮಾರುಕಟ್ಟೆಯ ಕ್ರಿಯೆಯನ್ನು ಮೊಟಕುಗೊಳಿಸುವ ಅಗತ್ಯವು ಹೆಚ್ಚು ವಿಸ್ತಾರವಾಗಿದೆ, ಅದು ಖಾಸಗಿ ಹಿತಾಸಕ್ತಿಗಳನ್ನು ಕಾಪಾಡುವುದು ಸಮಾಜದ ಹಿತಾಸಕ್ತಿಗಳ ರಕ್ಷಣೆಗೆ ಪೋಷಕವಾಗಿರಲೇ ಬೇಕೆಂದೇನಿಲ್ಲ ಎಂಬ ಸರಳ ತತ್ವದಿಂದ ಹೊಮ್ಮುವಂತದ್ದು.

ವಾಸ್ತವವಾಗಿ ಭೂ–ಬಳಕೆಯ ವಿಷಯದಲ್ಲಿ,

ಪುಟ 14 ಕ್ಕೆ



ಶಿವಮೊಗ್ಗ ಗಲಭೆ ಮತಾಂಧರ ಯೋಜಿತ ಕೃತ್ಯ......... ಪುಟ 8 ರಿಂದ

ಕಾರಣವಾಯ್ತು. ಜೊತೆಗೆ ಮೆರವಣಿಗೆಯಲ್ಲಿ ಆವೇಶಭರಿತ ಕೆಲವು ಮುಸ್ಲಿಂ ಯುವಕರು ನಕಲಿ ಕತ್ತಿ ತಲವಾರ್‌ಗಳನ್ನು ಎತ್ತಿ ಹಿಡಿದು ಕುಣಿದರು. ಹಿಂದೂ ಮತಾಂಧರಿಗೆ ಇಷ್ಟೇ ಬೇಕಿತ್ತು. ಅದೆಲ್ಲಿಂದಲೋ ಕಾಣದ ಕೈಗಳಿಂದ ಕಲ್ಲುಗಳು ಬಂದು ಮೆರವಣಿಗೆಯ ಮೇಲೆ ಬಿದ್ದವು. ಉದ್ರಿಕ್ತ ಮನಸ್ಸು ಆವೇಶದಿಂದ ಕುಣಿಯುತ್ತಿದ್ದ ಮುಸ್ಲಿಂ ಯುವಕರು ಕೆರಳಿ ನಿಂತಿದ್ದರು. ಕೆಲವು ಮನೆಗಳ ಮೇಲೆ ಕಲ್ಲುಗಳು ತೂರಿ ಬಂದವು. ಪೊಲೀಸರೂ ಬೇಕಾದಷ್ಟು ಮುಂಜಾಗ್ರತೆ ವಹಿಸಿದ್ದರೂ ಎರಡೂ ಮತಾಂಧ ಪಡೆಗಳ ಅಟ್ಟಹಾಸಕ್ಕೆ ಮೂಕಪ್ರೇಕ್ಷಕರಾದರು.

ಅಷ್ಟೇ ಆಗಿದ್ದರೆ ಪೊಲೀಸರ ಪ್ರಯತ್ನದಿಂದ ಎಲ್ಲವೂ ತಣ್ಣಗಾಗಬಹುದಾಗಿತ್ತು. ಆದರೆ ಹತ್ತಿದ ಕಿಡಿಯನ್ನು ಬೆಂಕಿಯಾಗಿಸಲು 'ಗೋದಿ' ಮಾಧ್ಯಮಗಳು ಬ್ರೇಕಿಂಗ್ ನ್ಯೂಸ್ ಹೆಸರಲ್ಲಿ ದ್ವೇಷದ ಪೆಟ್ರೋಲ್ ಸುರಿಯತೊಡಗಿದರು. ಅದಕ್ಕೆ ಪೂರಕವಾಗಿ ಹಿಂದೂ ಮತಾಂಧರು ಹಳೆಯ ವೀಡಿಯೋಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯ ಬಿಡತೊಡಗಿದರು. ಹತ್ತಿದ ಕೋಮು ಬೆಂಕಿಯನ್ನು ಆರಿಸಲು ಪ್ರಯತ್ನಿಸಬೇಕಾಗಿದ್ದ ಬಿಜೆಪಿ ನಾಯಕರುಗಳು ಮುಸ್ಲಿಂ ಸಮುದಾಯದ ಮೇಲೆ, ಕಾಂಗ್ರೆಸ್ ಸರಕಾರದ ಮೇಲೆ ಮತ್ತಷ್ಟು ಬೆಂಕಿ ಕಾರ ತೊಡಗಿದರು. ಇದರಿಂದಾಗಿ ಕೋಮುದ್ವೇಷದುರಿಯಲ್ಲಿ ಶಾಂತಿ ಕೋಮುಸೌಹಾರ್ದತೆ ಹೊತ್ತಿ ಉರಿಯತೊಡಗಿತು.

ಈ ಕ್ರಿಯೆ ಮತ್ತು ಪ್ರತಿಕ್ರಿಯೆ ಎರಡನ್ನೂ ಪೊಲೀಸರು ತಡೆಯಬಹುದಾಗಿತ್ತು. ಹಿಂದೂ ಮಹಾಸಭಾದವರು ಕೋಮು ಪ್ರಚೋದನೆಗಾಗಿ ಅಳವಡಿಸಿದ್ದ, ಗಣೇಶೋತ್ಸವಕ್ಕೆ ಹೊರತಾದ ಪೋಸ್ಟರ್ ಕಟೌಟ್ ಗಳನ್ನು ಜಿಲ್ಲಾಡಳಿತ ತೆರವುಗೊಳಿಸಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ! ಮುಸ್ಲಿಂ ಸಮುದಾಯದವರ ಮನವೊಲಿಸಿ ಈದ್‌ಗೆ ಸಂಬಂಧವೇ ಇಲ್ಲದ ಕಟೌಟ್ ಮಹಾದ್ವಾರಗಳನ್ನಾದರೂ ಪೋಲೀಸರ ಮೂಲಕ ತೆಗೆಸಿ ಹಾಕಬಹುದಾಗಿತ್ತು, ಅದನ್ನೂ ಮಾಡಲಿಲ್ಲ. ಹೀಗಾಗಿ ಈ ಮತಾಂಧರ ಕ್ರಿಯೆ ಮತ್ತು ಪ್ರತಿಕ್ರಿಯೆ ಸಂಘರ್ಷದಲ್ಲಿ ಕೋಮುಗಲಭೆ ದೊಡ್ಡದಾಯಿತು.

ಹಾಗಾದರೆ ಈ ಅಹಿತಕರ ಕೋಮುಗಲಭೆಗೆ ಕಾರಣ ಯಾರು? ಮುಸ್ಲಿಂ ಸಮುದಾಯವನ್ನು ಪ್ರಚೋದಿಸುವಂತಹ ಕಟೌಟ್ ಬ್ಯಾನರ್ ಹಾಕಿದ ಹಿಂದೂ ಮತಾಂಧರಾ? ಅದಕ್ಕೆ ಪ್ರತಿಯಾಗಿ ಹಿಂದೂ ಮತಾಂಧರನ್ನು ಪ್ರಚೋದಿಸುವಂತೆ ಕಟೌಟ್ ಹಾಕಿ ಈದ್ ಮೆರವಣಿಗೆಯಲ್ಲಿ ಕತ್ತಿ ಝಳಪಿಸಿದ ಮುಸ್ಲಿಂ ಮತಾಂಧರಾ? ಇದಕ್ಕೆ ಪ್ರತಿಯಾಗಿ ಮೆರವಣಿಗೆಯ ಮೇಲೆ ಕಲ್ಲು ತೂರಾಟ ಮಾಡಿದ ಹಾಗೂ ಮಾಡಿಸಿದ ಹಿಂದುತ್ವವಾದಿ ಕೋಮುವಾದಿಗಳಾ? ಈ ಮತಿಹೀನ ಮತಾಂಧರ ಸಮೂಹ ಸನ್ನಿಯನ್ನು ನಿಯಂತ್ರಿಸಲು ವಿಫಲರಾದ ಪೋಲೀಸರಾ? ಮುಸ್ಲಿಂ ಮತಾಂಧ ಯುವಕರ ದಾಂದಲೆಯನ್ನು ಮಾತ್ರ ಪದೇ ಪದೇ ತೋರಿಸಿ, ಸಂತ್ರಸ್ತ ಹಿಂದೂ ಮನೆಯವರ ನೋವಿನ ಮಾತನ್ನು ಮಾತ್ರ ಮತ್ತೆ ಮತ್ತೆ ಏಕಪಕ್ಷೀಯವಾಗಿ ತೋರಿಸಿ ಕೋಮುಗಲಭೆಗೆ ಮತ್ತಷ್ಟು ಪ್ರಚೋದನೆ ಕೊಟ್ಟು ಕೋಮುಸೌಹಾರ್ಧತೆಯನ್ನು ಹಾಳು ಮಾಡಲು ಅಹೋರಾತ್ರಿ ಪ್ರಯತ್ನಿಸಿದ ಕೋಮು ಮಾಧ್ಯಮಗಳಾ? ಎಂದೋ ನಡೆದ ಗಲಭೆಗಳ ವಿಡಿಯೋಗಳನ್ನು ಈ ಗಲಭೆಯದ್ದೆಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ ಹಂಚಿಕೊಂಡ ಕೋಮುಪೀಡಿತ ಐ.ಟಿ. ಸೆಲ್‌ಗಳಾ? ಉದ್ರಿಕ್ತ ಮುಸ್ಲಿಂ ಮತಾಂಧ ಯುವಕರ ದುಷ್ಕೃತ್ಯವನ್ನು ಮಾತ್ರ ಖಂಡಿಸದೇ ಇಡೀ ಸಮುದಾಯವನ್ನೇ ತಾಲಿಬಾನಿಗಳು, ಹಿಂದೂ ವಿರೋಧಿಗಳು ಎಂದು ದೂಷಿಸುವ ಬಿಜೆಪಿಯ ನಾಯಕರುಗಳಾ? ಹಿಂದಿನ ಕಹಿ ಅನುಭವಗಳಿಂದ ಹೀಗೆ ಆಗಬಹುದು ಎಂದು ಮೊದಲೇ ಊಹಿಸಿ ಪೊಲೀಸ್ ಸರ್ಪಗಾವಲನ್ನು ಹಾಕದ ಹಾಲಿ ಸರಕಾರವಾ? ವಿವಾದಾತ್ಮಕ ಕಟೌಟಗಳನ್ನು ಹಾಕಲು ಬಿಟ್ಟ ಜಿಲ್ಲಾಡಳಿತವಾ?

ಈ ಎಲ್ಲರ ಸಂಘಟಿತ ಪ್ರಯತ್ನ ಹಾಗೂ ಜಿಲ್ಲಾಡಳಿತದ ನಿರ್ಲಕ್ಷವೇ ಈ ಉದ್ವಿಗ್ನತೆಗೆ, ಕೋಮು ಹಿಂಸೆಗೆ, ಕೋಮುಪ್ರಚೋದನೆಗೆ ಬಹುಮುಖ್ಯ ಕಾರಣಗಳಾಗಿವೆ. ಅಷ್ಟೇ ಅಲ್ಲ ಈ ಗಲಭೆಯ ಹಿಂದೆ ಕೋಮುವಾದಿಗಳ ಪ್ರೀಪ್ಲಾನ್ ಷಡ್ಯಂತ್ರವೂ ಅಡಗಿದೆ.

ಇದೇನೂ ಮೊದಲನೆಯ ಕೋಮುಗಲಭೆ ಏನಲ್ಲ. ಇನ್ನೂ ಬೇಕಾದಷ್ಟು ನಡೆಯುವುದು ಬಾಕಿ ಇರಬಹುದು! ಮುಂದೆ ಲೋಕಸಭಾ ಚುನಾವಣೆ ಇದೆ. ಬಿಜೆಪಿ ಪ್ರಭಾವ ರಾಜ್ಯದಲ್ಲಿ ದುರ್ಬಲವಾಗಿದೆ. ಮೋದಿ ವರ್ಚಸ್ಸು ಮಂಕಾಗಿದೆ. ಇಂತಹ ಸಮಯದಲ್ಲಿ ಸಂಘ ಪರಿವಾರಕ್ಕೆ ಹಿಂದೂ ಮುಸ್ಲಿಂ ಕೋಮುಗಲಭೆ ಹುಟ್ಟಿಸುವುದನ್ನು ಬಿಟ್ಟು ಬೇರೆ ದಾರಿ ಕಾಣದಾಗಿದೆ. ಈ ಹಿಂದೆ ಮಾಡಿದಂತೆ ಈಗಲೂ ಹಿಂದೂ ಭಾವನೆಗಳನ್ನು ಕೆರಳಿಸಿ, ಅನ್ಯ ಧರ್ಮದ್ವೇಷವನ್ನು ಪ್ರಚೋದಿಸಿ ಹಿಂದೂಗಳ ಮತಗಳನ್ನು ಧ್ರುವೀಕರಿಸಬೇಕಿದೆ. ಮುಸ್ಲಿಮರು ತಾಲಿಬಾನಿಗಳು, ಭಯೋತ್ಪಾದಕರು, ಹಿಂಸಾವಾದಿಗಳು, ಆತಂಕವಾದಿಗಳೂ ಆಗಿದ್ದು ಅವರನ್ನು ನಿಯಂತ್ರಿಸಲು ಬಿಜೆಪಿಯೊಂದೇ ಸಮರ್ಥ ಪಕ್ಷ ಎಂದು ಹಿಂದೂ ಸಮುದಾಯಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ.

ಅದಕ್ಕಾಗಿ ಹೀಗೆ ಅವಕಾಶ ಸಿಕ್ಕಾಗ, ಸಿಗದೇ ಹೋದರೆ ಅವಕಾಶ ಹುಟ್ಟು ಹಾಕಿ ಕೋಮುಗಲಭೆಗಳನ್ನು ಸೃಷ್ಟಿಸುವ ಕೆಲಸವನ್ನು ಕೋಮುವಾದಿ ಪಡೆ ಮುಂದುವರೆಸುತ್ತದೆ. ಅದಕ್ಕೆ ಸುಳ್ಳುಗಳನ್ನು ಸೃಷ್ಟಿಸಲು ಸಾಮಾಜಿಕ ಜಾಲತಾಣಗಳನ್ನು ಹಾಗೂ ಸುಳ್ಳುಗಳನ್ನು ಸಮರ್ಥಿಸಿಕೊಳ್ಳಲು 'ಗೋದಿ' ಮಾಧ್ಯಮಗಳನ್ನು ಅವ್ಯಾಹತವಾಗಿ ಬಳಸಿಕೊಳ್ಳುತ್ತಿದೆ.

ಸನಾತನವಾದಿಗಳ ಈ ಪುರಾತನ ತಂತ್ರಗಳನ್ನು ಗೆಲುವಿನ ನಶೆ, ಆಂತರಿಕ ಮತಬೇಧದಲ್ಲಿ ಮೈಮರೆತಿರುವ ಕಾಂಗ್ರೆಸ್ ಪಕ್ಷ ಅರ್ಥಮಾಡಿಕೊಳ್ಳಬೇಕಿದೆ. ಸುಳ್ಳು ಸುದ್ದಿ ಹಬ್ಬಿಸುವವರನ್ನು ಹುಡುಕಿ ಹುಡುಕಿ ಜೈಲಿಗಟ್ಟಬೇಕಿದೆ. ಕೋಮುಪ್ರಚೋದನಾತ್ಮಕ ಹೇಳಿಕೆ ಕೊಡುತ್ತಿರುವ ನಾಯಕರ ಮೇಲೆ ಕೇಸ್ ಹಾಕಲೇಬೇಕಿದೆ. ಕೋಮುಗಲಭೆಗೆ ಕಾರಣರಾದವರು ಯಾವುದೇ ಸಮುದಾಯದವರಾಗಿದ್ದರೂ ಬಂಧಿಸಿ ಕಾರಾಗೃಹಕ್ಕೆ ಕಳುಹಿಸಬೇಕಿದೆ. ಇನ್ನು ಮುಂದೆ ಗುಂಪು ಸೇರಿ ಆಚರಿಸುವ ಯಾವುದೇ ಸಮುದಾಯದ ಹಬ್ಬ ಮೆರವಣಿಗೆಗಳ ಸಮಯದಲ್ಲಿ ತೀವ್ರ ಕಟ್ಟೆಚ್ಚರ ವಹಿಸಬೇಕಿದೆ. ಕೋಮುವ್ಯಾಧಿಗಳ ಮಿತ್ಯಾರೋಪಗಳಿಗೆ ಸಾಕ್ಷಿ ಸಮೇತ ಉತ್ತರಗಳನ್ನು ಕೊಡಬೇಕಿದೆ. ಇದು ಆಳುವ ಪಕ್ಷದ ಜವಾಬ್ದಾರಿಯೂ ಆಗಿದೆ. ಕೋಮುವಾದಿಗಳ ಷಡ್ಯಂತ್ರವನ್ನು ಸೋಲಿಸಲು ಅತ್ಯಂತ ಅಗತ್ಯವಾಗಿದೆ.

ಇನ್ನು ಮುಸ್ಲಿಂ ಸಮುದಾಯದ ಹಿರಿಯರು, ರಾಜಕೀಯ ನಾಯಕರುಗಳು, ಧಾರ್ಮಿಕ ಮುಖಂಡರುಗಳು ತಮ್ಮ ಸಮುದಾಯದ ಮತಾಂಧರನ್ನು ನಿಯಂತ್ರಿಸಬೇಕಿದೆ. ಉದ್ರಿಕ್ತ ಯುವಕರಿಗೆ ಬುದ್ದಿ ಹೇಳಿ ಗಲಭೆಗಳಿಂದಾಗುವ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡಬೇಕಿದೆ. ಪ್ರಚೋದನೆಗೆ ಒಳಗಾಗಿ ಯುವಜನತೆ ವಿವೇಕವನ್ನು ಕಳೆದುಕೊಳ್ಳದಂತೆ ಎಚ್ಚರ ವಹಿಸಬೇಕಿದೆ. ಹಿಂದುತ್ವವಾದಿ ಮತಾಂಧರ ಪ್ರಚೋದನೆಗೆ ಹಿಂಸಾತ್ಮಕ ಪ್ರತಿಕ್ರಿಯೆ ಕೊಟ್ಟು ಪ್ರತೀಕಾರ ತೀರಿಸಿಕೊಳ್ಳಲು ಬಯಸಿದಷ್ಟೂ ಮುಸ್ಲಿಂ ಸಮುದಾಯವೇ ಹೆಚ್ಚು ತೊಂದರೆಗೊಳಗಾಗುವುದು ನಿಶ್ಚಿತ. ಮತ್ತು ಷಡ್ಯಂತ್ರ ರೂಪಿಸಿದ ಶಕ್ತಿಗಳ ಕೈ ಮೇಲಾಗಲು ಅವಕಾಶ ಕಲ್ಪಿಸಿದಂತೆ. ಮತೀಯ ಶಕ್ತಿಗಳ ಮತಾಂಧತೆಯನ್ನು ವಿವೇಕ, ತಾಳ್ಮೆ, ಐಕ್ಯತೆ ಕಾಪಾಡುವ ಹೊಣೆಗಾರಿಕೆಯಿಂದ ಎದುರಿಸುವುದೇ ಸೂಕ್ತ. ಪ್ರತಿಕ್ರಿಯಿಸಲೇ ಬೇಕೆಂದಿದ್ದರೆ ಅದು ಕಾನೂನಾತ್ಮಕವಾಗಿರಬೇಕು. ಎಲ್ಲಾ ಮತದರ್ಮೀಯರನ್ನು ಒಳಗೊಂಡು ಮತನಿರಪೇಕ್ಷಿತ ಪ್ರತಿಕ್ರಿಯೆ, ಪ್ರತಿರೋಧವಾಗ ಬೇಕು. ಸರಕಾರ, ಆಡಳಿತ ಸರಿಯಾಗಿ ವರ್ತಿಸಲು ರಾಜಕೀಯ ಒತ್ತಡ ಸೃಷ್ಟಿಸಬೇಕು. ಇದು ಈ ದುರಿತ ಕಾಲದ ಅನಿವಾರ್ಯತೆಯಾಗಿದೆ. ಮತಿಗೆಟ್ಟ ಮತಾಂಧರನ್ನು ನಿಯಂತ್ರಿಸುವ ತಂತ್ರವಾಗಿದೆ. ರಕ್ತಕ್ಕೆ ರಕ್ತ, ಸೇಡಿಗೆ ಸೇಡು ಎನ್ನುವ ದ್ವೇಷ ಯಾವತ್ತೂ ಸಮುದಾಯಗಳ ನೆಮ್ಮದಿ ಹಾಳುಮಾಡಿ ಸಮಾಜದ ಶಾಂತಿಯನ್ನು ಕದಡುತ್ತದೆ. ಕೋಮುಸೌಹಾರ್ದತೆ ಬಯಸುವ ಎಲ್ಲಾ ಸಮುದಾಯದವರೂ 'ದ್ವೇಷದ ಬಜಾರಿನಲ್ಲಿ ಪ್ರೀತಿಯ ಅಂಗಡಿ ತೆರೆಯಬೇಕಿದೆ'. 'ಸರ್ವ ಜನಾಂಗದ ಶಾಂತಿಯ ತೋಟ'ದ ಕನಸು ನನಸಾಗಬೇಕಿದೆ.

ವರದಿ: ಶಶಿಕಾಂತ ಯಡಹಳ್ಳಿ,
ನವೀನ್ ಸೂರಿಂಜೆ ಅವರ ವರದಿಗಳ ಆಧಾರ

ಗುತ್ತಿಗೆ ನೀಡಿದ ಸಚಿವೆ ಪಂಕಜಾ ಮುಂಡೆ ಅವರಿಗೆ ಕ್ಲೀನ್ ಚಿಟ್!!......... ಪುಟ 11 ರಿಂದ

ದಾಖಲಾಗಿಲ್ಲ? ಪೇಢಾಗಳು ಮತ್ತು ಬರ್ಫಿಗಳಿಗೆ ಸಂಬಂಧಿಸಿದ ಕಲಬೆರಕೆ ವಿಷಯಗಳಲ್ಲಿ ಸಣ್ಣ ಪ್ರಕರಣಗಳನ್ನು ದಾಖಲಿಸುವಲ್ಲಿ ಅಧಿಕಾರಿಗಳು ನಿರತರಾಗಿದ್ದಾರೆ, ದೊಡ್ಡ ಪ್ರಮಾಣದ ಮಕ್ಕಳು ಬಳಲುತ್ತಿರುವ ಈ ಪ್ರಕರಣಗಳಲ್ಲಿ ಏಕೆ ಮಾಡಬಾರದು? ಎಂದು ನ್ಯಾಯಾಲಯ ಪ್ರಶ್ನಿಸಿತು.

ಅಂದು ನಡೆದ ವಿಚಾರಣೆ ವೇಳೆ ಅರ್ಜಿದಾರರೊಬ್ಬರ ಪರ ವಾದ ಮಂಡಿಸಿದ ವಕೀಲರು, "ಇದರಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸರ್ಕಾರ ಭರವಸೆ ನೀಡಿತ್ತು. ಉತ್ಪನ್ನಗಳ ಮಾದರಿಗಳನ್ನು ಪರೀಕ್ಷೆಗೆ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ ಮತ್ತು ಚಿಕ್ಕಿಯಲ್ಲಿ ಮರಳು ಕಂಡುಬಂದಿದೆ. ಇದು ಪಿಐಎಲ್ (ಸಾರ್ವಜನಿಕ ಹಿತಾಶಕ್ತಿ ಅರ್ಜಿ) ಪ್ರಾರಂಭಿಸಲು ಮೂಲ ಕಾರಣ. ಆದರೆ, ಇದುವರೆಗೆ ಯಾವುದೇ ಪ್ರಕರಣ ದಾಖಲಾಗಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದರು."

'ಚಿಕ್ಕಿ ಹಗರಣ' ದಲ್ಲಿ, ಕಳಪೆ ಚಿಕ್ಕಿ ಪೂರೈಕೆಯಾಗಿದ್ದು ನಿಜ. ಚಿಕ್ಕಿಯಲ್ಲಿ ಮಣ್ಣು ಬೆರಕೆಯಾಗಿದ್ದೂ ನಿಜ. ಒಪ್ಪಂದದಲ್ಲಿ ದುಪ್ಪಟ್ಟು ದರ ನಿಗದಿ ಮಾಡಿದ್ದು ನಿಜ. ನಿಯಮಗಳನ್ನು ಉಲ್ಲಂಘಿಸಿ ಒಪ್ಪಂದ ಮಾಡಿಕೊಂಡಿದ್ದು ನಿಜ. ಇವೆಲ್ಲವೂ ಚಿಕ್ಕಿ ಸರಭರಾಜು ಒಪ್ಪಂದ ಒಂದು ಹಗರಣ ಎಂಬುದನ್ನು ತೋರಿಸುತ್ತವೆ. ಮಕ್ಕಳು ಈ ಕಳಪೆ ತಿಂಡಿ ತಿನ್ನಲು ಕಾರಣವಾದ ಬಿಜೆಪಿ ನಾಯಕಿ ಪಂಕಜಾ ಅವರಿಗೆ ಬಿಜೆಪಿ ಸರ್ಕಾರದ ಆಡಳಿತದಲ್ಲಿನ ಎಸಿಬಿ ಕ್ಲೀನ್ ಚಿಟ್ ನೀಡಿದೆ. ಗುತ್ತಿಗೆದಾರರ ಮೇಲೂ ಕ್ರಮ ತೆಗೆದುಕೊಳ್ಳುತ್ತಿಲ್ಲ.

ಬಿಜೆಪಿಯವರು ತಮ್ಮದೇ ಪಕ್ಷದ ನಾಯಕಿಯೊಬ್ಬರ ಭ್ರಷ್ಟಾಚಾರವನ್ನು ಮುಚ್ಚಿಹಾಕಲು ಏನೆಲ್ಲಾ ಮಾಡಿದರು ಎಂಬುದನ್ನು ನೋಡಿದಾಗ, 'ನಾ ಖಾವುಂಗಾ, ನಾ ಖಾನೆ ದುಂಗಾ'ಎಂದು ಹೇಳಿ 9 ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದ ನರೇಂದ್ರ ಮೋದಿಯವರ ಅಬ್ಬರದ ಮಾತುಗಳನ್ನು ಒಮ್ಮೆ ನೆನೆಪಿಸಿಕೊಳ್ಳಬೇಕು.

ಶ್ರೀಮಂತರ ಲಾಭಕ್ಕಾಗಿ ಅರಣ್ಯಗಳ ನಾಶ, ಬಡ ಅರಣ್ಯ-ಅವಲಂಬಿತರ..... ಪುಟ 13 ರಿಂದ

ಮತ್ತು ಸಮಕಾಲೀನ ಭಾರತದ ಸಂದರ್ಭದಲ್ಲಿ, ಖಾಸಗಿ ಹಿತಾಸಕ್ತಿಯ ರಕ್ಷಣೆ ಮತ್ತು ಸಾಮಾಜಿಕ ಹಿತಾಸಕ್ತಿಯ ರಕ್ಷಣೆ ಸಾಮಾನ್ಯವಾಗಿ ಪರಸ್ಪರ ವಿರುದ್ಧವಾಗಿರುತ್ತದೆ. ಮಾರುಕಟ್ಟೆಯ ಸೆಳೆತ ಭೂಮಿಯನ್ನು ದುಡಿಯುವ ಬಡವರಿಗೆ ಸೇರಿದ ಅನೇಕರ ಅಗತ್ಯಗಳನ್ನು ಪೂರೈಸುವ ಬಳಕೆಯಿಂದ ಕೆಲವರ ಅಗತ್ಯಗಳನ್ನು ಪೂರೈಸುವ ರಿಯಲ್ ಎಸ್ಟೇಟ್‌ಗಳು ಮತ್ತು ಗಾಲ್ಫ್ ಕೋರ್ಸ್‌ಗಳತ್ತ ತಿರುಗಿಸುತ್ತದೆ.

ಇಲ್ಲಿ ನಾವು ನಮ್ಮಂತಹ ಒಂದು ಸಮಾಜದಲ್ಲಿ ಭೂ-ಬಳಕೆಯನ್ನು ಸಾಮಾಜಿಕವಾಗಿ ನಿರ್ಣಯಿಸಲು ನಿಖರವಾಗಿ ಎಂತಹ ವ್ಯವಸ್ಥೆಯನ್ನು ರಚಿಸಬೇಕು ಎಂಬುದನ್ನು ಇಲ್ಲಿ ಚರ್ಚಿಸುವ ಅಗತ್ಯವಿಲ್ಲ. ಸಹಜವಾಗಿ ಕಾಣುವ ಒಂದು ವ್ಯವಸ್ಥೆಯೆಂದರೆ, ಮಾರುಕಟ್ಟೆಗೆ ಬರುವ ಯಾವುದೇ ಭೂಮಿಯನ್ನು ಖರೀದಿಸುವ ಮೊದಲ ಹಕ್ಕನ್ನು ಸರ್ಕಾರಿ ಸ್ವಾಮ್ಯದ ನಿಗಮವು ಹೊಂದಿರುವುದು; ಅದು ಅದನ್ನು "ಮಂಜೂರಾದ" ಉದ್ದೇಶಗಳಿಗಾಗಿ ಮಾತ್ರ ಬಳಸುವ ಖರೀದಿದಾರರಿಗೆ ಭೂಮಿಯನ್ನು ಮಾರಾಟ ಮಾಡಬಹುದು; ಅಥವಾ, ಪರ್ಯಾಯವಾಗಿ, ಅದು "ಅನುಮೋದಿತ ಉದ್ದೇಶಗಳಿಗಾಗಿ" ಬಳಕೆಗಾಗಿ ಮಾತ್ರ ಎಂದಿದ್ದರೆ, ಅದನ್ನು ಮೀರಿ ಹೋಗುವವರು ದಂಡ ತೆರಬೇಕಾಗುತ್ತದೆ ಎಂಬ ನಿಬಂಧನೆಯೊಂದಿಗೆ ಮಾರಾಟಕ್ಕೆ ಮಾತ್ರ ಅನುಮತಿ ನೀಡಬಹುದು.

ಮಾರುಕಟ್ಟೆ-ನಿರ್ದೇಶಿತ ದಿಕ್ಕಿನತ್ತ ಮತ್ತೊಂದು ಪ್ರಯತ್ನ

ಆದರೆ ಮೋದಿ ಸರ್ಕಾರದ ಸಂಪೂರ್ಣ ಒತ್ತು ತದ್ವಿರುದ್ಧ ದಿಕ್ಕಿನಲ್ಲಿದೆ, ಅಂದರೆ ಮಾರುಕಟ್ಟೆ ನಿರ್ದೇಶಿತ ದಿಕ್ಕಿನಲ್ಲಿ ಭೂ-ಬಳಕೆಯ ವಿಧಾನವನ್ನು ಬದಲಿಸಬೇಕು ಎಂಬುದರತ್ತ ಇದೆ. ಬಂಡವಾಳದ ಆದಿಮ ಸಂಚಯವೆಂದರೆ ಇದೇ ಆಗಿದೆ: ಇದರರ್ಥ ಕೇವಲ ಒಡೆತನದ ಕೇಂದ್ರೀಕರಣವಷ್ಟೇ ಅಲ್ಲ, ಹಲವರಲ್ಲಿ ಚದುರಿಹೋಗಿರುವ ಸಣ್ಣ ಪ್ರಮಾಣದ ಮಾಲೀಕತ್ವದಿಂದ ಅಥವಾ ಸಾಮುದಾಯಿಕ ಮಾಲೀಕತ್ವದಿಂದ, ಕೆಲವೇ ಜನಗಳ ದೊಡ್ಡ ಪ್ರಮಾಣದ ಖಾಸಗಿ ಮಾಲೀಕತ್ವ ಸಾಗುವುದು ಎಂದೂ ಆಗುತ್ತದೆ. ಮಾಲೀಕತ್ವದಲ್ಲಿನ ಈ ➚

ನಿರ್ದಿಷ್ಟ ಆರೋಪಗಳಿಲ್ಲದೆ ದಾಳಿ!!

ವಿಮರ್ಶಾತ್ಮಕ ಪತ್ರಿಕೋದ್ಯಮವನ್ನು ಶೂನ್ಯ ಸಹಿಷ್ಣುತೆ ಹೊಂದಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಆನ್‌ಲೈನ್ ಸುದ್ದಿ ವೆಬ್‌ಸೈಟ್ 'ನ್ಯೂಸ್ ಕ್ಲಿಕ್' ಮೇಲೆ ತೀವ್ರ ಪ್ರತೀಕಾರದ ದಾಳಿಯನ್ನು ನಡೆಸಿತು. ಅದನ್ನು ಕ್ರೂರ ಕಿರುಕುಳಕ್ಕೆ ಒಳಪಡಿಸಿತು. ಆದರೆ, ಇಲ್ಲಿಯವರೆಗೆ, 'ನ್ಯೂಸ್ ಕ್ಲಿಕ್' ವಿರುದ್ಧ ಯಾವುದೇ ನಿರ್ದಿಷ್ಟ ಆರೋಪಗಳನ್ನು ಸರ್ಕಾರ ಬಹಿರಂಗಪಡಿಸಿಲ್ಲ. ವೆಬ್‌ಸೈಟ್ ಪ್ರಧಾನ ಸಂಪಾದಕ ಪ್ರಬೀರ್ ಪುರ್ಕಯಾಸ್ಥಾನು, ಇತರ ಕಾನೂನುಗಳ ಜೊತೆಗೆ ಭಯಾನಕ 'UPA' (ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ– UAPA) ಯ ಕಠಿಣ ನಿಬಂಧನೆಗಳ ಅಡಿಯಲ್ಲಿ ಬಂಧಿಸಲು ಕಾರಣವೇನೆಂದು ಹೇಳಲು ವಿಫಲವಾಗಿದೆ. ಈ ವೆಬ್‌ಸೈಟ್ ಅನ್ನು ಚೀನಾಕ್ಕೆ ಸಂಬಂಧಿಸಿದ ಭಯೋತ್ಪಾದಕ ಪ್ರಕರಣದಲ್ಲಿ ತನಿಖೆ ಮಾಡಲಾಗಿದೆಯಂತೆ. ಆದಾಗ್ಯೂ, ಚೀನಾ ಪರ ಪ್ರಚಾರ ಅಥವಾ ಭಯೋತ್ಪಾದಕ ಸಂಬಂಧಗಳನ್ನು ಸೂಚಿಸುವ ಯಾವುದೇ ಲೇಖನ ಅಥವಾ ಮಾಹಿತಿ ಇನ್ನೂ ಬೆಳಕಿಗೆ ಬಂದಿಲ್ಲ. ಅಲ್ಲದೆ, ಇದುವರೆಗೆ ಎಫ್‌ಐಆರ್ ಪ್ರತಿಯನ್ನು ನೀಡಿಲ್ಲ ಎಂದು ವೆಬ್‌ಸೈಟ್‌ನ ಮಾಲೀಕರು ಹೇಳುತ್ತಾರೆ. ತಮ್ಮ ವಿರುದ್ಧ ಹೊರಿಸಲಾದ ಅಪರಾಧಗಳ ವಿವರಗಳನ್ನು ತಿಳಿಸಿಲ್ಲ ಎಂದೂ ಅವರು ಹೇಳಿದ್ದಾರೆ. ಇದಲ್ಲದೆ, 'ನ್ಯೂಸ್ ಕ್ಲಿಕ್'ಗೆ ಸಂಬಂಧಿಸಿದ ಉದ್ಯೋಗಿಗಳು ಮತ್ತು ಕೊಡುಗೆದಾರರ ನಿವಾಸಗಳ ಮೇಲೂ ದಾಳಿ ನಡೆಸಲಾಗಿದೆ. ಹಲವರಿಂದ ಮೊಬೈಲ್, ಲ್ಯಾಪ್‌ಟಾಪ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ವೆಬ್‌ಸೈಟ್ ಮೇಲೆ ತೆಗೆದುಕೊಂಡ ಇಂತಹ ಕ್ರಮಗಳು ಹೊಸದೇನಲ್ಲ. 2021 ರಿಂದ, ಜಾರಿ ನಿರ್ದೇಶನಾಲಯ (ಇಡಿ), ಆದಾಯ ತೆರಿಗೆ ಇಲಾಖೆಗಳಿಂದ ದಾಳಿ ಮತ್ತು ಪರಿಶೀಲನೆಯನ್ನು 'ನ್ಯೂಸ್ ಕ್ಲಿಕ್' ಎದುರಿಸುತ್ತಲೇ ಇದೆ. ಎಲೆಕ್ಟ್ರಾನಿಕ್ ಉಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಆದರೆ ಇದುವರೆಗೆ ಒಂದೇ ಒಂದು ಚಾರ್ಜ್ ಶೀಟ್ ಸಲ್ಲಿಕೆಯಾಗಿಲ್ಲ. 'ನ್ಯೂಸ್ ಕ್ಲಿಕ್' ಪರವಾಗಿ ಪ್ರಾಥಮಿಕ ಸಾಕ್ಷಿ ಇರುವ ಪ್ರಕರಣದಲ್ಲಿ ದೆಹಲಿ ಹೈಕೋರ್ಟ್ ಪುರ್ಕಾಯಸ್ಥನನ್ನು ಬಂಧನದಿಂದ ರಕ್ಷಿಸಿದೆ. ಇದಲ್ಲದೆ, 'ನ್ಯೂಸ್ ಕ್ಲಿಕ್' ಕಂಪನಿಯ ವಿರುದ್ಧ ಯಾವುದೇ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳದಂತೆ ಇಡಿಗೆ ಆದೇಶಿಸಲಾಗಿದೆ. ಈ ಸಂಬಂಧ ಆದಾಯ ತೆರಿಗೆ ಇಲಾಖೆ ಸಲ್ಲಿಸಿದ್ದ ದೂರನ್ನೂ ಕೆಳ ನ್ಯಾಯಾಲಯ ವಜಾಗೊಳಿಸಿದೆ.

'ನ್ಯೂಯಾರ್ಕ್ ಟೈಮ್ಸ್' ನಲ್ಲಿನ ಲೇಖನವನ್ನು ಆಧರಿಸಿ ಪ್ರಸ್ತುತ ಸರಣಿ ದಾಳಿಗಳು ಮತ್ತು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 'ನ್ಯೂಸ್ ಕ್ಲಿಕ್'ನಲ್ಲಿ ಒಬ್ಬ ಹೂಡಿಕೆದಾರರ ಕ್ರಮಗಳು ಮತ್ತು ಉದ್ದೇಶಗಳನ್ನು ಆ ಲೇಖನವು ಪ್ರಶ್ನಿಸಿದೆ. ಈ ವ್ಯಕ್ತಿಗೆ ಚೀನಾ ಸರ್ಕಾರದೊಂದಿಗೆ ನಿಕಟ ಸಂಬಂಧಗಳು ಇವೆ ಎಂದು ಅದರಲ್ಲಿ ಆರೋಪಿಸಲಾಗಿದೆ. ಆದರೆ, ಭಾರತದ ವಿರುದ್ಧವಾಗಿ ಅಕ್ರಮ ಸುದ್ದಿ ಪ್ರಚಾರವನ್ನು ಮಾಡಿರುವುದಕ್ಕೆ ವೆಬ್‌ಸೈಟ್ ನ ಯಾವುದೇ ನಿರ್ದಿಷ್ಟ ಲೇಖನವನ್ನು ಉಲ್ಲೇಖಿಸಿಲ್ಲ. ಕೇವಲ 'ನ್ಯೂಯಾರ್ಕ್ ಟೈಮ್ಸ್' ಸುದ್ದಿಯನ್ನು ಆಧರಿಸಿ ಸರ್ಕಾರದ ಪ್ರತಿನಿಧಿಗಳು ಈ ಸುಳ್ಳು ಮಾಹಿತಿಯನ್ನು ಹರಡುತ್ತಿದ್ದಾರೆ, ಒಂದು ವಿಧದಲ್ಲಿ ಅವಮಾನಿಸಲು ಕೆಳ ಮಟ್ಟಕ್ಕೆ ಇಳಿಯುವ ಕೆಲಸ ಮಾಡಿದರು.

ಅಕ್ಟೋಬರ್ 3ರ ಈ ಕ್ರಮಗಳು ಮಾಧ್ಯಮವನ್ನು ಬಲಿಪಶು ಮಾಡುವ ಮತ್ತು ವಿಮರ್ಶಾತ್ಮಕ ಪತ್ರಿಕೋದ್ಯಮವನ್ನು ಹತ್ತಿಕ್ಕುವ ಗುರಿಯನ್ನು ಹೊಂದಿರುವಂತೆ ತೋರುತ್ತಿದೆ. ಸಂಸ್ಥೆಗೆ ಸಿಕ್ಕಿರುವ ಧನಸಹಾಯದ ಅನುಮಾನದ ಕಾರಣಕ್ಕಾಗಿ ಯಾವುದೇ ಸರ್ಕಾರವು ಪತ್ರಕರ್ತರನ್ನು ಇಷ್ಟು ಕ್ರೂರವಾಗಿ ಗುರಿಯಾಗಿಸಬಾರದು ಮತ್ತು ಮಾಡಬಾರದು. ಹೀಗಾಗಿ ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಬಾರದು. 1975 ರಲ್ಲಿ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ವಂಚನೆಯ ಆರೋಪದ ಮೇಲೆ ಪುರಕಾಯಸ್ಥನನ್ನು ಕಠಿಣ ಆಂತರಿಕ ಭದ್ರತಾ ಕಾಯಿದೆಯಡಿ ಬಂಧಿಸಲಾಯಿತು. ಆಗ ಅವರು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ನಾಯಕರಾಗಿದ್ದರು. ಇಂದು, ಅಂತಹ ಯಾವುದೇ ತುರ್ತು ಪರಿಸ್ಥಿತಿಯನ್ನು ಘೋಷಿಸದಿದ್ದರೂ ಇತಿಹಾಸವು ಪುನರಾವರ್ತನೆಯಾಗುತ್ತಿದೆ.

–'ದಿ ಹಿಂದೂ' ಸಂಪಾದಕೀಯ



ಸರ್ವೋಚ್ಚ ನ್ಯಾಯಾಧೀಶರಿಗೆ 18 ಮಾಧ್ಯಮ ಸಂಘಟನೆಗಳ ಮನವಿ... ಪುಟ 10 ರಿಂದ

ಅಡ್ಡಿಯುಂಟು ಮಾಡುತ್ತದೆ. ಸುಪ್ರೀಂ ಕೋರ್ಟ್ ಸ್ವತಃ ಗಮನಿಸಿದಂತೆ (ಪೆಗಾಸಸ್ ವಿಷಯದಲ್ಲಿ), ಮೂಲಗಳ ರಕ್ಷಣೆಯು ಮಾಧ್ಯಮದ ಸ್ವಾತಂತ್ರ್ಯದ "ಪ್ರಮುಖ ಮತ್ತು ಅಗತ್ಯ ಅನುವರ್ತಿ" ಆಗಿದೆ. ಆದರೆ ಲ್ಯಾಪ್‌ಟಾಪ್‌ಗಳು ಮತ್ತು ಫೋನ್‌ಗಳು ಈಗ ಅಧಿಕೃತ ವ್ಯವಹಾರ ನಡೆಸಲು ಬಳಸುವ ಅಧಿಕೃತ ಸಾಧನಗಳಷ್ಟೇ ಆಗಿ ಉಳಿದಿಲ್ಲ. ಅವು ಮೂಲಭೂತವಾಗಿ ವ್ಯಕ್ತಿಯ ವಿಸ್ತರಣೆಯೇ ಆಗಿಬಿಟ್ಟಿವೆ. ಈ ಸಾಧನಗಳು ನಮ್ಮ ಜೀವನದಲ್ಲಿ ಸಂಪೂರ್ಣವಾಗಿ ಸಮಗ್ರೀಕರಣಗೊಂಡಿವೆ ಮತ್ತು ಅವು ಸಂವಹನದಿಂದ ಹಿಡಿದು ಛಾಯಾಚಿತ್ರಗಳವರೆಗೆ ಕುಟುಂಬ ಮತ್ತು ಸ್ನೇಹಿತರೊಂದಿಗೆ ಸಂಭಾಷಣೆಗಳ ವರೆಗೆ ಮುಖ್ಯ ವೈಯಕ್ತಿಕ ಮಾಹಿತಿಯನ್ನು ಹೊಂದಿರುತ್ತವೆ. ಇಂತಹ ಸಂಗತಿಗಳೆಲ್ಲ ತನಿಖಾ ಸಂಸ್ಥೆಗಳಿಗೆ ಲಭ್ಯವಾಗಬೇಕು ಎಂಬುದಕ್ಕೆ ಯಾವುದೇ ಕಾರಣ ಅಥವಾ ಸಮರ್ಥನೆ ಇಲ್ಲ.

2. **ಪತ್ರಕರ್ತರ ವಿಚಾರಣೆಗೆ ಮತ್ತು ಜಪ್ತಿಗೆ, ಇವುಗಳು ನಿಜವಾದ ಅಪರಾಧಕ್ಕೆ ಯಾವುದೇ ಸಂಬಂಧವಿಲ್ಲದಂತೆ ಗಾಳಿಹಾಕುವ ಅಭಿಯಾನಗಳಾಗದಂತೆ ಖಚಿತಪಡಿಸಲು ಮಾರ್ಗಸೂಚಿಗಳನ್ನು ವಿಕಾಸಗೊಳಿಸಬೇಕು.**
3. **ಪತ್ರಕರ್ತರ ಪತ್ರಕಾರಿತೆಯ ಕೆಲಸಗಳ ವಿರುದ್ಧ ತನಿಖೆಗಳಲ್ಲಿ ಪ್ರಭುತ್ವದ ಏಜೆನ್ಸಿಗಳು ಮತ್ತು ವೈಯಕ್ತಿಕವಾಗಿ ಅಧಿಕಾರಿಗಳು ಕಾನೂನನ್ನು ಮೀರಿ ಹೋಗುತ್ತಿದ್ದಾರೆ ಅಥವಾ ಅಸ್ಪಷ್ಟ ಮತ್ತು ಹೇಗೆ ಬೇಕಾದರೂ ವ್ಯಾಖ್ಯಾನ ಮಾಡಬಹುದಾದ ತನಿಖೆಗಳ ಮೂಲಕ ಉದ್ದೇಶಪೂರ್ವಕವಾಗಿ ನ್ಯಾಯಾಲಯಗಳನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದು ಕಂಡು ಬಂದಾಗ ಅವರನ್ನು ಉತ್ತರದಾಯಿಯಾಗಿ ಮಾಡಲು ಮಾರ್ಗಗಳನ್ನು ಕಂಡುಕೊಳ್ಳಬೇಕು.**

ನಾವು, ಕೆಳಗೆ ಸಹಿ ಮಾಡಿದವರು, ಸಾಕಷ್ಟು ಚಿಂತನೆ ಮತ್ತು ಯೋಚನೆಯ ನಂತರವೇ ತಮ್ಮ ಸನ್ನಿಧಾನಕ್ಕೆ ಈ ಪತ್ರವನ್ನು ಬರೆಯುತ್ತಿದ್ದೇವೆ.

ಕಳೆದ ಕೆಲವು ವರ್ಷಗಳಲ್ಲಿ ಪ್ರಭುತ್ವದಿಂದ ಮುಕ್ತ ಪತ್ರಿಕಾ ಮಾಧ್ಯಮದ ಮೇಲೆ ದಾಳಿಗಳು ನಡೆದಾಗ ನ್ಯಾಯಾಂಗ ಮಧ್ಯಪ್ರವೇಶ ಅಗತ್ಯವಾದ ಹಲವು ಪ್ರಕರಣಗಳು ಸಂಭವಿಸಿವೆ, ಮತ್ತು ನಾವು ಅಂತಹ ಪ್ರಕರಣಗಳ ಬಗ್ಗೆ ಕೇಳುವುದನ್ನು ಮುಂದುವರೆಸುತ್ತೇವೆ. ಆದರೆ ಕಳೆದ 24 ಗಂಟೆಗಳಲ್ಲಿನ ಬೆಳವಣಿಗೆಗಳಿಂದಾಗಿ, ಇವನ್ನು ಪರಿಗಣನೆಗೆ ತಗೊಂಡು ಮಧ್ಯಪ್ರವೇಶಿಸಬೇಕೆಂದು, ಇಲ್ಲವಾದರೆ ಬಹಳ ತಡವಾಗಿ ಬಿಟ್ಟು ನಿರಂಕುಶಾಧಿಕಾರದ ಪೋಲೀಸ್ ಪ್ರಭುತ್ವ ಸಾಮಾನ್ಯ ಸಂಗತಿಯಾಗಿ ಬಿಡಬಹುದಾದ್ದರಿಂದ, ತಮ್ಮ ಆತ್ಮಸಾಕ್ಷಿಗೆ ಮನವಿ ಮಾಡುವುದನ್ನು ಬಿಟ್ಟು ನಮ್ಮ ಮುಂದೆ ಅನ್ಯಮಾರ್ಗವಿಲ್ಲದಂತಾಗಿದೆ.

ಪತ್ರಕರ್ತರು ಮತ್ತು ಸುದ್ದಿ ತಲುಪಿಸುವ ವೃತ್ತಿಯವರಾಗಿ, ನಾವು ಯಾವುದೇ ಪ್ರಾಮಾಣಿಕ ತನಿಖೆಗೆ ಮತ್ತು ಅದರೊಂದಿಗೆ ಸಹಕರಿಸಲು ಸದಾ ಸಿದ್ಧರಿದ್ದೇವೆ. ಆದರೆ ತಾತ್ಪೂರ್ತಿಕ, ಬೇಕಾಬಿಟ್ಟಿ ಜಪ್ತಿಗಳನ್ನು ಮತ್ತು ವಿಚಾರಣೆಗಳನ್ನು ಖಂಡಿತವಾಗಿಯೂ ತಾನು 'ಪ್ರಜಾಪ್ರಭುತ್ವದ ತಾಯಿ' ಎಂಬ ಪ್ರಚಾರವನ್ನು ಆರಂಭಿಸಿರುವ ದೇಶದಲ್ಲೇನು, ಯಾವುದೇ ಪ್ರಜಾಸತ್ತಾತ್ಮಕ ದೇಶದಲ್ಲಿಯೂ ಸ್ವೀಕಾರಾರ್ಹವೆಂದು ಪರಿಗಣಿಸಲು ಸಾಧ್ಯವಿಲ್ಲ."

ಬದಲಾವಣೆಯೊಂದಿಗೆ, ಸಾಮಾನ್ಯವಾಗಿ ಭೂಮಿಯನ್ನು ಬಳಸುವ ಉದ್ದೇಶವೂ ಬದಲಾಗುತ್ತದೆ, ಹೆಚ್ಚಾಗಿ (ಸಣ್ಣ ಮಾಲೀಕರ ಕಡೆಯಿಂದ) ಬಳಕೆಗಾಗಿ ಉತ್ಪಾದನೆಯಿಂದ (ಯಾರ ಕೈಗಳಿಗೆ ಭೂಮಿ ಹಾದುಹೋಗಿದೆಯೋ ಅವರ ಕಡೆಯಿಂದ) ಪೂರ್ಣ–ಪ್ರಮಾಣದ ಸರಕು ಉತ್ಪಾದನೆಯತ್ತ ಬದಲಾಗುತ್ತದೆ.

ಮೂರು ಕುಖ್ಯಾತ ಕೃಷಿ ಕಾನೂನುಗಳನ್ನು ಇಂತಹುದೇ ಉದ್ದೇಶಗಳ ಸಾಧನೆಗೆಂದು ತರಲಾಗಿತ್ತು, ಅಂದರೆ. ಸ್ವಂತ ಬಳಕೆಗಾಗಿ, ಅಥವಾ ಭಾರತೀಯ ಆಹಾರ ನಿಗಮಕ್ಕೆ ಮಾರಾಟದ ಮೂಲಕ ರಾಷ್ಟ್ರೀಯ ಬಳಕೆಗಾಗಿ ಆಹಾರ ಧಾನ್ಯಗಳನ್ನು ಉತ್ಪಾದಿಸುವುದನ್ನು ಬಿಟ್ಟು, ಮುಂದುವರೆದ ಬಂಡವಾಳಶಾಹಿ ದೇಶಗಳಿಗಾಗಿ ವಾಣಿಜ್ಯ ಬೆಳೆಗಳನ್ನು ಉತ್ಪಾದಿಸುವ ಕಡೆಗೆ ಭೂ–ಬಳಕೆಯನ್ನು ಬದಲಾಯಿಸುವ ಉದ್ದೇಶವನ್ನು ಹೊಂದಿದ್ದವು. ಈಗ, ಅರಣ್ಯ ಸಂರಕ್ಷಣಾ ಕಾಯಿದೆಯ ತಿದ್ದುಪಡಿಯು ಅದನ್ನೇ ಮಾಡಲು ಪ್ರಯತ್ನಿಸುತ್ತಿದೆ: ಭೂ–ಬಳಕೆಯನ್ನು ಅರಣ್ಯದಿಂದ ರಿಯಲ್ ಎಸ್ಟೇಟ್ ಅಥವಾ ಮುಂದುವರೆದ ದೇಶಗಳ ಅಥವಾ ದೇಶೀಯ ಶ್ರೀಮಂತರ ಬೇಡಿಕೆಗಳ ಸರಕುಗಳತ್ತ ತಿರುಗಿಸುವುದು, ಅತ್ತ ಅರಣ್ಯ–ಅವಲಂಬಿತ ಜನರನ್ನು ಪೋಷಿಸುವ ಉತ್ಪನ್ನಗಳು ಅವರಿಗೆ ಇಲ್ಲದಂತೆ ಮಾಡುವುದು.

ಅನು:ಕೆ.ವಿ.

ಕೊನೆಯ ಹೀರೋಗಳು....... ಪುಟ 16 ರಿಂದ

ಘೋಷಣೆಯ ಬದಲಾಗಿ 'ಬ್ರಿಟಾನಿಯಾ ಮುರ್ದಾಬಾದ್, ಹಿಂದೂಸ್ತಾನ ಜಿಂದಾಬಾದ್' ಎಂದು ಘೋಷಣೆ ಕೂಗಿ ಛಡಿ ಏಟುಗಳನ್ನು ತಿಂದ ಬಾಲಕ, ಶಹೀದ್ 'ಭಗತ್ ಸಿಂಗ್' ಹುಟ್ಟಿ ಬೆಳೆದು ಹುತಾತ್ಮರಾದ ಅದೇ ಪಂಜಾಬ್ ಪ್ರಾಂತದ, ಅದೇ ಭಗತ್ ಸಿಂಗ್‌ರ ಹೋರಾಟ ಸ್ಫೂರ್ತಿಯ ಮತ್ತು ಅದೇ ಹೆಸರಿನ 'ಭಗತ್ ಸಿಂಗ್ ಜುಗ್ಗೀಯ' ಜೀವನ ಕಥನ ಇಲ್ಲಿದೆ.

ಸ್ವಾತಂತ್ರ್ಯ ಚಳುವಳಿಗಳ ನಡುವೆ ಸಮನ್ವಯ ಸಾಧಿಸಿದ ದಲಿತ ಮುಖಂಡ

ರಾಜಸ್ತಾನದ ಅಜ್ಮೀರನ್ನು ಮುಖ್ಯ ನೆಲೆಮಾಡಿಕೊಂಡು ಸ್ವಾತಂತ್ರ್ಯ ಚಳುವಳಿಗೆ ಅಮೂಲ್ಯ ಕಾಣಿಕೆ ನೀಡಿದ ದಲಿತ ನಾಯಕ ಶೋಭಾರಾಮ್ ಗೆಹೆರ್ವರ್. ಅವರು ಮೂಲತಃ ಗಾಂಧಿವಾದಿಯಾಗಿದ್ದು, ಅದೇ ಸಮಯದಲ್ಲಿ ಅಂಬೇಡ್ಕರ್ ಅಭಿಮಾನಿಯೂ ಆಗಿದ್ದರು. ಭಗತ್ ಸಿಂಗ್ ಮತ್ತು ಚಂದ್ರಶೇಖರ್ ಅಜಾದರು ಮರುಸ್ಥಾಪಿಸಿದ 'ಹಿಂದೂಸ್ತಾನ ಸೋಷಿಯಲಿಸ್ಟ್ ರಿಪಬ್ಲಿಕ್ ಅಸೋಸಿಯೇಷನ್'ನಲ್ಲಿ, ಚಂದ್ರಶೇಖರ್ ಅಜಾದರೊಂದಿಗೆ ಕೆಲಸ ಮಾಡಿದ ಕ್ರಾಂತಿಕಾರಿ ಸಹ ಇವರು. ಗಾಂಧಿ, ಅಂಬೇಡ್ಕರ್, ಭಗತ್ ಸಿಂಗ್ ಮುಂತಾದವರ ಮೂರೂ ಸ್ವಾತಂತ್ರ್ಯ ಚಳುವಳಿಯ ಮೂರೂ ಧಾರೆಗಳಲ್ಲಿಯೂ ಸಂಪರ್ಕ ಹೊಂದಿದ್ದು ಮೂರೂ ಧಾರೆಗಳನ್ನು ಸಮನ್ವಯಗೊಳಿಸಿಕೊಂಡು ಸ್ವಾತಂತ್ರ್ಯ ಆಂದೋಲನಕ್ಕೆ ಕೊಡುಗೆ ನೀಡಿದ ವಿಶಿಷ್ಟ ನಾಯಕರು ಇವರು. ಅದು ಹೇಗೆ ಎಂಬುದನ್ನು ಪುಸ್ತಕ ಓದಿಯೇ ತಿಳಿಯಬೇಕು.

ಕ್ರಾಂತಿಕಾರಿಗಳಿಗೆ ಊಟ ಕೊಟ್ಟ ಸಾಹಸಿ

ಪಶ್ಚಿಮ ಬಂಗಾಳದ 'ಪುರುಲಿಯಾ ಕ್ರಾಂತಿ'ಯ ಕ್ರಾಂತಿಕಾರಿಗಳಿಗೆ ಆಹಾರ ಒದಗಿಸಿದ ದಿಟ್ಟ ಮಹಿಳೆ ಬಬಾನಿ ಮಹತೋ, ಐತಿಹಾಸಿಕ ತೆಲಂಗಾಣ ಹೋರಾಟದ ಮಲ್ಲು ಸ್ವರಾಜ್ಯಂರ ಬದುಕಿನ ರೋಮಾಂಚನಕಾರಿ ಹೋರಾಟದ ವಿವರಗಳು, ಬ್ರಿಟೀಷರ ಕಾಲದಲ್ಲಿ ತಮಿಳುನಾಡಿನ ಮಧುರೈ, ತಿರುನಲ್ವೇಲಿ, ರಾಜಮುಂಡ್ರಿ, ಕಣ್ಣೂರು ಮುಂತಾದ ಜೈಲುಗಳಲ್ಲಿ ಶಿಕ್ಷೆ ಅನುಭವಿಸಿದ, ಹಾಗೂ ಸ್ವಾತಂತ್ರ್ಯದ ನಂತರವೂ ಜನಚಳುವಳಿಗಳ ನೇತಾರರಾಗಿ ಅದಕ್ಕಿಂತಲೂ ಹೆಚ್ಚು ಜೈಲುವಾಸಗಳನ್ನು ಅನುಭವಿಸಿದ ಕ್ರಾಂತಿಕಾರಿ ಕಮ್ಯೂನಿಸ್ಟ್ ಚಳುವಳಿಯ ಮುಖಂಡ ಎನ್. ಶಂಕರಯ್ಯರ ಬದುಕು ಹೋರಾಟದ ವಿವರಗಳು ಇಲ್ಲಿವೆ. ಕರ್ನಾಟಕದ ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರ, ಖ್ಯಾತ ಪತ್ರಕರ್ತ ಎಚ್.ಎಸ್. ದೊರೆಸ್ವಾಮಿಯವರ ಬದುಕು ಮತ್ತು ಹೋರಾಟಗಳನ್ನೂ ಈ ಕೃತಿಯಲ್ಲಿ ಕಟ್ಟಿಕೊಡಲಾಗಿದೆ. ಇನ್ನೂರ ಐವತ್ತೆರಡು ಪುಟಗಳ ಈ ಪುಸ್ತಕದಲ್ಲಿ ಇನ್ನೂ ಎಷ್ಟೋ ಮಹತ್ವದ ಮತ್ತು ಸ್ವಾರಸ್ಯಕರ ಸಂಗತಿಗಳಿವೆ. ಎಲ್ಲ ಪುಸ್ತಕಾಸಕ್ತರ ಸಂಗ್ರಹದಲ್ಲಿ ಇರಬೇಕಾದ ಪುಸ್ತಕ ಇದು. ಕೊಳ್ಳಿ, ಓದಿ. ಓದಿಸಿ.

ಲೇಖಕರು ಪಿ. ಸಾಯಿನಾಥ್, ಕನ್ನಡಕ್ಕೆ: ಜಿ.ಎನ್.ಮೋಹನ್. ಪ್ರಕಾಶಕರು: 'ಬಹುರೂಪಿ', ಬೆಂಗಳೂರು. ಮುಖಬೆಲೆ: 300/– ರೂಪಾಯಿಗಳು. ಸಂಪರ್ಕಕ್ಕೆ ಮೊಬೈಲ್: 7019182729

NEW No. MAG(3)/NPP/205/2021-2022
JANASHAKTHI KANNADA VARA PATRIKE October 9-15, 2023 Price: Rs. 10/- Date of Publication: 6 October 2023 RNI No. KARKAN /2006/17926 Posted on 7-10-2023
Posted at BG PSO, BG - 560026 **Posted at Periodical Rate -** Rs. 2

ಕೊನೆಯ ಹೀರೋಗಳು
ಭಾರತ ಸ್ವಾತಂತ್ರ್ಯದ ಕಾಲಾಳು ಯೋಧರು

ಆರ್. ರಾಮಕೃಷ್ಣ

ಇದೊಂದು ವಿಶೇಷ ಪುಸ್ತಕ. ಈ ಪುಸ್ತಕದ ಒಂದೊಂದು ಅಧ್ಯಾಯವನ್ನು ಓದುತ್ತಾ ಹೋದಂತೆ ನೆನಪಾಗಿದ್ದು, 'ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು' ಎಂಬ ಸಿದ್ದಲಿಂಗಯ್ಯ ಅವರ ಪ್ರಸಿದ್ಧ ಕವನ. 'ಸ್ವಾತಂತ್ರ್ಯ ಗಂಗೆಯ ಸಾವಿರಾರು ತೊರೆಗಳು' ಎಂಬ ಪ್ರಸಿದ್ಧ ಪುಸ್ತಕ. ಹೌದು ಇದು ನಿಜಕ್ಕೂ ವಿಶೇಷವಾದ ಪುಸ್ತಕ. ಗ್ರಾಮೀಣ ಭಾರತದ ಸಂಕಟ, ನೋವು ದುಃಖಗಳನ್ನು ಹೆಕ್ಕಿ ತಂದು ದೇಶದ ಪತ್ರಿಕೋದ್ಯಮದಲ್ಲಿ ಹೊಸ ಸಂಚಲನವನ್ನು ತಂದ ಖ್ಯಾತ ಪತ್ರಕರ್ತ ಪಿ. ಸಾಯಿನಾಥ್ ಅವರು ಈ ಪುಸ್ತಕವನ್ನು ಬರೆದಿದ್ದಾರೆ. ಕರ್ನಾಟಕ ಖ್ಯಾತ ಪತ್ರಕರ್ತರು, ಕವಿ-ಬರಹಗಾರರೂ ಆದ ಜಿ.ಎನ್. ಮೋಹನ್ ಅವರು ಈ ಪುಸ್ತಕವನ್ನು ಸೊಗಸಾಗಿ ಕನ್ನಡಕ್ಕೆ ತಂದು ಕೊಟ್ಟಿದ್ದಾರೆ.

"ನಮ್ಮ ದೇಶಕ್ಕೆ 'ಉಪವಾಸ'ದಿಂದ ಸ್ವಾತಂತ್ರ್ಯ ಬರಲಿಲ್ಲ, ಉಪವಾಸದಿಂದ ಬರುವುದೇನಾದರೂ ಇದ್ದರೆ ಅದು 'ಗ್ಯಾಸ್ಟ್ರಿಕ್' ಮಾತ್ರ" ಎಂಬ ಕುಹಕದ ಮಾತುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಇತ್ತೀಚಿನ ದಿನಗಳಲ್ಲಿ ಧಾರಾಳವಾಗಿ ಕಂಡು ಬರುತ್ತವೆ. ಅದು ಮಹಾತ್ಮ ಗಾಂಧೀಜಿಯವರ 'ಅಹಿಂಸಾ ಮಾರ್ಗ'ದ ಹೋರಾಟಗಳನ್ನು ಗೇಲಿ ಮಾಡುವ ಮಾತು. ಹೀಗೆ ಗೇಲಿ ಮಾಡುವವರಲ್ಲಿ ಹೆಚ್ಚಿನವರು ಬಲಪಂಥೀಯರು. ಇನ್ನೂ ನೇರವಾಗಿ ಹೇಳುವುದಾದರೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್.ಎಸ್.ಎಸ್.) ಹಾಗೂ ಹಿಂದೂ ಮಹಾಸಭಾ ಮುಂತಾದ 'ಹಿಂದುತ್ವವಾದಿ' ಸಂಘಟನೆಗಳ ಬೆಂಬಲಿಗರು. ದುರಂತ ಮತ್ತು ವೈರುಧ್ಯದ ಸಂಗತಿ ಎಂದರೆ, ಈ ಎರಡೂ ಸಂಘಟನೆಗಳಿಗೆ ಹೇಳಿಕೊಳ್ಳಲು ಸಹ ಒಬ್ಬರೇ ಒಬ್ಬರು ಸ್ವಾತಂತ್ರ್ಯ ಹೋರಾಟಗಾರರು ಇಲ್ಲ.!!

ಭಾರತ ದೇಶಕ್ಕೆ ಬರಿಯ 'ಉಪವಾಸ'ಗಳಿಂದ ಸ್ವಾತಂತ್ರ್ಯ ಬರಲಿಲ್ಲ ಎಂಬುದು ನಿಜ. ಮಹಾತ್ಮ ಗಾಂಧಿ ಗಾಂಧೀಜಿಯವರ 'ಅಹಿಂಸೆ' ಎಂಬ 'ಲಕ್ಷ್ಮಣ ರೇಖೆ'ಯ ಮಿತಿಯನ್ನು ದಾಟಿದ ಅಸಂಖ್ಯ ಹೋರಾಟಗಳು, ಭಾರತದ ಮಹಾ ಸ್ವಾತಂತ್ರ್ಯ ಸಂಗಾಮದಲ್ಲಿ ದಾಖಲಾಗಿವೆ ಎಂಬುದೂ ಸಹ ನಿಜ. ಒಂದೇ ಪ್ರವೇಶ ಮಾರ್ಗವಿದ್ದ ಅಮೃತಸರದ ಆ 'ಜಲಿಯನ್ ವಾಲಾಭಾಗ್' ಮೈದಾನದಲ್ಲಿ ಸೇರಿದ್ದ ಸಾವಿರಾರು ಸಂಖ್ಯೆಯ, ಶಸ್ತ್ರವಿಲ್ಲದ ಬರಿಗೈ ಜನರ ಎದೆಗೆ ಗುಂಡಿಕ್ಕುವ 'ಡಯರ್'ನಂತಹ ಪೋಲಿಸ್ ಅಧಿಕಾರಿಯ 'ಬಲ' ಹೊಂದಿದ್ದ ಬ್ರಿಟೀಷರೇ ಬೆಚ್ಚಿ ಬೀಳುವಂತೆ, ಹಿಮ್ಮೆಟ್ಟುವಂತೆ ಮಾಡಿದ ದಿಟ್ಟ ಹೋರಾಟಗಳು ಸಹ ಎಣಿಕೆಗೆ ಸಿಗದಷ್ಟಿವೆ. ಲಕ್ಷ ಲಕ್ಷ ಜನಸಾಮಾನ್ಯರನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಸೆಳೆದ ಮಹಾತ್ಮ ಗಾಂಧೀಜಿಯವರ 'ಅಹಿಂಸಾ' ಚಳುವಳಿಗಳು ಹಾಗೂ 'ಅಹಿಂಸೆ'ಯ ಗೆರೆದಾಟಿದ ಕೆಚ್ಚೆದೆಯ ಕ್ರಾಂತಿಕಾರಿ ಚಳುವಳಿಗಳು ಒಂದಕ್ಕೊಂದು ಪೂರಕವಾಗಿಯೇ ಪರಸ್ಪರ ಬಲ ತುಂಬಿದವು ಎಂದರೂ ತಪ್ಪಿಲ್ಲ. ಹೀಗಾಗಿ ಸ್ವಾತಂತ್ರ್ಯ ಹೋರಾಟದ ತಮ್ಮದೇ ವಿಶಿಷ್ಟ ಮಾರ್ಗಗಳನ್ನು ರೂಪಿಸಿಕೊಂಡ ಅಸಂಖ್ಯಾತ ದೇಶಪ್ರೇಮಿಗಳು ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕೊಟ್ಟ ಕೊಡುಗೆಗಳೇನು ಕಡಿಮೆಯಲ್ಲ. ದುರಂತವೆಂದರೆ ಇಂತಹ ಎಷ್ಟೋ ಧೀಮಂತ ಹೋರಾಟಗಳು 'ಅಧಿಕೃತ ಇತಿಹಾಸ ದಾಖಲೆ ಪುಸ್ತಕ'ಗಳಲ್ಲಿ ಸರಿಯಾಗಿ ದಾಖಲಾಗಿಯೇ ಇಲ್ಲ ಎಂಬುದು.


ಹೀಗೆ ಇತಿಹಾಸದ ಅಧಿಕೃತ 'ದಾಖಲೆ'ಗಳಲ್ಲಿ 'ದಾಖಲಾಗದೇ' ಹೊರಗೇ ಬರಿಯ ಜನಮನದಲ್ಲೇ ಉಳಿದ ಈ ಕೆಚ್ಚೆದೆಯ ಹೋರಾಟಗಳನ್ನು ದಾಖಲಿಸುತ್ತದೆ ಎನ್ನುವುದೇ ಈ 'ಕೊನೆಯ ಹೀರೋಗಳು' ಎನ್ನುವ ಪುಸ್ತಕದ ಹೆಗ್ಗಳಿಕೆ.

ಇಲ್ಲಿ ಕುಗ್ರಾಮಗಳಲ್ಲಿ ವಾಸಿಸುವ ಗ್ರಾಮೀಣ ಜನರಿದ್ದಾರೆ. ಕಾಡಿನಲ್ಲಿ, ಕಾಡಿನ ಅಂಚಿನಲ್ಲಿ ವಾಸಿಸುವ ಆದಿವಾಸಿಗಳಿದ್ದಾರೆ. ದಲಿತರು, ಹಿಂದುಳಿದವರು, ಎಡಪಂಥೀಯರು, ಅಂಬೇಡ್ಕರ್‌ವಾದಿಗಳು, ಗಾಂಧಿವಾದಿಗಳೂ ಇದ್ದಾರೆ. ಮಹಿಳೆಯರು-ಪುರುಷರು ಇದ್ದಾರೆ. ಹಿಂದೂಗಳು-ಮುಸ್ಲಿಮರು-ಸಿಖ್ಖರು ಮೊದಲಾದವರು ಇದ್ದಾರೆ.

ನಡುಬೀದಿಯಲ್ಲಿ ಹೆಂಡತಿಗೆ ಬಡಿದ ಪ್ರಸಂಗವು..

ಮಹಾರಾಷ್ಟ್ರದ ಸಾಂಗ್ಲಿಯ ಪ್ರದೇಶದ ಭವಾನಿನಗರ ಪೋಲಿಸ್ ಠಾಣೆಯ ಎದುರು ಒಬ್ಬ ಮನುಷ್ಯ ತನ್ನ ಹೆಂಡತಿಗೆ ಮನ ಬಂದಂತೆ ಥಳಿಸುತ್ತಿರುತ್ತಾನೆ. ಆ ಸಂದರ್ಭದಲ್ಲಿ ಠಾಣೆಯಲ್ಲಿದ್ದ ಕೆಲವೇ ಪೋಲಿಸರು ಠಾಣೆಯಿಂದ ಹೊರಬಂದು ಅಲ್ಲಿ ನಡೆಯುತ್ತಿದ್ದ ಗಲಾಟೆಯ ಕಡೆಗೆ ಗಮನ ಕೊಡುತ್ತಾರೆ. ಅವರು ಠಾಣೆಯಿಂದ ಹೊರ ಬಂದದ್ದೆ ತಡ, ಅತ್ತ ಕಡೆ ಯಾರೂ ಇಲ್ಲದ ಪೋಲಿಸ್ ಠಾಣೆಯಲ್ಲಿದ್ದ ರೈಫಲ್‌ಗಳು, ಮದ್ದು ಗುಂಡುಗಳು ಲೂಟಿಯಾಗುತ್ತವೆ. ಇಲ್ಲಿ ಗಂಡನು ಹೆಂಡತಿಗೆ ಹೊಡೆಯುವ ಈ ಪ್ರಸಂಗ, ನಿಜವಾದದ್ದಲ್ಲ. ಸ್ವಾತಂತ್ರ್ಯ ಹೋರಾಟಗಾರರು ಅತ್ಯಂತ ವ್ಯವಸ್ಥಿತವಾಗಿ ಯೋಜಿಸಿದ ನಾಟಕ.

ಇಲ್ಲಿ ಹೊಡೆತ ತಿಂದ ಮಹಿಳೆ ಹೌಸಾಬಾಯಿ ಪಾಟೀಲ್. (ಪೋಲಿಸರಿಗೆ ಅನುಮಾನ ಬರಬಾರದು ಎಂಬ ಕಾರಣಕ್ಕೆ ಆಕೆ ನಿಜಕ್ಕೂ ಗಂಭೀರ ಹೊಡೆತವನ್ನೇ ತಿಂದಿದ್ದಾರೆ.) ಈ ಹೌಸಾಬಾಯಿ ಸ್ವಾತಂತ್ರ್ಯ ಹೋರಾಟಗಾರ ನಾನಾ ಪಾಟೀಲರ ಮಗಳು. ನಾನಾ ಪಾಟೀಲ್, ಬ್ರಿಟೀಷ್ ಪ್ರಭುತ್ವಕ್ಕೆ ಪ್ರತಿಯಾಗಿ ರೈತರು-ಕಾರ್ಮಿಕರು ಸೇರಿ ರಚಿಸಿಕೊಂಡ ಪರ್ಯಾಯ ಸರಕಾರದ ಮುಖ್ಯಸ್ಥರು. ಇವರದು 'ತೂಫಾನ್ ಸೇನೆ'. 1943 ರ ಸಮಯದಲ್ಲಿ ಈ ಸೇನೆಯು ಆ ಪ್ರಾಂತದ ಸು. 600 ಹಳ್ಳಿಗಳಲ್ಲಿ ಈ ಸ್ಥಳೀಯ ಸರಕಾರವನ್ನು ರಚಿಸಿತ್ತು. ಈ ಇತಿಹಾಸವೇನೋ ದಾಖಲಾಗಿದೆ. ಆದರೆ ಹೌಸಾಬಾಯಿಯವರ ಸಾಹಸಗಳು ಅಧಿಕೃತ ಇತಿಹಾಸದಲ್ಲಿ ದಾಖಲಾಗಿಲ್ಲ.



ಮೂರನೆ ವಯಸ್ಸಿಗೆ ತಾಯಿಯನ್ನು ಕಳೆದುಕೊಂಡ ಹೌಸಾಬಾಯಿಯ ತಂದೆ ಭೂಗತ ಹೋರಾಟಗಾರ!! ಈ ಬಾಲಕಿಯ ಬಾಲ್ಯ ಹೇಗಿದ್ದಿರಬಹುದು? ಊಹಿಸಿಕೊಳ್ಳಬೇಕು. ಮುಂದೆ ಬ್ರಿಟೀಷ್ ಸರಕಾರ ಈಕೆಯ ಕುಟುಂಬದ ಹೊಲವನ್ನು ಕಬ್ಜಾ ಮಾಡಿಕೊಳ್ಳುತ್ತದೆ. 10*10 ಅಳತೆಯ ಒಂದು ಕೋಣೆ ಬಿಟ್ಟು ಈ ಕುಟುಂಬದ ಮನೆಯನ್ನೂ ಮುಟ್ಟುಗೋಲು ಹಾಕಿಕೊಳ್ಳುತ್ತದೆ. ಎತ್ತಿನ ಬಂಡಿಯನ್ನು ಬಾಡಿಗೆಗೆ ಓಡಿಸಿ ಈ ಕುಟುಂಬ ಬದುಕು ಸಾಗಿಸುತ್ತದೆ. ಉಡಲು-ಉಣ್ಣಲು ಕಡುಕಷ್ಟ ಎಂಬ ಪರಿಸ್ಥಿತಿಯಲ್ಲೂ ಹೌಸಾಬಾಯಿ ಮತ್ತು ಕುಟುಂಬ ಹೋರಾಟದ ಕೆಚ್ಚು ಬಿಟ್ಟುಕೊಡುವುದಿಲ್ಲ. ಸು. 500 ಕ್ಕೂ ಹೆಚ್ಚು ಜನ ಕಾಡಿನಲ್ಲಿ ಅಡಗಿಕೊಂಡು ಹೋರಾಟ ನಡೆಸುವ ಈ ಚಳುವಳಿಯಲ್ಲಿ ಹೌಸಾಬಾಯಿ ಕ್ರಾಂತಿಕಾರಿಗಳ ನಡುವೆ ಮಾಹಿತಿದಾರಳಾಗಿ ಕೆಲಸ ಮಾಡುತ್ತಾರೆ. ಬ್ರಿಟೀಷ್ ಆಡಳಿತದ ಕೇಂದ್ರವಾದ ಡಾಕ್ ಬಂಗಲೆ, ಅಂಚೆ ಕಚೇರಿ ಮುಂತಾದವುಗಳಿಗೆ ಬೆಂಕಿ ಹಚ್ಚುವುದು, ಸರಕಾರದ ದಾಖಲೆಗಳನ್ನು ಸಾಗಿಸುವ ರೈಲು, ಬಸ್‌ಗಳ ಮೇಲೆ ದಾಳಿ ನಡೆಸುವುದು ಹೀಗೆ.. ಬ್ರಿಟೀಷರ ಆಡಳಿತಕ್ಕೆ ತಡೆ ಒಡ್ಡುವ, ಪ್ರತಿರೋಧ ತೋರುವ ಕ್ರಾಂತಿಕಾರಿ ಚಟುವಟಿಕೆಗಳಿಗೆ ಹೌಸಾಬಾಯಿಯವರದು ಪೂರಕ ಗುಪ್ತಚರ ಕೆಲಸ. ನಿಜ, ಹೌಸಾಬಾಯಿ ಜೈಲು ವಾಸವನ್ನು ಅನುಭವಿಸಿಲ್ಲ. ಆದರೆ ಅದಷ್ಟೆ ಕಾರಣಕ್ಕೆ ಆಕೆಯ ಸಾಹಸ ಹೋರಾಟಗಳು ದಾಖಲಾಗುವುದೇ ಇಲ್ಲ ಎಂದರೆ! ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿಯಲ್ಲಿ ಆಕೆಯ ಹೆಸರು ಸೇರುವುದಿಲ್ಲ ಎಂದರೆ ಹೇಗೆ? ಈ ಸ್ವಾತಂತ್ರ್ಯ ಹೋರಾಟಗಾರರು ತಮಗೆ ಕೇಳುತ್ತಿರುವುದು ಹೋರಾಟಗಾರರೆಂಬ ಮಾನ್ಯತೆಯನ್ನಷ್ಟೆ. ಪಿಂಚಣಿ ಅಥವಾ ಬೇರೆ ಏನೋ ಅಧಿಕಾರ, ಸ್ಥಾನಮಾನಗಳನ್ನಲ್ಲ ಎಂಬುದು ಸಹ ಗಮನಿಸಬೇಕು. ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಎಡಪಕ್ಷಗಳ ಹೋರಾಟಗಾರರು ಸರಕಾರದ 'ಪಿಂಚಣಿ'ಯನ್ನು ನಿರಾಕರಿಸಿದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ದೊಣ್ಣೆ ಹಿಡಿದು ಪೋಲಿಸರನ್ನು ಊರ ತುಂಬಾ ಅಟ್ಟಾಡಿಸಿದ 'ದೇಮಾ'

ದೇಮಾ ತಿ ಡೇ ಸಾಲಿಹಾನ್ ಒಬ್ಬ ಆದಿವಾಸಿ ಮಹಿಳೆ. ಒರಿಸ್ಸಾ ರಾಜ್ಯದ 'ಸಾಲಿಹಾನ್' ಆಕೆಯ ಊರು. ಬ್ರಿಟೀಷ್ ಸರಕಾರವು ಅರಣ್ಯವಾಸಿಗಳ ಅರಣ್ಯ ಉತ್ಪನ್ನಗಳ ಮೇಲಿನ ಹಕ್ಕುಗಳನ್ನು ಮೊಟಕುಗೊಳಿಸಿ ಆದಿವಾಸಿಗಳ ಮೇಲೆ ಅರಣ್ಯ ತೆರಿಗೆ ವಿಧಿಸಿದಾಗ ಆದಿವಾಸಿಗಳು ಬ್ರಿಟೀಷ್ ಪ್ರಭುತ್ವದ ವಿರುದ್ಧ ಸಿಡಿದೆದ್ದು ನಡೆಸಿದ ಕ್ರಾಂತಿಕಾರಿ ಹೋರಾಟದ ಒಬ್ಬ ಕಾಲಾಳು ಈ ದೇಮಾ ತಿ ಡೇ ಸಾಲಿಹಾನ್. ಬ್ರಿಟೀಷ್ ಸರಕಾರದವರು ಗ್ರಾಮದ ಮೇಲೆ ದಾಳಿ ನಡೆಸುತ್ತಾರೆ. ಗ್ರಾಮಕ್ಕೆ ಬೆಂಕಿ ಹಚ್ಚುತ್ತಾರೆ. ಧಾನ್ಯ ಲೂಟಿ ಮಾಡುತ್ತಾರೆ. ಆದಿವಾಸಿಗಳ ಮೇಲೆ ಅನಾಗರೀಕ ಹಲ್ಲೆ ನಡೆಸುತ್ತಾರೆ. ಬ್ರಿಟೀಷ್ ಪೋಲಿಸರ ದೌರ್ಜನ್ಯಕ್ಕೆ ತುತ್ತಾಗಿ ರಕ್ತದ ಮಡುವಿನಲ್ಲಿ ಬಿದ್ದಿದ್ದ ತನ್ನ ತಂದೆಯನ್ನು ಪೋಲಿಸರಿಂದ ರಕ್ಷಿಸಿ ದೂರಕ್ಕೆ ಹೊತ್ತೊಯ್ದ ಸಾಹಸಿ ಈಕೆ. ಈಕೆ ಶಸಸ್ತ್ರ ಪೋಲಿಸರನ್ನು ಎದುರಿಸಿದ್ದು ಊರಿನ ತುಂಬಾ ಅಟ್ಟಾಡಿಸಿದ್ದು ಬರಿ ದೊಣ್ಣೆಯ ಬಲದಿಂದ. ಮೈಮೇಲೆ ಎರಗಿ ಬರುವ ಬಲಿಷ್ಟ ಕಾಡು ಪ್ರಾಣಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಕೋಲುಗಳನ್ನೇ ಆಯುಧವಾಗಿ ಬಳಸುವುದು ಆದಿವಾಸಿಗಳಿಗೆ ಚೆನ್ನಾಗಿ ಗೊತ್ತು. ಅದೇ ಕೌಶಲ್ಯವನ್ನು ಮತ್ತು ಕಲೆಯನ್ನು ಈಕೆ ಪೋಲಿಸರ ವಿರುದ್ಧ ಬಳಸಿದ್ದು. ಇಷ್ಟು ಮಾತ್ರವಲ್ಲ ಇಡೀ ಊರಿಗೆ ಊರೇ ಬ್ರಿಟೀಷರ ವಿರುದ್ಧ ದಂಗೆ ಎದ್ದಿತು. ಇದು 'ಸಾಲಿಹಾನ್' ದಂಗೆ ಎಂದೇ ಖ್ಯಾತವಾಯಿತು.

ಸ್ವಾತಂತ್ರ್ಯದ ನಂತರ ಊರಿನಲ್ಲಿ ಈ ದಂಗೆಯ ನೆನಪಿಗಾಗಿ ಸ್ಮಾರಕವನ್ನು ನಿರ್ಮಿಸಲಾಗಿದೆ. ಆದರೆ ಸ್ಮಾರಕದಲ್ಲಿ ಎಲ್ಲಿಯೂ ದೇ ಮಾತಿ ಡೆ ಸಾಲಿಹಾನ್ ಹೆಸರು ಇಲ್ಲ. ಯಾಕೆಂದರೆ ದೇ ಮಾತಿ ಡೆ ಜೈಲುವಾಸ ಅನುಭವಿಸಿಲ್ಲ!!!

ರಕ್ತ ಚೆಲ್ಲಿದ ಕಥನ

1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಬ್ರಿಟೀಷ್ ಪೋಲಿಸರಿಂದ ಹೊಡೆತ ತಿಂದು ರಕ್ತ ಚೆಲ್ಲಿದ ಒರಿಸ್ಸಾ ಮೂಲದ ಬಾಜಿಮದ್, 1992 ರಲ್ಲಿ ಅಯೋಧ್ಯೆಯಲ್ಲಿ ಬಾಬರಿ ಮಸೀದಿ ಒಡೆದು ಹಾಕುವ ಸಂದರ್ಭದಲ್ಲಿಯೂ ಸೌಹಾರ್ದತೆಗಾಗಿ ಉಪವಾಸ ಸತ್ಯಾಗ್ರಹ ನಡೆಸಿ, ಬಲಪಂಥೀಯ ಕೋಮುವಾದಿಗಳಿಂದ ತಲೆಗೆ ಪೆಟ್ಟು ತಿಂದು ರಕ್ತ ಚೆಲ್ಲಿದ ವಿಷಾದನೀಯ ಜೀವನ ಕಥನ ಇಲ್ಲಿದೆ.

'ಬ್ರಿಟಾನಿಯಾ ಮುರ್ದಾಬಾದ್' ಎಂದು ಕೂಗಿ ಛಡಿ ಏಟು ತಿಂದ ಹನ್ನೊಂದರ ಬಾಲಕ!!

ಕೇವಲ ತನ್ನ ಹನ್ನೊಂದನೇ ವಯಸ್ಸಿನಲ್ಲಿ ಶಾಲೆಯಲ್ಲಿನ ಅಭಿನಂದನಾ ಸಮಾರಂಭದಲ್ಲಿ 'ಬ್ರಿಟಾನಿಯಾ ಜಿಂದಾಬಾದ್, ಹಿಟ್ಲರ್ ಮುರ್ದಾಬಾದ್' ಎಂಬ 'ಹೇಳಿಕೊಟ್ಟ' **ಪುಟ 15 ಕ್ಕೆ**

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**